ಶ್ರೀನಂಜುಂಡೇಶ್ವರಪ್ರಸನ್ನಃ.

ಶ್ರೀಮದ್ವ್ಯಾಸಮಹರ್ಷಿಪ್ರಣೀತ,

ಸ್ಕಾಂದಪುರಾಣಸ್ಥಿತ,

—:o:—

ಶ್ರೀಮದ್ಗರಳಪುರಮಹಾತ್ಮ್ಯವು

ಎಂಬ

ನಂಜನಗುಡಿಸ್ಥಳಮಹಾತ್ಮ್ಯವು.

ಅತ್ತಿನೂರುವೆಂಕಟಸುಬ್ಬಯ್ಯನವರಿಂದ

ಸಕಲಭಕ್ತಜನರಿಗೂಸುಲಭವಾಗಿತಿಳಿಯುವಂತೆ

ಕನ್ನಡದಿಂದ ಟೀಕಿಸಲ್ಪಟ್ಟು

ಹಂಗಳದ ಬ್ರಹ್ಮಶ್ರೀ ಯಜ್ಞಮೂರ್ತಿ

ಶಾಮೂಪಂಡಿತರವರೂ ಮತ್ತು

ಅ॥ ಶಾಮಣ್ಣನವರಿಂದಲು ಪ್ರಕಟಿಸಲ್ಪಟ್ಟಿತು,

ಬೆಂಗಳೂರು.

ಜರ್ವ ಮುದ್ರಾಕ್ಷರ ಶಾಲೆಯ ಪ್ರೊಪ್ರೈಟರಾದ

ಹರೀರಾಮ್ ಮಿಸ್ಸರ್ ರವರಿಂದ

ಮುದ್ರಿಸಲ್ಪಟಿತು.

೧೮೮೪.

ಇದರ ಕ್ರಯ ೧೨ ಆಣೆ.

ಶುಭಮಸ್ತು.

ಸಟೀಕಾ ಗರಳಪುರೀ ಮಾಹಾತ್ಮ್ಯ ಪ್ರಾರಂಭಃ.

ಶುಕ್ಲಾಂಬರಧರಂವಿಷ್ಣುಂಶಶಿವರ್ಣಂಚತುರ್ಭುಜಂ । ಪ್ರಸನ್ನವದನಂಧ್ಯಾಯೇತ್ಸರ್ವವಿಘ್ನೋಪಶಾಂತಯೇ ॥ ಅಭೀಪ್ಸಿತಾರ್ಥಸಿಧ್ಯರ್ಥಂಪೂಜಿತೋಯಸ್ಸುರೈರಪಿ । ಸರ್ವವಿಘ್ನಚ್ಛಿದೇತಸ್ಮೈಗಣಾಧಿಪತಯೇನಮಃ ॥ ವಾಗೀಶಾದ್ಯಾಸ್ಸುಮನಸಸ್ಸರ್ವಾರ್ಥಾನಾಮುಪಕ್ರಮೇ । ಯಂನತ್ವಾಕೃತಕೃತ್ಯಾಸ್ಸ್ಯುಸ್ತಂನಮಾಮಿಗಜಾನನಂ ॥ ವ್ಯಾಸಂವಸಿಷ್ಠನಪ್ತಾರಂಶಕ್ತೇಃಪೌತ್ರಮಕಲ್ಮಷಂ । ಪರಾಶರಾತ್ಮಜಂವಂದೇಶುಕತಾತಂತಪೋನಿಧಿಂ ॥ ವ್ಯಾಸಾಯವಿಷ್ಣುರೂಪಾಯವ್ಯಾಸರೂಪಾಯವಿಷ್ಣವೇ । ನಮೋವೈಬ್ರಹ್ಮನಿಧಯೇವಾಸಿಷ್ಠಾಯನಮೋನಮಃ ॥ ಪಾರಾಶರ್ಯಂಪರಮಪುರುಷಂವಿಶ್ವವೇದೈಕಯೋನಿಂವಿದ್ಯಾಧಾರಂವಿಪುಲಮತಿದಂವೇದವೇದಾಂತವೇದ್ಯಂ । ಶಶ್ವಚ್ಛಾಂತಂಶಮಿತವಿಷಯಂಶುದ್ಧಬುದ್ಧಿಂವಿಶಾಲಂ ವೇದವ್ಯಾಸಂವಿಮಲಯಶಸಂಸರ್ವದಾಹಂನಮಾಮಿ ॥ ಸುರಾಸುರೈಸ್ಸೇವಿತಪಾದಪಂಕಜಾಕರೇ ವಿರಾಜತ್ಕಮನೀಯಪುಸ್ತಕಾ । ವಿರಿಂಚಿಪತ್ನೀಕಮಲಾಸನ ಸ್ಥಿತಾಸರಸ್ವತೀನೃತ್ಯತುವಾಚಿಮೇಸದಾ ॥ ಮುನಯಃಶೌನಕಾದ್ಯಾಸ್ತು ನೈಮಿಶಾರಣ್ಯವಾಸಿನಃ । ಸತ್ರಮಾರೇಭಿರೇಕರ್ತುಂತತ್ರದ್ವಾದಶವಾರ್ಷಿಕಂ ॥ ೧ ॥ ತತಸ್ಸಮಾಯಯೌಸೂತಃಶ್ರುತ್ವಾಪೌರಾಣಿಕೋತ್ತಮಃ । ಋಷಯೋಭಾಗ್ಯವಾಂತ್ಸ್ವೈಜಟಾವಲ್ಕಲಧಾರಿಣಂ ॥ ರುದ್ರಾಕ್ಷಮಾಲಾಭರಣಂತ್ರಿಪುಂಡ್ರಾಂಕಿತಮಸ್ತಕಂ । ಕಮಂಡಲುಧರಂನಿತ್ಯಂಬ್ರಹ್ಮಧ್ಯಾನಪರಾಯಣಂ ॥ ೨ ॥ ಸಮುನಿಃಪ್ರಾಹತಾನ್ನತ್ವಾಕೃತಾಂ

ಶೌನಕಾದಿ ಮಹರ್ಷಿಗಳು ನೈಮಿಶಾರಣ್ಯದಲ್ಲಿದ್ದು ಹನ್ನೆರಡು ವರ್ಷಗಳು ಮಾಡತಕ್ಕಯಜ್ಞವಂ ಮಾಡಲಾರಂಭಿಸಲು,೧ ಪೌರಾಣಿಕೋಕ್ತಮನಾದ ಸೂತ ಮಹರ್ಷಿಯು ಈ ಯಜ್ಞಾರಂಭವಂ ಕೇಳಿ ಬಂದಂಥಾವನಾಗಿ ಜಟಾ ವಲ್ಕಲಧಾರಿಯಾದ ಈ ಸೂತ ಮಹರ್ಷಿಯಂ ಕಾರಿತು, ಆ ಋಷಿಗಳೆಲ್ಲರೂ ಎದಿಗೊಂಡರು. ಈ ಸೂತಮುನಿ ಎಂಥಾವನೆಂದರೆ–ರುದ್ರಾಕ್ಷ ಮಾಲೆಗಳೇ ಆಭರಣವಾಗಿವುಳ್ಳವ. ಭಸ್ಮತ್ರಿಪುಂಡ್ರಗಳಿಂದ ಗುರ್ತಾಗಿ ಮಾಡಲ್ಪಟ್ಟಹಣೆಯುಳ್ಳವ, ಕಮಂಡಲಧಾರಿಯು, ಸದಾ ಬ್ರಹ್ಮಧ್ಯಾನದಲ್ಲಿ ಆಸಕ್ತಿಯುಳ್ಳತನು ೨ ಅಂಥಾ ಸೂತನು ಅಂಜಲಿ ಬದ್ಧನಾಗಿ ಸರ್ವ ಋಷಿಗಳಿಗೂ

ಜಲಿಪುಟೋಮುನಿಃ । ಭವದ್ಭಿಃಕಿಂಕೃತಂಮದ್ಯ ಪ್ರತ್ಯುತ್ಥಾನಂಮುನೀ
ಶ್ವರಾಃ ॥ ೪ ॥ ಸ್ಥೀಯತಾಮಿತ್ಯುಕ್ತವಾಂಸ್ತೈಸ್ತುದತ್ತಾರ್ಘ್ಯಾಸನಪಾದ್ಯಕಃ।
ಪೃಷ್ಟವಾನ್ಕುಶಲಂತೇಷಾಂಪ್ರತ್ಯೂಚುರ್ಮುನಯಸ್ತದಾ ॥ ೫ ॥ ಶ್ರೋತು
ಕಾಮಾಃಕಥಾಸ್ತತ್ರಪರೀತಾಮುನಿಪುಂಗವಂ । ಭಗವನ್ಶ್ರೋತುಮಿ
ಚ್ಛಾಮಃಕ್ಷೇತ್ರಮಾಹಾತ್ಮ್ಯಮುತ್ತಮಂ ॥ ೬ ॥ ಅಸ್ಮಿನ್ಲೋಕೇವಿಶೇಷೇಣಭುಕ್ತಿ
ಮುಕ್ತಿಪ್ರದಂವದ । ಕುತ್ರಾಸ್ತಿಕ್ಷೇತ್ರರಾಜಾಖ್ಯಂವಸತಾಂಕರ್ಮನಾಶನಂ ॥ ೭ ॥
ಋಷೀಣಾಂವಚನಂಶ್ರುತ್ವಾಸೂತಃಪೌರಾಣಿಕೋಽವದತ್ । ಸಮ್ಯಕ್ಪೃ
ಷ್ಟಂಮಹಾಭಾಗಾವಕ್ಷ್ಯಾಮಿಃಶೃಣುತಾದರಾತ್ ॥ ೮ ॥ ಈಶ್ವರೇಣಪುರಾ
ಪ್ರೋಕ್ತಂಗಿರಿಪುತ್ರ್ಯೈಕೃಪಾಳುನಾ ಭವತಾಂತತ್ಪ್ರವಕ್ಷ್ಯಾಮಿಮಹಾಪಾ
ತಕನಾಶನಂ ॥ ೯ ॥ ಕೈಲಾಸೇವೃಷಮಾರುಹ್ಯಪಾರ್ವತ್ಯಾಸಹಶಂಕರಃ ।
ಕೈಲಾಸಕಾನನೇರಮ್ಯೇಚಚಾರಮದನಾಂತಕಃ ॥ ೧೦ ॥ ಸುರವೃಕ್ಷಘನಚ್ಛಾಯೆ

ನಮಸ್ಕರಿಸಿ ನೀವೆಲ್ಲರು ನನಗೆ ಯಾತಕ್ಕೆ ಪ್ರತ್ಯುತ್ಥಾನವಂ ಮಾಡಿದ್ದು ೪ ಕುಳಿತಿರಬೇಕೆಂದು ಹೇಳಿದ ಈ ಸೂತ ಮುನಿಯು ಆ ಋಷಿಗಳಿಂದ ಕೊಡಲ್ಪಟ್ಟ ಅರ್ಘ್ಯಾಸನಪಾದ್ಯಗಳಂ ಪರಿಗ್ರಹಿಸಿ ಆ ಋಷಿಗಳ ಕುಶಲವಂ ಕೇಳಲು ಅವರೆಲ್ಲರು ಪ್ರತ್ಯುತ್ತರವಂ ಕೊಟ್ಟರು. ೫ ಆ ಯಜ್ಞಶಾಲೆಯಲ್ಲಿ ಸತ್ಕಥೆಗಳನ್ನ ಕೇಳಲಿಚ್ಛೈಸುತ್ತಿರುವರಾಗಿ ಸೂತ ಮಹರ್ಷಿಯ ಸುತ್ತಲೂ ಕೂಡಿದ್ದವರಾಗಿ ಓ ಮಹಾತ್ಮನಾದ ಸೂತ ಮುನಿಯೇ, ಉತ್ತಮವಾದ ಕ್ಷೇತ್ರ ಮಹಾತ್ಮ್ಯೆಯಂ ಕೇಳಲಿಚ್ಛೈಸುತ್ತೇವೆ. ೬ ಈಲೋಕದಲ್ಲಿ ವಿಶೇಷವಾಗಿ ಭುಕ್ತಿ ಮುಕ್ತಿ ಪ್ರದಮಾಗಿಯೂ ವಾಸ ಮಾಡುವವರಿಗೆ ಪಾಪನಾಶಕವಾಗಿಯೂ ಇರುವ ಕ್ಷೇತ್ರ ರಾಜವೆಂಬ ಹೆಸರುಳ್ಳ ಪುಣ್ಯ ಕ್ಷೇತ್ರವು ಎಲ್ಲಿರುತ್ತಿಧೆಯೆಂದು ೭ ಕೇಳಿದಋಷಿಗಳ ವಚನವಂಕೇಳಿ ಸೂತಪೌರಾಣೀಕನು ಇಂತೆಂದು ಹೇಳಿದನು. ಓ ಪುಣ್ಯಶಾಲಿಗಳಾದ ಋಷಿಗಳಿರಾ, ಚನ್ನಾಗಿ ಕೇಳಿದಿರಿ. ಅಂಥಾಕ್ಷೇತ್ರವನ್ನ ಹೇಳುತ್ತೇನೆ ಆದರಣೆಯಿಂದ ಕೇಳಿರಿ. ೮ ಪೂರ್ವದಲ್ಲಿ ಗಿರಿರಾಜನಾದ ಹಿಮವಂತನ ಪುತ್ರಿಯಾದ ಪಾರ್ವತಿಗೆ ಕೃಪಾಶಾಲಿಯಾದ ಈಶ್ವರನಿಂದಾ ಹೇಳಲ್ಪಟ್ಟ ಕ್ಷೇತ್ರ ಮಹಿಮೆಯಂ ನಿಮ್ಮಗಳಿಗೆ ಹೇಳುತ್ತೇನೆ. ಆ ಮಹಿಮೆಯು ಮಹಾ ಪಾತಕಗಳಂ ಪರಿಹರಿಸುವಂಥಾದ್ದು. ೯ ಕೈಲಾಸ ಪರ್ವತದಲ್ಲಿ ಮನೋಹರವಾದ ಕೈಲಾಸ ಕಾನನವೆಂಬ ವನಪ್ರದೇಶದಲ್ಲಿ ಮನ್ಮಥನಿಗೆ ಶತ್ರುವಾದ ಈಶ್ವರನು ಪಾರ್ವತಿಯೊಡನೆ ವೃಷಭವಾಹನವಂ ಏರಿ ಚರಿಸುತ್ತಿದ್ದನು. ೧೦ ಆ ವನವು ಕಲ್ಪವೃಕ್ಷಗಳೋ

ಸುಗಂಧಿಕುಸುಮೈರ್ಯುತೇ। ಸಿದ್ಧವಿದ್ಯಾಧರೈರ್ಯಕ್ಷೈಸ್ಸೇವಿತೇಸರ್ವಲಕ್ಷಣೇ॥೧೧॥
ಉಮಾಚಶಂಕರಂನತ್ವಾಪ್ರೋವಾಚಶ್ಲಕ್ಷ್ಣಯಾಗಿರಾ। ಭಗವನ್ಕುತ್ರಭವತಃ
ಕ್ಷೇತ್ರೇಷುಪ್ರೀತಿರುತ್ತಮಾ॥೧೨॥ ವದನಾಥಮಮಪ್ರೀತ್ಯಾಕ್ಷೇತ್ರಜ್ಞಪರ
ಮೇಶ್ವರ। ಗೌರ್ಯಾಸ್ತದ್ವಚನಂಶ್ರುತ್ವಾಕ್ಷೇತ್ರರಾಜಸ್ಯವೈಭವಂ॥೧೩॥
ವಕ್ಷ್ಯಾಮಿ ಪರಮೇಶಾನಿಶೃಣುಷ್ವಹಿತಕಾಮ್ಯಯಾ। ಅಸ್ತಿಗುಹ್ಯಂವಿಶಾಲಾ
ಕ್ಷಿಹಿಮವತ್ಪರ್ವತಸ್ಯಚ॥೧೪॥ ಮಧ್ಯೇರಾಮಸೇತೋಶ್ಚಶಿವೇಸಂತಿವಿಶಾಲ
ತಃ। ಯೋಜನಾನಾಂಸಹಸ್ರಾಣಿಕರ್ಮಭೂಮಿರಿತಿಸ್ಮೃತಾ॥೧೫॥ ಆಯಾ
ಮಾತ್ಸಾಮಹಾದೇವಿಪ್ರಖ್ಯಾತಾಲಕ್ಷಯೋಜನಾ। ನಾನಾಜನಸಮಾಕೀ
ರ್ಣಾಸಂತಿದೇವಾಶ್ಚವಿಶ್ರುತಾಃ॥೧೬॥ ನಗರ್ಯೋಬಹವಸ್ಸಂತಿಬಹುರಾಜಭಿರಾ
ಸ್ಥಿತಾಃ। ಅಯೋಧ್ಯಾಮಥುರಾಮಾಯಾಕಾಶೀಕಾಂಚೀಹ್ಯವಂತಿಕಾ॥೧೭॥

ಪಾದಿಲೀ ಸಾಂದ್ರವಾದ ನೆರಳಾವುಳ್ಳದ್ದಾಗಿಯೂ, ಸುಗಂಧ ಯುಕ್ತವಾದ ಪುಷ್ಪಗಳುಳ್ಳದ್ದಾಗಿಯೂ, ಯಕ್ಷಸಿದ್ಧ ವಿದ್ಯಾಧರರಿಂದ ಸೇವಿಸಲ್ಪಡುತ್ತಿರುವಂಥಾದ್ದಾಗಿ ಸರ್ವಲಕ್ಷಣಲಕ್ಷಿತವಾದ ಆ ವನದಲ್ಲಿ, ೧೧ ಪಾರ್ವತಿಯು ಈಶ್ವರನಂ ಕುರಿತು ನಮಸ್ಕಾರವಂ ಮಾಡಿ ಸೂಕ್ಷ್ಮವಾದ ವಚನದಿಂ ಕೇಳಿದಳು. ಓಂ ಷಡ್ಗುಣೈಶ್ವರ್ಯ ಸಂಪನ್ನನಾದ ಈಶ್ವರನೇ ಕ್ಷೇತ್ರಗಳಲ್ಲಿ ನಿನಗೆ ಉತ್ತಮವಾದ ಪ್ರೀತಿಯು ಯಾವ ಕ್ಷೇತ್ರದಲ್ಲಿ. ೧೨ ಓ ಪ್ರಭುವಾಗಿಯೂ, ಕ್ಷೇತ್ರಜ್ಞನಾಗಿಯೂ ಇರುವ ಪರಮೇಶ್ವರನೇ ನನಗೆ ಪ್ರೀತಿಯಿಂದಾ ಹೇಳಬೇಕೆಂದು ಕೇಳಿದ ಪಾರ್ವತಿಯ ವಚನವಂ ಕೇಳಿ ಕ್ಷೇತ್ರ ಮಹಿಮೆಯಂ ೧೩ ಓ ಗೌರಿಯೇ, ನಿನ್ನ ಹಿತಾಪೇಕ್ಷೆಯಿಂದ ಹೇಳುತ್ತೇನೆಕೇಳು. ಹಿಮವತ್ಪರ್ವತಕ್ಕೂ, ರಾಮ ಸೇತುವಿಗೂ ಮಧ್ಯ ಪ್ರದೇಶದಲ್ಲಿ ವಿಸ್ತಾರವಾಗಿ ಅನೇಕಗಳಾದ ಕ್ಷೇತ್ರಗಳಿಂದ ಕೇರಿದ ಸಹಸ್ರ ಯೋಜನ ಪ್ರಮಾಣವುಳ್ಳ ಕರ್ಮಭೂಮಿಯು ರಹಸ್ಯವಾಗಿ ಇರುತ್ತದೆ ೧೪॥೧೫ ಓ ಪಾರ್ವತಿಯೇ ಆ ಕರ್ಮ ಭೂಮಿಯು ವಿಸ್ತಾರದಿಂದಾ ಲಕ್ಷ ಯೋಜನಗಳುಳ್ಳದ್ದೆಂದು ಪ್ರಸಿದ್ಧವಾದದ್ದು. ಮತ್ತು ನಾನಾ ಜನಗಳಿಂದ ಕೂಡಿಕೊಂಡಿರುವಂಥಾ ಭೂಮಿಯಲ್ಲಿ ಪ್ರಸಿದ್ಧವಾದ ಅನೇಕದೇವತೆಗಳು ಇರುತ್ತಾರೆ. ೧೬ ಮತ್ತು ಬಹಳ ಅರಸುಗಳಿರುವ ಅನೇಕ ಮಹಾ ಪಟ್ಟಣಗಳುಳ್ಳ ಅಯೋಧ್ಯ, ಮಥುರಾ, ಮಾಯಾಪುರಿ, ಕಾಶೀ, ಕಾಂಚೀ, ಅವಂತಿಕಾಪುರೀ, ದ್ವಾರಾವತಿ ಎಂದು ಏಳು ಮುಕ್ತಿ ಪ್ರದಗಳಾದವುಗಳಿರುತ್ತಿಹವು. ಪರ್ವತಗಳು, ವನಗಳು, ಶಿವಸ್ಥಾನಗಳು, ಬಹುಪ್ರಕಾರವಾಗಿರುತ್ತಿಹವು ೧೭॥೧೮ ಮತ್ತು ದಿ

ಪುರೀದ್ವಾರಾವತೀಚೈವಸಪ್ತೈತಾಮುಕ್ತಿದಾಯಕಾಃ । ಗಿರಯಶ್ಚವನಾ
ಸ್ಯಂತಿಶಿವಸ್ಥಾನಾನ್ಯನೇಕಶಃ ॥ ೧೮ ॥ ವಿಷ್ಣುಸ್ಥಾನಾನಿದಿವ್ಯಾನಿನಾನಾತೀ
ರ್ಥಾನಿಸಂತಿಹಿ । ಕೇದಾರಂಚಕುರುಕ್ಷೇತ್ರಂನೈಮಿಶಂಗಂಡಕೀಶಿಲಾ॥೧೯॥
ಕಾಶೀಕ್ಷೇತ್ರಂತುಸುಮಹತ್ಪ್ರಯಾಗಾಖ್ಯಂಜನಾರ್ದನಂ । ತುಂಗಭದ್ರಾ
ಖ್ಯತೀರ್ಥಂತುಗೋಕರ್ಣಂಶಂಕರಂತಥಾ ॥ ೨೦ ॥ ಗಂಗಾದ್ವಾರಂಚ
ಶ್ರೀಶೈಲಂಮಹಾಕಾಳಮಹೋಬಲಂ । ಶೇಷಾಚಲಾಖ್ಯಂಶ್ರೀಕಂಠಂಕಾಳಹ
ಸ್ತಿಕಕುದ್ಗಿರಿಃ ॥ ೨೧ ॥ ಅರುಣಾದ್ರಿವೃದ್ಧಗಿರಿಬೃಹತೀಶ್ವರಮೇವಚ ।
ಶ್ವೇತಾರಣ್ಯಂಚಮಾಯೂರಂಕುಂಭಕೋಣಂತಥಾರ್ಜುನಂ ॥೨೨॥ ಛಾಯಾ
ವನಂಪಂಚನದಂಶ್ರೀವಾಂಛ್ಯಂಸೇತುಬಂಧನಂ । ಜಂಬೂವನಂಚಶ್ರೀರಂಗಂ
ದರ್ಶನಾನ್ಮುಕ್ತಿದಾಯಕಂ ॥ ೨೩ ॥ ರತ್ನಾಚಲಂತ್ರಿಶಿರಸಃಪುರಂಸೌಂದ
ರ್ಯಸೌಜ್ಞಕಂ । ಅನಂತಾಖ್ಯಸ್ಯಶಯನಂಸುಬ್ರಹ್ಮಣ್ಯಮಥಾಂಬಿಕಂ॥೨೪॥
ಮೂಕಾಂಬಿಕಾಖ್ಯಂಸುಕ್ಷೇತ್ರಮಗ್ನಿಪುಷ್ಕರಣೀತಥಾ । ಅರ್ಕಪುಷ್ಕರಣೀ
ದಿವ್ಯಾಚಂದ್ರಪುಷ್ಕರಣೀತಥಾ ॥ ೨೫ ॥ ತ್ರಿಮಕೂಟಂಗಜಾರಣ್ಯಂಭುವಿ

ವ್ಯಗಳಾದ ವಿಷ್ಣುಸ್ಥಾನಗಳು ಅನೇಕ ವಿಧಗಳಾದ ತೀರ್ಥಗಳು ಕೇದಾರವು,
ಕುರುಕ್ಷೇತ್ರವು, ನೈಮಿಶಾರಣ್ಯವು, ಗಂಡಕೀಶಿಲೆಯು ॥೧೯॥ ಮಹಾಶ್ರೇ
ಷ್ಠಮಾದ ಕಾಶೀ ಕ್ಷೇತ್ರವು, ಪ್ರಯಾಗ ಕ್ಷೇತ್ರವು, ಜನಾರ್ದನ ಕ್ಷೇತ್ರವು,
ತುಂಗಭದ್ರೆಯು, ಗೋಕರ್ಣವು ॥೨೦॥ ಗಂಗಾದ್ವಾರವು, ಶ್ರೀಶೈಲವು,
ಮಹಾಕಾಳವು, ಅಹೋಬಲವು, ಶೇಷಾಚಲವು, ಶ್ರೀಕಂಠ ಕ್ಷೇತ್ರವು,
ಕಾಳಹಸ್ತಿಯು, ಕಕುದ್ಗಿರಿಯು ॥೨೧॥ ಅರುಣಾಚಲವು, ವೃದ್ಧಾಚಲವು,
ಬೃಹತೀಶ್ವರವು, ಶ್ವೇತಾರಣ್ಯವು, ಮಾಯೂರವು, ಕುಂಭಕೋಣವು, ಮ
ಧ್ಯಾರ್ಜುನವು ॥೨೨॥ ಛಾಯಾವನವು, ಪಂಚನದವು, ಶ್ರೀವಾಂಛವು,
ಸೇತುಬಂಧವು, ಜಂಬೂವನವು, ದರ್ಶನದಿಂದಲೇ ಮುಕ್ತಿ ಪ್ರದವಾದ
ಶ್ರೀರಂಗ ಕ್ಷೇತ್ರವು ॥೨೩॥ ರತ್ನಾಚಲವು, ತ್ರಿಕೂಟ ಪರ್ವತವು, ಸೌಂದ
ರ್ಯಪುರವು, ಅನಂತಶಯನವು, ಸುಬ್ರಹ್ಮಣ್ಯವು, ಅಂಬಿಕ ಕ್ಷೇತ್ರವು॥೨೪
ಮೂಕಾಂಬಿಕಾ ಕ್ಷೇತ್ರವು, ಅಗ್ನಿ ಪುಷ್ಕರಿಣಿಯು, ಅರ್ಕಪುಷ್ಕರಿಣಿಯು,
ಚಂದ್ರಪುಷ್ಕರಣಿಯು,೨೪ ತ್ರಿಮಕೂಟವು, ಗಜಾರಣ್ಯವು, ಇವೇ ಮೊದಲಾದ
ಅನೇಕ ನನ್ನ ಕ್ಷೇತ್ರಗಳಿರುತ್ತಿಹವು. ಆ ಕ್ಷೇತ್ರಗಳಲ್ಲಿ ಮಹಾ ಉತ್ತಮ
ವಾದ ಭೂಕೈಲಾಸವೆಂಬ ಕ್ಷೇತ್ರವು ॥ ೨೫ ॥ ನನಗೆ ಅತ್ಯಂತ ಪ್ರೀತಿಕರ

ಕ್ಷೇತ್ರಾಣಿಸಂತಿಹಿ । ಕ್ಷೇತ್ರಾಣಾಮುತ್ತಮಂಕ್ಷೇತ್ರಂಭೂಕೈಲಾಸಂಮಹತ್ತರಂ ॥ ೨೬ ॥ ಮಮಪ್ರೀತಿಕರಂಪುಂಭುಕ್ತಿಮುಕ್ತಿಫಲಪ್ರದಂ ಸಹ್ಯಜಾದಕ್ಷಿಣೇದೇಶೇತ್ವಗಸ್ತ್ಯೇಶ್ವರಪಶ್ಚಿಮೆ ॥ ೨೭ ॥ ಕಪಿಲಾಕೌಂಡಿನೀಮಧ್ಯೇ ಮದ್ಧಾಮಪರಮಂಶಿವೆ । ವಿಷಪ್ರಹರಣಮಿತಿನಾಮವಾಸೀದ್ಗಿರಿಕನ್ಯಕೇ ॥ ೨೮ ॥ ಮುನಿಸಿದ್ಧಗಣೈರ್ಜುಷ್ಟಂ ಸರ್ವದೇವಸಮಾಶ್ರಿತೇ । ನಾನಾವಿಧತರುಚ್ಛನ್ನೇ ನಾನಾಪಕ್ಷಿಗಣೈರ್ಯುತೇ ॥ ೨೯ ॥ ನಾನಾಮೃಗೈರ್ಮುಕ್ತವೈರೈರಾಶ್ರಿತೇಸರ್ವಲಕ್ಷಣೆ । ತಸ್ಮಿನ್ಸ್ಥಾನೇಮಮಪ್ರೀತಿರಸ್ತಿದೇವಿವರಾನನೇ ॥ ೩೦ ॥ ತಸ್ಮಾದಹಂಗಮಿಷ್ಯಾಮಿತ್ವಯಾಸಾಕಮಿತಃಪರಂ । ತಚ್ಛ್ರುತ್ವಾಪರಮಪ್ರೀತ್ಯಾಪಾರ್ವತೀಪ್ರಾಹಶಂಕರಂ ॥ ೩೧ ॥ ಗಂತವ್ಯಮಧುನಾನಾಥಾಭ್ಯಾಮಹಂತದ್ರಷ್ಟುಮುತ್ಸುಕಾ । ಇತ್ಯುಕ್ತವತ್ಯಾಂದೇವ್ಯಾಂತುತಥೇತ್ಯುಕ್ತ್ವಾಮಹಾಪ್ರಭುಃ ॥ ೩೨

ಹಾದದ್ದು ಜನಗಳಿಗೆ ಭುಕ್ತಿ ಮುಕ್ತಿಗಳೆಂಬ ಫಲವಂ ಕೊಡುವಂಥಾದ್ದು. ಕಾವೇರಿ ನದಿಯು, ದಕ್ಷಿಣಭಾಗದಲ್ಲಿಯು, ಅಗಸ್ತ್ಯೇಶ್ವರನಿಗೆ ಪಶ್ಚಿಮ ಭಾಗದಲ್ಲಿಯು ॥ ೨೬ ॥ ಕಪಿಲಾ ಕೌಂಡಿನೀ ಮಧ್ಯದಲ್ಲಿರುವ ನನ್ನ ಕ್ಷೇತ್ರವು ಉತ್ಕೃಷ್ಟವಾದದ್ದು, ಓ ಗಿರಿರಾಜ ಪುತ್ರಿಯೇ ಈ ಕ್ಷೇತ್ರಕ್ಕೆ ವಿಷಪ್ರಹರಣವೆಂಬ ಹೆಸರು ಉಂಟಾಯಿತು ॥ ೨೭ ॥ ಆ ಕ್ಷೇತ್ರವು ಮುನಿಗಣಗಳಿಂದಲೂ, ಸಿದ್ಧ ಗಣಗಳಿಂದಲೂ, ಆಶ್ರಯಿಸಲ್ಪಟ್ಟದ್ದು. ಸಮಸ್ತ ದೇವತೆಗಳಿಂದಲೂ ಆಶ್ರಯಿಸಲ್ಪಟ್ಟದ್ದು. ನಾನಾ ವಿಧವಾದ ವೃಕ್ಷಗಳಿಂದ ನೆರಳಾಗಿರುವಂಥಾದ್ದು ನಾನಾಪಕ್ಷಿಗಣಗಳಿಂದ ಕೂಡಿರುವಂಥಾದ್ದು ॥ ೨೮ ॥ ವೈರವಂ ಬಿಟ್ಟು ಇರುವ ನಾನಾ ವಿಧ ಮೃಗಗಳಿಂದ ಆಶ್ರಯಿಸಲ್ಪಟ್ಟು ಸಮಸ್ತ ಲಕ್ಷಣಗಳುಳ್ಳ ಆ ಸ್ಥಾನದಲ್ಲಿ ನನಗೆ ಪ್ರೀತಿ ಇರುತ್ತದೆ ॥ ೨೯ ॥ ಓ ಸುಂದರ ಮುಖಿಯಾದ ಪಾರ್ವತಿಯೇ, ಇನ್ನು ಮೇಲೆ ನಿನ್ನ ಸಂಗಡ ನಾನು ಆ ಕ್ಷೇತ್ರವಂ ಕುರಿತು ಹೋಗುತ್ತೇನೆಂದು ಪರಮ ವಿಶ್ವಾಸದಿಂದ ಹೇಳಿದ ವಾಕ್ಯವಂ ಕೇಳಿ ಪರಮೇಶ್ವರನಂ ಕುರಿತು ಪಾರ್ವತಿ ಇಂತೆಂದಳು ॥ ೩೦ ॥, ಓ ನಾಥನೆ ನಾನು ಆ ಕ್ಷೇತ್ರವಂ ನೋಡುವದಕ್ಕೆ ಆಸಕ್ತಿಯುಳ್ಳವಳಾದೆನು. ಈಗಲೇ ನಾವಿಬ್ಬರೂ ಆ ಕ್ಷೇತ್ರವಂ ಕುರಿತು ಹೊರಡತಕ್ಕದ್ದೆಂದು ಪಾರ್ವತಿಯು ಹೇಳುತ್ತಿರಲಾಗಿ, ಮಹಾದೇವನು ಹಾಗಾಗಲೆಂದು ಪ್ರತ್ಯುತ್ತರವಂ ಹೇಳಿದನು. ೩೧ ಓ ಪಾರ್ವತಿಯೇ ಕೇಶಿಯೆಂಬ ಹೆಸರುಳ್ಳ ರಾಕ್ಷಸನು ಹುಟ್ಟುತ್ತಾನೆ. ಅವನು ಅಹಂಕಾರವಂ ಹೊಂದಿ ಲೋಕಗಳನ್ನೆಲ್ಲಾ ಬಾಧಿಸುತ್ತಾನೆ ॥ ೩೨ ॥ ಆ ಸಮಯದಲ್ಲಿ ಬ್ರಹ್ಮನಿಂದಲೂ, ದೇವ

ಪ್ರತ್ಯೂಹಮಹಾನಿಕೇಶೀನಾಮಭವಿಷ್ಯತಿ । ಅಸುರಸ್ತ್ವಹಯಾಕಾರಿಶ್ಚೇಷ್ಟಿ
ಲೋಕಾನ್ಕೃತ್ಸ್ನಂಬಾಧಯಿಷ್ಯತಿ ॥ ೩೩ ॥ ತದಹಂಪ್ರಾರ್ಥಿತೋವಶ್ಯಂಮುನಿ
ಭಿರ್ಬ್ರಹ್ಮಣಾಶಿವೇ । ತನ್ನಾಶಾರ್ಥಂಗಮಿಷ್ಯಾಮಿತದಾಧಾಮಮಮೇಕ್ಷ್ಯಸಿ ।
ಇತ್ಯುಕ್ತ್ವಾಪ್ರೀತಿದಂವಾಕ್ಯಂತಾಂಸಮಾಶ್ವಾಸ್ಯಚಸತ್ವರಂ ॥ ೩೪ ॥ ವೃಷಭಂ
ತುಸಮಾರುಹ್ಯತತ್ರಪ್ರಾಪ್ಯಮನೋರಥಂ । ಸ್ವಾಲಯಂಪ್ರಯಯೌಶಂಭುರು
ಮಯಾಸಹವೇಗತಃ ॥ ಶ್ರೀಸೂತಃ ॥ ಇತಿಗರಪುರಮೇತದ್ಧಾಮಗೌರೀಪ್ರಿಯೇ
ಣಹಿಮಗಿರಿತನುಜಾಯೈವರ್ಣಿತಂಕ್ಷೇತ್ರರಾಜಂ । ಅಥಹಿಭವತಾಂವ್ಯೈ
ವಕ್ಷ್ಯೆದಿವ್ಯಂಮುನೀಂದ್ರಾಃಪುನರಪಿಚರಹಸ್ಯಂಕೇಶಿಸಂಹಾರಮದ್ಯ ॥

ಇತಿಶ್ರೀಸ್ಕಾಂದಪುರಾಣೇ ಗರಳಪುರೀಮಹಾತ್ಮ್ಯೇ ಉಮಾ
ಮಹೇಶ್ವರಸಂವಾದೇ ಪ್ರಥಮೋಧ್ಯಾಯಃ.

ಋಷಯಃ ॥ ಗೌರ್ಯಾಃಶಿವೇನಗರಳಕ್ಷೇತ್ರಧಾಮಾಸುರಸ್ಯಚ । ವಧಾರ್ಥಂ
ತುಗಮಿಷ್ಯಾಮೀತ್ಯುಕ್ತಂತದಥಾನಾವದ ॥೧॥ ಕದಾಸಮಾಗಮಸ್ತತ್ರಸೋ

ತೆಗಳಿಂದಲೂ, ಮುನಿಗಳಿಂದಲೂ ನಾನು ಪ್ರಾರ್ಥಿಸಲ್ಪಟ್ಟವನಾಗಿ ಆ ರಾಕ್ಷಸನ ಸಹ್ಮಾರಕ್ಕೋಸ್ಕರ ನಾನು ಆ ಕ್ಷೇತ್ರವಂ ಕುರಿತು ಹೋಗುತ್ತಿಥೇನೆ. ಆ ಸಮಯದಲ್ಲಿ ನನ್ನ ಕ್ಷೇತ್ರವಂ ನೋಡುತ್ತಿ ॥೩೩॥ ಇಂತೆಂದು ವಿಶ್ವಾಸವನ್ನುಂಟುಮಾಡುವ ವಾಕ್ಯವಂ ಹೇಳಿ ಆ ಪಾರ್ವತಿಯಂ ಕರದುಕೊಂಡು ವೃಷಭ ವಾಹನವಂ ಏರಿ ಇಷ್ಟಾರ್ಥವಂ ಹೊಂದಿ ಪಾರ್ವತಿಯೊಡನೆ ವೇಗದಿಂದಾ ತನ್ನ ಪ್ರೀತಿ ಪಾತ್ರವಾದ ಸ್ಥಾನವಂ ಕುರಿತು ॥ ೩೪ ॥ ಸೂತ ಮಹರ್ಷಿ ಹೇಳುತ್ತಾನೆ. ಈ ಪ್ರಕಾರ ಕ್ಷೇತ್ರ ರಾಜವಾದ ಗರಳಪುರವೆಂಬ ಸ್ಥಾನವು ಗೌರೀವಲ್ಲಭನಾದ ಪರಮೇಶ್ವರನಿಂದ ಗಿರಿರಾಜ ಪುತ್ರಿಗೆ ವರ್ಣಿಸಿ ಹೇಳಲ್ಪಟ್ಟಿತು. ಓ ಋಷಿ ಶ್ರೇಷ್ಠರೇ, ಇಲ್ಲಿ ನಾನು ನಿಮ್ಮಗಳಿಗೆ ಆ ದಿವ್ಯವಾದ ಕ್ಷೇತ್ರ ಮಹಿಮೆಯನ್ನು ಮತ್ತು ರಹಸ್ಯವಾದ ಕೇಶಿ ಎಂಬ ರಾಕ್ಷಸನ ಸಂಹಾರವನ್ನು ಸಹಾ ಹೇಳುತ್ತೇನೆ.

ಎಂಬಲ್ಲಿಗೆ ಸ್ಕಾಂಧಪುರಾಣದಲ್ಲಿ ಗರಳಪುರಿಮಹಾತ್ಮ್ಯೆಯೊಳು ಉಮಾ
ಮಹೇಶ್ವರಸಂವಾದವೆಂಬ ಮೊದಲನೇ ಅಧ್ಯಾಯವು ಸಂಪೂರ್ಣವು.

ಋಷಿಗಳು ಕೇಳುತ್ತಾರೆ.—ಈಶ್ವನಿಂದ ಪಾರ್ವತಿಗೆ ಕೇಶಿನಾಮಾಸುರನ ಸಂಹಾರಾರ್ಥವಾಗಿ ಗರಳ ಕ್ಷೇತ್ರವನ್ನು ಕುರಿತು ಹೋಗುತ್ತೇನೆಂದು ಹೇಳಿದ ಮೇಲೆ ನಡದ ವೃತ್ತಾಂತವಂ ಹೇಳಬೇಕು. ಯಾವ ಸಮಯದಲ್ಲಿ

ಸುರಸ್ಸಂಹೃತಃ ಕದಾ । ಕಥಂ ತಸ್ಯ ಗರಕ್ಷೇತ್ರಮಿತಿ ನಾಮಾಭವನ್ಮುನೇ ॥ ೧ ॥
ಮುನೀನಾಂ ವಚನಂ ಶ್ರುತ್ವಾ ಪ್ರವದನ್ಮುನಿಸತ್ತಮಃ । ಸಮ್ಯಕ್ಪೃಷ್ಟಂ ಮಹಾ
ಭಾಗಾ ಭವದುಕ್ತಂ ವದಾಮಿ ವಃ ॥ ೨ ॥ ಶ್ರವಣಾತ್ಸರ್ವಪಾಪಘ್ನಂ ಸರ್ವಕಾ
ಮಫಲಪ್ರದಂ । ಪುರಾಕ್ಯೈಕಸುತಃ ಕೇಶೀ ನಾಮ್ನಾಭೂಲ್ಲೋಕಕಂಟಕಃ ॥ ೩ ॥
ಪಿತ್ರಾ ಕೃತ ಧನುರ್ವಿದ್ಯೋ ಮಹಾಬಾಹುರ್ಮಹಾಬಲಃ । ಶೂರೋ ದಿಗಂತವಿ
ಕ್ರಾಂತರಥಃ ಶತ್ರುವಿಮರ್ದನಃ ॥ ೪ ॥ ಸೋಸುರಸ್ಸ್ವರ್ಗಕಾಮಾಂ
ಶ್ಚಕ್ರೇ ತಯಜ್ಞಕ್ರಿಯಾನ್ಮುನೀನ್ । ಹೃತಂ ಹವಿಷ್ಯಮನ್ನಂ ಚ ಹುತಂ ಭು
ಕ್ತ್ವಾ ದುರಾತ್ಮವಾನ್ ॥ ೫ ॥ ತದ್ಭುಕ್ತ್ವಾ ಪೀಂದ್ರದೇವಾದೀನ್ರಣೇ ಜಿತ್ವಾ
ದುರಾಗ್ರಹೀ । ಅಜ್ಞಾತ್ವಾ ಬ್ರಹ್ಮರುದ್ರಾದೀನಸುರೋ ಗರ್ವಿತೋಭವತ್ ॥ ೬ ।
ದೇವಪತ್ನೀಸ್ಸಮಾಹೃತ್ಯ ಬಲಾತ್ಸಬುಭುಜೇ ಭುವಿ । ಮುನಿಪತ್ನ್ಯಸ್ತು ಘಾತೇನ
ಹೃತಾ ಲೋಕತ್ರಯಂ ತಥಾ ॥ ೭ ॥ ತತೋ ದೇವಾ ಮುನಿಗಣಾಶ್ಚಕ್ರಾದ್ಯಾಸ್ತೇ

ಆ ಪಾರ್ವತೀ ಪರಮೇಶ್ವರರುಗಳು ಬರೋಣವಾಯಿತು. ಅ ರಾಕ್ಷಸನು ಯಾವ ಕಾಲದಲ್ಲಿ ಸಂಹರಿಸಲ್ಪಟ್ಟನು. ಆ ಕ್ಷೇತ್ರಕ್ಕೆ ಗರಳಕ್ಷೇತ್ರವೆಂಬ ನಾಮವು ಹ್ಯಾಗೆ ವುಂಟಾಯಿತು ॥೧॥ ಇಂತೆಂದು ಕೇಳಿದ ಋಷಿಗಳ ವಚನವಂ ಕೇಳಿ ಸೂತ ಮುನೀಂದ್ರನು ಪ್ರತ್ಯುತ್ತರವಂ ಹೇಳಿದನು. ಓ ಪುಣ್ಯಾತ್ಮರೇ ಚದ್ದಾಗಿ ಕೇಳಿದಿರಿ, ನೀವು ಕೇಳಿದ ವಿಷಯವಂ ಹೇಳುತ್ತೇನೆ ॥೨॥ ಶ್ರವಣಮಾತ್ರದಿಂದಲೇ ಇದು ಸರ್ವ ಪಾಪಗಳಂ ಪರಿಹರಿಸುವಂಥಾದ್ದು. ಸರ್ವಕಾಮ ಫಲಗಳಂ ಕೊಡುವಂಥಾದ್ದು ಪೂರ್ವದಲ್ಲಿ ಕೈಕನೆಂಬವನಿಗೆ ಮಗನಾದ ಕೇಶಿ ಯೆಂಬ ರಾಕ್ಷಸನು ಲೋಕಗಳಿಗೆಲ್ಲಾ ಕಂಟಕಪ್ರಾಯನಾಗಿ ॥೩॥ ತಂದೆಯಿಂದ ಧನುರ್ವಿದ್ಯೆಯಂ ಕಲಿತು ಮಹಾ ಭುಜಬಲವುಳ್ಳವನಾಗಿ ಶೂರನಾಗಿ ದಿಗಂತವಿಕ್ರಾಂತರಥನಾಗಿ ॥೪॥ ಆ ಅಸುರನು ಸ್ವರ್ಗ ಕಾಮಿಗಳಾಗಿ ಯಜ್ಞಕ್ರಿಯೆಗಳಂ ಮಾಡುವ ಋಷಿಗಳನ್ನ ಧಿಕ್ಕರಿಸಿ ದುರಾತ್ಮನಾಗಿ ದೇವತೆಗಳಿಗಿತ್ತ ಹವಿರ್ಭಾಗವನ್ನ ಅಪಹರಿಸಿ ತಾನು ಭುಂಜಿಸಿ ॥೫॥ ದುರಾಗ್ರಹವುಳ್ಳವನಾಗಿ ಇಂದ್ರಾದಿ ದೇವತೆಗಳನ್ನ ಯುದ್ಧದಲ್ಲಿ ಜೈಸಿ ಬ್ರಹ್ಮ ರುದ್ರಾದಿಗಳನ್ನ ತಿಳಿಯದೆ ಗರ್ವಿಷ್ಟನಾಗಿ ಇದ್ದನು ॥೬॥ ಬಲಾತ್ಕಾರದಿಂದ ದೇವ ಪತ್ನಿಯರಂ ಅಪಹರಿಸಿ ಅನುಭವಿಸಿದನು. ಅದೇ ಪ್ರಕಾರ ಋಷಿ ಪತ್ನಿಯರು ಅವನಿಂದ ಅಪಹರಿಸಲ್ಪಟ್ಟರು. ಲೋಕತ್ರಯವು ಬಾಧಿಸಲ್ಪಡುತ್ತಾ ಇತ್ತು ॥೭॥ ಆದಕಾರಣ ಇಂದ್ರಾದಿ ದೇವತೆಗಳೂ, ಋಷಿಗ

ನಬಾಧಿತಾಃ । ಕ್ಷೀರಾಬ್ಧಿವಾಸಿನಂವಿಷ್ಣುಂಶಂಖಚಕ್ರಗದಾಧರಂ ॥ ೯ ॥ ಲ
ಕ್ಷ್ಮೀಸಮೇತಂಭೋಗೀಂದ್ರಶಾಯಿನಂದದೃಶುಸ್ತತಃ । ಸಂತೋಷೋತ್ಫುಲ್ಲ
ನಯನಂನಮಸ್ಕೃತ್ವಾಥತುಷ್ಟುವುಃ ॥ ೧೦ ॥ ನಾರಾಯಣನಮಸ್ತೇಸ್ತುದಿತಿಪು
ತ್ರವಿನಾಶನ । ಮುಮುಕ್ಷೂಣಾಂಯತೀಂದ್ರಾಣಾಂಮೋಕ್ಷಲಕ್ಷ್ಮೀಪ್ರದಪ್ರ
ಭೋ ॥ ೧೧ ॥ ದೇವಸರ್ವಸ್ವರೂಪೋಸಿವಿಷ್ಣೋನಃಪರಿಪಾಲಯ । ಇತಿಸ್ತುತ್ವಾ
ಹರಿಂದೇವಾಊಚುಃಕೃತ್ಯಂಸ್ವಕೀಯಕಂ ॥ ೧೨ ॥ ಕೇಶೀನಾಮಮಹಾಬಾ
ಹುಃಕಾಲಾನಲಸಮೋಬಲೀ । ತೇನಲೋಕತ್ರಯಂಚೈವಬಾಧಿತಂತು ದುರಾ
ತ್ಮನಾ ॥ ೧೩ ॥ ದೇವಯೋಗ್ಯಂಹವಿರ್ಭುಕ್ತಂ ಸುರಾಣಾಂಸ್ತ್ರೀಕದಂಬ
ಕಂ । ಭಾನುಚಂದ್ರಾಗ್ನಿವಾಯ್ವಾದ್ಯಾಸ್ತದ್ಗೃಹೇಸ್ಥಾಪಿತಾಬಲಾತ್ ॥ ೧೪ ॥
ತದಂಗಣೇಸುರಸ್ತ್ರೀಭಿರಕ್ಷಿತಂಜಲಸೇಚನೈಃ । ತಸ್ಮಾದ್ವಯಮಿಹಪ್ರಾಪ್ತಾ
ಭವತ್ಪಾದಾಬ್ಜಸೇವನಂ ॥ ೧೫ ॥ ಕರ್ತುಂತತ್ರನಗಚ್ಛಾಮಃಕೃತಾರ್ಥ

ಳೂ, ಆ ಕೇಶಿ ನಾಮಕನಿಂದ ಬಾಧಿತರಾಗಿ ಕ್ಷೀರ ಸಮುದ್ರವಾಸಿ
ಯೂ, ಶಂಖಚಕ್ರ ಗಧಾಧರನಾಗಿಯೂ ೯ ಲಕ್ಷ್ಮೀಸಮೇತನಾಗಿಯೂ,
ಭೋಗೀಂದ್ರಶಾಯಿಯಾಗಿಯೂ, ಇರುವ ಶ್ರೀ ಮಹಾ ವಿಷ್ಣುವನ್ನು ನೋ
ಡಿದರು. ಸಂತೋಷದಿಂದ ವಿಕಸನವಂ ಹೊಂದಿದ ನೇತ್ರಗಳುಳ್ಳ ಗದಾಧರ
ನ್ನು ನಮಸ್ಕರಿಸಿ ಸ್ತೋತ್ರವಂ ಮಾಡಿದರು ॥೧೦॥ ದೈತ್ಯನಾಶಕನಾದ ನಾ
ರಾಯಣಮೂರ್ತಿಯೇ, ನಿನಗೆ ನಮಸ್ಕಾರವು. ಮೋಕ್ಷವನ್ನಪೇಕ್ಷಿಸು
ತ್ತಿರುವ ಯತಿ ಶ್ರೇಷ್ಠರಿಗೆ ಮೋಕ್ಷಪದವಂ ಕೊಡುವ ಪ್ರಭುವಾದ ಓ,
ವಿಷ್ಣುವೇ,೧೧ನೀನು ಸರ್ವ ಸ್ವರೂಪನಾಗಿದ್ಧಿ, ನಮ್ಮಗಳಂಪರಿಪಾಲಿಸೆಂದು
ದೇವತೆಗಳೆಲ್ಲರೂ ಶ್ರೀಹರಿಯಂ ಸ್ತುತಿಸಿ ಸ್ವಕಾರ್ಯವಂ ಬಿನ್ನೈಸಿದರು೧೨
ಕಾಲಾಗ್ನಿಗೆ ಸಮಾನವಾಗಿಯೂ, ಮಹಾ ಭುಜ ಪರಾಕ್ರಮವುಳ್ಳವನಾಗಿ
ಯೂ, ಇರುವ ಕೇಶೀನಾಮಕ ರಾಕ್ಷಸನಿಂದ ಲೋಕತ್ರಯವು ಬಾಧಿಸಲ್ಪ
ಡುತ್ತಿದೆ, ಆದುರಾತ್ಮನಿಂದ ।೧೩। ದೇವತಾಯೋಗ್ಯವಾದ ಹವಿರ್ಭಾಗವು
ಭುಂಜಿಸಲ್ಪಡುತ್ತಿಧೆ. ದೇವತಾ ಸ್ತ್ರೀಯರೆಲ್ಲರು ಅವನಿಂದ ಅನುಭವಿಸ
ಲ್ಪಟ್ಟರು. ಸೂರ್ಯ, ಚಂದ್ರ, ಅಗ್ನಿ, ವಾಯು ಮೊದಲಾದವರು ಬಲಾತ್ಕಾ
ರದಿಂದ ಅವನ ಮನೆಯಲ್ಲಿರಿಸಲ್ಪಟ್ಟರು೧೪ ದೇವತಾ ಸ್ತ್ರೀಯರು ಅವನ
ಅಂಗಳದಲ್ಲಿ ಸಾರಿಸುವದಕ್ಕಾಗಿ ಇರಿಸಲ್ಪಟ್ಟರು. ಆದಕಾರಣ ನಾವೆಲ್ಲರು
ನಿನ್ನ ಪಾದ ಸೇವೆಯಂ ಕುರಿತು ಇಲ್ಲಿಗೆಬಂದೆವು।೧೫।ನಿನ್ನ ದರುಶನದಿಂದ

ಸ್ತ್ವದರ್ಶನಾತ್ । ತೇಷಾಂತದ್ವಚನಂಶ್ರುತ್ವಾಹರಿರ್ವಚನಮಬ್ರವೀತ್ ॥೧೬॥ ಮಯಾನಹನ್ಯತೇಕೇಶೀದುಷ್ಟಾತ್ಮಾಸುರಸತ್ತಮಾಃ । ಶಂಭುನಾಹನನಂತಸ್ಯಕರ್ತವ್ಯಂಬ್ರಹ್ಮಣಾನಹಿ ॥೧೭॥ ಪುರಾಸುರೋಮಹತ್ಕ್ರೂರಂತಪೋವರ್ಷಾಯುತಂಭುವಿ । ಜೀರ್ಣಪರ್ಣಾಶನಃಪೂರ್ವಂನಿರಾಹಾರಸ್ತತಃಪರಂ । ಅಕರೋತ್ತೇನತಪಸಾಪ್ರೀತೇನಾಸ್ಯವರಂಬಹು ॥೧೮॥ ಅವಧ್ಯತ್ವಂವಿಧಾತ್ರಾಚಮಯಾಚಾಪಿಶಿವಂವಿನಾ । ದತ್ತಂಬಹುಬಲಂಶೌರ್ಯಂಬಹುಭಾಗ್ಯಂದುರಾತ್ಮನಃ ॥೧೯॥ ಯುದ್ಧೇತುಮರಣಂನೈವಮಯಾತ್ವಾಪ್ರಾರ್ಥಿತೇನಚ । ತಸ್ಮಾದಹಂಶಿವಂಪ್ರಾರ್ಥ್ಯಕೇಶಿನಸ್ಸಂಹರಾಯಚ ॥೨೦॥ ಕ್ಷೇಮಂಕರ್ತುಂಹಿಭವತಾಂಗಮಿಷ್ಯಾಮಿಸುರೇಶ್ವರಾಃ । ಇತ್ಯುಕ್ತ್ವಾತಾಂತ್ಸಮಾಧಾಯಕೈಲಾಸಮಗಮದ್ಧರಿಃ ॥೨೧॥ ರತ್ನಸಿಂಹಾಸನಾಸೀನಂಚಂದ್ರಾರ್ಧಕೃತಭೂಷಣಂ । ಸುವರ್ಣಕಂಕಣೈರ್ಯುಕ್ತಂಮಾಣಿಕ್ಯ

ನಾವು ಕೃತಾರ್ಥರಾದೆವು. ನಮ್ಮ ಲೋಕಗಳಲ್ಲಿ ಪ್ರಭುತ್ವವಂ ಮಾಡುವದಕ್ಕೆ ನಾವು ಹೋಗುವದಿಲ್ಲವೆಂದು ಹೇಳಿದ ದೇವತೆಗಳ ವಚನವಂ ಕೇಳಿ, ಶ್ರೀಹರಿಯು ವಕ್ಷ್ಯಮಾಣ ವಚನವಂ ಹೇಳಿದನು೧೬ ಓ, ಸುರಶ್ರೇಷ್ಠರೇ, ದುಷ್ಟಾತ್ಮನಾದ ಕೇಶಿ ಎಂಬ ಅಸುರನು ನನ್ನಿಂದ ಸಂಹರಿಸಲ್ಪಡುವದಿಲ್ಲ, ಬ್ರಹ್ಮನಿಂದಲೂ ಸಂಹರಿಸಲ್ಪಡುವದಿಲ್ಲ, ಆ ಅಸುರನಿಗೆ ಶಿವನಿಂದಲೇ ಸಂಹಾರವಾಗಬೇಕು. ಆ ಕಾರಣವೇನದಂರೆ ॥೧೭॥ ಪೂರ್ವದಲ್ಲಿ ಆ ಅಸುರನು ಹತ್ತು ಸಾವಿರ ವರ್ಷಗಳುಭೂಮಿಯಲ್ಲಿಕ್ರೂರವಾದತಪವಂಮಾಡಿಮೊದಲು ಜೀರ್ಣಪರ್ಣಾಶನನಾಗಿ ಅನಂತರ ನಿರಾಹಾರನಾಗಿ ತಪವಂ ಮಾಡಿದನು. ಆ ತಪಸ್ಸಿನಿಂದ ಸಂತುಷ್ಟನಾದ ಬ್ರಹ್ಮನಿಂದಲೂ ॥೧೮॥ ನನ್ನಿಂದಲೂ, ಶಿವನಂ ವಿನಾಯಿಸಿ ಅವಧ್ಯತ್ವ ರೂಪವಾದ ವರವು ಕೊಡಲ್ಪಟ್ಟಿತು. ಆ ದುರಾತ್ಮನಿಗೆ ಬಹು ಬಲಶೌರ್ಯ ಭಾಗ್ಯಂಗಳು ಕೊಡಲ್ಪಟ್ಟವುರ್ಮತ್ತು ಯುದ್ಧದಲ್ಲಿ ಮರಣವಿಲ್ಲವೆಂದು ವರವು ಕೊಡಲ್ಪಟ್ಟಿತು. ಆದಕಾರಣ ಆ ಕೇಶಿಯು ಸಂಹಾರವಂ ಮಾಡುವದಕ್ಕೆ ಶಿವನಂ ಪ್ರಾರ್ಥಿಸಿ ನಿಮ್ಮಗಳಿಗೆ ೨೦॥ ಕ್ಷೇಮವಂ ಉಂಟುಮಾಡುವದಕ್ಕಾಗಿ ನಾನು ಬರುವೆನೆಂದು ಆ ದೇವತೆಗಳಂ ಸಮಾಧಾನಗೊಳಿಸಿ ಶ್ರೀಹರಿಯು ಕೈಲಾಸವಂ ಹೊಂದಿದನು ॥೨೧॥ ಆ ಕೈಲಾಸ ಪರ್ವತದಲ್ಲಿ ರತ್ನ ಸಿಹ್ಮಾಸನಾಸೀನನಾಗಿಯೂ, ಚಂದ್ರಾರ್ಧಕೃತಭೂಷಣನಾಗಿಯೂ, ಸುವರ್ಣ ಕಂಕಣಗಳಿಂದ ಯುಕ್ತನಾಗಿ

ಮಕುಟೋಜ್ವಲಂ ॥ ೨೧ ॥ ಗಂಗಾಧರಂಸರ್ಪಭೂಷಂಮಾಣಿಕ್ಯರಚಿ
ತಾಂಗದಂ । ಸುವರ್ಣಕುಂಡಲಧರಂಮುಕ್ತಾಹಾರವಿರಾಜಿತಂ ॥ ೨೨ ॥
ತ್ರಿಲೋಚನಂಚಾಷ್ಟಬಾಹುಂವರಾಭಯಕರಂಮೃಗಂ । ತ್ರಿಶೂಲಂಪರ
ಶುಂಢಕ್ಕಾಂಟಂಕಂಡಮರುಗಂತಥಾ ॥ ೨೩ ॥ ಏವಮಾದಿಧರಂಶಂಭುಂಪ್ರ
ಮಥಾದಿಗಣೈರ್ವೃತಂ । ಗಂಗಾದಿಸರ್ವತೀರ್ಥೈಶ್ಚಮೂರ್ತಿವದ್ಭಿಶ್ಚಸಾ
ಗರೈಃ ॥ ೨೪ ॥ ಪರ್ವತೈಸ್ಸಿದ್ಧಸಂಘೈಶ್ಚಯಕ್ಷಕಿಂನರರಾಕ್ಷಸೈಃ । ಭೂ
ತೈರ್ಬ್ರಹ್ಮಗಣೈಶ್ಚೈವನಂದಿಭೃಂಗ್ಯಾದಿಭಿರ್ಗಣೈಃ ॥ ೨೫ ॥ ಸನಕಾದ್ಯೈ
ರ್ಯೋಗಿಭಿಶ್ಚವಸಿಷ್ಠಾದಿಮಹರ್ಷಿಭಿಃ । ಏವಮಾದಿಭಿರನ್ಯೈಶ್ಚಸೇವಿತಂಪಾರ್ವತೀ
ಪತಿಂ ॥ ೨೬ ॥ ದದೃಶುರ್ನಿರ್ಜರಾಸ್ಸರ್ವೇವಿಷ್ಣ್ವಾದ್ಯಾಹೃಷ್ಟಮಾನ
ಸಾಃ । ನತ್ವಾಕೃತಾಂಜಲಿಪುಟಾಃಶಂಕರಂತುಷ್ಟುವುಸ್ತದಾ ॥ ೨೭ ॥ ದೇವ
ದೇವಜಗನ್ನಾಥಶೂಲಪಾಣೇತ್ರಿಲೋಚನ । ನಮಸ್ತೇಪಾರ್ವತೀನಾಥಜಗ
ದ್ವಂದ್ಯಸದಾಶಿವ ॥ ೨೮ ॥ ಪಾಹಿನಃಶರಣಂಪ್ರಾಪ್ತಾಂತ್ಸರ್ವಲೋಕೈಕ

ಯೂ, ಮಾಣಿಕ್ಯ ಮಯ ಕಿರೀಟದಿಂದ ಪ್ರಕಾಶಿಸುತ್ತಿರುವನಾಗಿಯೂ
॥ ೨೧ ॥ ಗಂಗೆಯಂಧರಿಸುವನಾಗಿಯೂ, ಸರ್ಪಭೂಷಣಗಳುಳ್ಳವನಾಗಿ
ಯೂ, ಮಾಣಿಕ್ಯಗಳಿಂದ ಮಾಡಲ್ಪಟ್ಟ ಭುಜಕೀರ್ತಿಗಳುಳ್ಳವನಾಗಿಯೂ,
ಸುವರ್ಣ ಕುಂಡಲಧಾರಿಯಾಗಿಯೂ, ಮುಕ್ತಾಹಾರವಿರಾಜಿತನಾಗಿಯೂ
॥೨೨॥ ತ್ರಿನೇತ್ರನಾಗಿಯೂ, ಎಂಟು ಭುಜಗಳುಳ್ಳವನಾಗಿಯೂ, ವರ,
ಅಭಯ, ಮೃಗ, ತ್ರಿಶೂಲ, ಪರಶು, ಢಕ್ಕಾ, ಟಂಕ, ಡಮರುಗಗಳಂ ಧರಿಸಿ
ರುವನಾಗಿಯೂ ॥೨೩॥ ಪ್ರಮಥಗಣ ಪರಿವೃತನಾಗಿಯೂ, ಶರೀರಧಾರಿಗ
ಳಾದ ಗಂಗಾದಿ ಸಮಸ್ತ ತೀರ್ಥಂಗಳಿಂದಲೂ, ಸಮುದ್ರಂಗಳಿಂದಲೂ,
ಪರ್ವತಂಗಳಿಂದಲೂ, ಸಿದ್ಧ ॥೨೪॥ ಯಕ್ಷ, ರಾಕ್ಷಸ, ಕಿನ್ನರ, ಭೂತ,
ಬ್ರಹ್ಮ, ಗಣಂಗಳಿಂದಲೂ, ನಂದಿಭೃಂಗ್ಯಾದಿ ಶೈವಗಣಗಳಿಂದಲೂ ॥೨೫॥
ಸನಕಾದಿ ಯೋಗಿಗಳಿಂದಲೂ, ವಸಿಷ್ಠಾದಿ ಮಹರ್ಷಿಗಳಿಂದಲೂ, ಇನ್ನೂ
ಅನೇಕರಿಂದ ಸೇವಿಸಲ್ಪಡುತ್ತಿರುವ ಪಾರ್ವತೀ ಪತಿಯಾದ ಶಂಭುಮೂ
ರ್ತಿಯಂ॥೨೬॥ವಿಷ್ಣ್ವಾದಿ ದೇವತೆಗಳೆಲ್ಲರು ಸಂತೋಷವಂ ಹೊಂದಿದ ಮ
ನಸ್ಸುಳ್ಳವರಾಗಿ ದರ್ಶನವಂ ಮಾಡಿ, ನಮಸ್ಕಾರವಂ ಮಾಡಿ ಅಂಜಲಿಬದ್ಧ
ರಾಗಿ ವಕ್ಷ್ಯಮಾಣ ಪ್ರಕಾರದಿಂ ಸ್ತೋತ್ರವಂ ಮಾಡಿದರು ॥೨೭॥ ಹೇ,
ದೇವದೇವ ಜಗನ್ನಾಥ, ಶೂಲಪಾಣೇ, ತ್ರಿಲೋಚನ, ಪಾರ್ವತೀನಾಥ,

ಸಂಶ್ರಯ । ಇತಿಸ್ತುತ್ವಾಮಹಾದೇವಂಸ್ವಕಾರ್ಯಮವದಂತ್ಸುರಾಃ ॥ ೨೦ ॥ ಕೇಶಿಬಾಧೇನದೇವೇಶತ್ರಿಲೋಕಾಶ್ಚಭಯಂಗತಾಃ । ತ್ವಮುಪಾಯೇನತಂಹತ್ವಾ ತತೋಸ್ಮಾಕಂಸುಖಂಕುರು ॥ ೨೧ ॥ ಇತ್ಯುದೀರಿತವಾಕರ್ಣ್ಯಶಂಭುಶ್ರೀಪತಿನಾಸಹ । ಋಷೀನ್ದೇವಾಂತ್ಸಮಾಹೂಯಕರಿಷ್ಯಾಮೀತ್ಯವೋಚತ ॥ ೨೨ ॥ ತತೋವೃಷಭಮಾರುಹ್ಯಪಾರ್ವತೀಸಹಿತಶ್ಶಿವಃ । ಲಕ್ಷ್ಮೀನಾಥೇನಶಕ್ರಾದ್ಯೈಶ್ಚಸುರೈರ್ಮುನಿಭಿರೇವಚ ॥ ೨೩ ॥ ಸ್ವಕೀಯೈರ್ಗಣನಾಥೈಶ್ಚಸಹಿತಃಪ್ರಸ್ಥಿತೋಭುವಂ । ತತಸ್ತುಕಪಿಲಾತೀರಮಾಸಾದ್ಯಾಥಸ್ವಧಾಮಕಃ ॥ ೨೪ ॥ ಉವಾಚಲಕ್ಷ್ಮೀರಮಣಮುಪಾಯಂತಸ್ಯನಾಶನೇ । ವದವಿಷ್ಣೋಮುನೀಂದ್ರಾಣಾಂಸುರಾಣಾಂಹಿತಕಾಮ್ಯಯಾ ॥ ೨೫ ॥ ಶಸ್ತ್ರಾದಿಭಿಃಕಥಂಯುದ್ಧೇನಹನ್ಯೋಯಂದುರಾತ್ಮವಾನ್ । ತ್ವಯಾದತ್ತಮವಧ್ಯತ್ವಂಕೇನಾಪ್ಯನ್ಯೇನ ಮಾಂವಿನಾ ॥ ೨೬ । ಇತಿತಸ್ಯವಚಃಶ್ರುತ್ವಾಶಂಭುಮಪ್ಯಾಹಮಾಧವಃ । ವ

ಜಗದ್ವಂದ್ಯ ಸದಾಶಿವ, ನಿನಗೆ ನಮಸ್ಕಾರವು ॥೧೯॥ ಸರ್ವಲೋಕಗಳಿಗೂ ಮುಖ್ಯಾಶ್ರಯವಾದ ಶಿವನೆ, ನಿನ್ನನ್ನು ಸಂರಕ್ಷಕನೆಂದು ಹೊಂದಿದ ನಮ್ಮಗಳಂ ಸಂರಕ್ಷಿಸೆಂದು ಮಹಾ ದೇವನಂ ಸ್ತುತಿಸಿ ದೇವತೆಗಳು ಸ್ವಕಾರ್ಯಗಳಂ ಹೇಳಿದರು ॥೨೦॥ ಓ, ದೇವಪತಿಯಾದ ಶಿವನೇ, ಆ ಕೇಶಿಯ ಬಾಧೆಯಿಂದ ಲೋಕತ್ರಯವೂ ಭಯವಂ ಹೊಂದಿ ಇಧೆ. ನೀನು ಉಪಾಯದಿಂದ ಅವನಂ ಸಂಹರಿಸಿ ನಮ್ಮಗಳಿಗೆಸುಖವಂ ಉಂಟುಮಾಡೆಂದು೨೧ ಹೇಳಿದ ವಾಕ್ಯವಂ ಕೇಳಿ ಶಿವನು ಹರಿಯೊಡನೆ ಋಷಿಗಳನ್ನೂ ದೇವತೆಗಳನ್ನೂ ಕರದು ನಿಮ್ಮಇಷ್ಟಪ್ರಕಾರಮಾಡುವೆನೆಂದು ಹೇಳಿ೨೨ ಅನಂತರದಲ್ಲಿ ಪಾರ್ವತೀ ಸಮೇತನಾಗಿ ವೃಷಭ ವಾಹನದ ಮೇಲೆ ಕುಳಿತುಕೊಂಡು ವಿಷ್ಣುವಿನ ಸಂಗಡಲೂ, ಇಂದ್ರಾದಿ ದೇವತೆಗಳ ಸಂಗಡಲೂ, ಋಷಿಗಳ ಸಂಗಡಲೂ, ಪ್ರಮಥಗಣಾಧ್ಯಕ್ಷರ ಸಂಗಡಲೂ, ಕೂಡಿದವನಾಗಿ ಭೂಮಿಯಂಕುರಿತು ಪ್ರಯಾಣನಂಮಾಡಿದನು. ಅನಂತರದಲ್ಲಿ ಕಪಿಲಾತೀರವಾದ ಸ್ವಕ್ಷೇತ್ರಕ್ಕೆ ॥೨೪॥ ಆ ಕೇಶಿನಾಮಕನ ಸಂಹಾರ ವಿಷಯವಾಗಿ ಲಕ್ಷ್ಮೀಪತಿಯಂ ಕುರಿತುಉಪಾಯವಂಕೇಳಿದನು. ಏನಂದರೆ, ಓ, ವಿಷ್ಣುವೆ ಋಷಿಗಳಿಗೂ, ದೇವತೆಗಳಿಗೂ, ಹಿತಾಪೇಕ್ಷೆಯಿಂದ ಈ ಅಸುರನ ವಧೋಪಾಯವಂ ಹೇಳು,೨೫ಈದುರಾತ್ಮನು ಯುದ್ಧದಲ್ಲಿ ಶಸ್ತ್ರಾದಿಗಳಿಂದ ಸಂಹರಿಸುವದಕ್ಕೆ ಸಾಧ್ಯವಲ್ಲವೆಂತಲೂ, ನನ್ನ ವಿನಹಾ ಯಾರಿಂದಲೂ ಸಂಹಾರವಾಗುವದಿಲ್ಲವೆಂತಲೂ,ನಿನ್ನಿಂದ ವರವುಕೊಡಲ್ಪಟ್ಟಿತಲ್ಲಾ೨೬ಎಂದುಕೇಳಿ

ಕ್ಷ್ಯಾಮ್ಯಹಂವಿರೂಪಾಕ್ಷಯುಕ್ತಿಂತಸ್ಯವಿನಾಶನೇ ॥೩೭॥ ಸರ್ವಾನ್ಮುನೀಂ
ಸ್ತ್ವಮಾಹೂಯಯಜ್ಞಮಾತ್ಸಾದ್ಯಸತ್ವರಂ । ಗೋಪ್ಯಂಕೃತ್ವಾತ್ಮರೂಪಂ
ತುಯಾಗಾಗ್ನೌತ್ವಂದಹಾಶುತಂ ॥ ೩೮ ॥ ತಚ್ಛ್ರುತ್ವಾಶಂಕರಶ್ಶೀಘ್ರಂ
ಕಾರಯಾಮಾಸತತ್ರಚ । ಮುನಿಭಿಸ್ತತತೋಯಜ್ಞೋಮಹದಾಸೀತ್ತತೋ
ಭುವಿ ॥ ೩೯ ॥ ತಚ್ಛ್ರುತ್ವಾಸೋಸುರಸ್ತತ್ರಹ್ಯಭ್ಯಧಾವತವೇಗತಃ । ತ
ದ್ಧವಿರ್ಭೋಕ್ತುಕಾಮಸ್ಸಂಚಿಷ್ಟವಾಸ್ತಂವಹ್ನಿರೂಪವಾನ್ ॥ ೪೦ ॥ ದದಾಹಕೇ
ಶಿನಂದುಷ್ಟಂ ಪುಷ್ಪವೃಷ್ಟಿಃಪಪಾತಹ । ಶತ್ರೋರಾಗಮನಂದೃಷ್ಟ್ವಾವಿಪ
ಲಾಯಂತೆತ್ರಯೇಜನಾಃ ॥ ೪೧ ॥ ಶಿವೇನಸಂಹೃತೇತಸ್ಮಿನ್ ತೇತ್ವಿಮಾಯಾಗ
ಮಂಟಪಂ । ಋಷಯೋಭ್ಯಾಗಮಂತ್ಸರ್ವೇಶತಕ್ರತುಮುಖಾಸ್ಸುರಾಃ ॥೪೨॥
ಕೃತಾಂಜಲಿಪುಟಾಭೂತ್ವಾಶಂಕರಂತುಷ್ಟುವುಸ್ತದಾ । ಪ್ರಾಣಿನಾಮುಪ
ಕಾರಾಯದೇವರ್ಷೀಣಾಂಹಿತಾಯಚ । ಸಮ್ಯಕ್ಕೃತಮಿಮಾಕಾಂತಕೇಶಿ
ಸಂಹರಣಂತ್ವಯಾ ॥ ೪೩ ॥ ತತಃಶಿವಃಪ್ರಸನ್ನೋಭೂದ್ಯಾಗಸ್ಥಾಲಾನಿವಾಸಿ

ದ ಶಿವನ ವಚನವಂ ಕೇಳಿ ಮಾಧವನು ಉಪಾಯವನಂ ಕುರಿತು ಓ ವಿರೂ
ಪಾಕ್ಷನೆ, ಆ ಅಸುರನ ಸಂಹಾರವಿಷಯವಾಗಿಯುಕ್ತಿಯಂಹೇಳುತ್ತೇನೆ॥೩೭
ಶೀಘ್ರವಾಗಿ ಸಮಸ್ತ ಋಷಿಗಳಂ ಕರಿಸಿ ಯಜ್ಞಾರಂಭವಂ ಮಾಡಿಸಿ ನಿನ್ನ
ಸ್ವರೂಪವಂ ಗೋಪ್ಯವಂಮಾಡಿಕೊಂಡು ಆ ರಾಕ್ಷಸನನ್ನು ಯಜ್ಞಾಗ್ನಿಯಲ್ಲಿ
ದಹಿಸೆಂದು ಹೇಳಿದ।೩೮।ವಿಷ್ಣು ವಚನವಂ ಕೇಳಿ,ಶಿವನು ಶೀಘ್ರವಾಗಿ ಆಕ್ಷೇ
ತ್ರದಲ್ಲಿಯಜ್ಞವಂಮಾಡಿಸಿದನು. ಭೂಮಿಯಲ್ಲಿಯಜ್ಞವಾಗುತ್ತೆಂದುಶ್ರೀಮ
ಹತ್ಪ್ರಸಿದ್ಧಿಯಂ ಕೇಳಿ, ಆ ರಾಕ್ಷಸನು ವೇಗದಿಂದ ಆ ಯಜ್ಞಸ್ಥಾನಕ್ಕೆ ಹ
ವಿರ್ದ್ರವ್ಯವಂಭುಂಜಿಸುವ ಅಪೇಕ್ಷೆಯುಳ್ಳವನಾಗಿಓಡಿಬರಲುಅಗ್ನಿರೂಪಿಯಾ
ದ ಶಿವನು ಆದುಷ್ಟಾತ್ಮನಾದ ಕೇಶಿಯೆಂಬ ರಾಕ್ಷಸನಂ ದಹಿಸಿದನು॥೪೦॥ಆ
ಗ ಅಂತರಿಕ್ಷದಿಂದ ಪುಷ್ಪವೃಷ್ಟಿಯು ವರ್ಷಿಸಿತು. ಯಜ್ಞ ಸ್ಥಾನದಲ್ಲಿ
ಯಜ್ಞ ಶತ್ರುವಾದ ಅಸುರನ್ನಬರುವಿಕೆಯಂ ಕೇಳಿ ಯಾವ ಋಷಿಗಳು ಓಡಿ
ಹೋಗುತ್ತಿದ್ದರೋ॥೪೧ಅವರೆಲ್ಲರು ಶಿವನಿಂದ ಆ ರಾಕ್ಷಸನು ಸಂಹರಿಸಲ್ಪಡ
ಲು ಯಾಗ ಮಂಟಪವಂ ಕುರಿತು ಇಂದ್ರಾದಿ ದೇವತೆಗಳೆಲ್ಲರೂ ಬಂದಂ
ಥಾವರಾದರು ॥೪೨॥ ಅವರೆಲ್ಲರೂ ಅಂಜಲಿ ಬದ್ಧರಾಗಿ ಶಿವನಂ ಸ್ತುತಿಸಿದ
ರು. ಪ್ರಾಣಿಗಳ ಉಪಕಾರಕ್ಕಾಗಿಯೂ, ದೇವ ಋಷಿಗಳ ಹಿತಕ್ಕಾಗಿಯೂ
ಕೇಶಿ ಸಂಹಾರವಂ ಚೆನ್ನಾಗಿ ಮಾಡಿದಿರೆಂದು ಸ್ತುತಿಸಲು ೪೩ ಅನಂತರ

ನಾಂ । ತದ್ದೇಹಾದುದ್ಬಭೌಯಾಗಶಾಲಾಯಾಂವಿಷಮುಲ್ಬಣಂ ॥ ೪೪ ॥ ತತೋಮಹೀಂಬಾಧತೇತದ್ಧಾಲಾಹಲವಿಷಂತದಾ । ತೈಸ್ಸುರೈಃಪ್ರಾರ್ಥಿತೋಽಭೂತ್ವಾದಧಾರವಿಷಮುಲ್ಬಣಂ ॥ ೪೫ ॥ ತತೋಬ್ರಹ್ಮಾದಯೋದೇವಾಮುನಯೋವಿಷಹಾರಿಣಂ । ಪೂಜಯಂತಿಮಹಾಭಕ್ತ್ಯಾಕೇಶಿಸಂಹಾರಿಣಂಶಿವಂ । ಕೇಶವಂಕಮಲಾನಾಥಂವಾಮಭಾಗೇಚಪಾರ್ವತೀಂ ॥ ೪೬ ॥ ತತಸ್ತೈಃಪ್ರಾರ್ಥಿತೌದೇವೌಮುನಿಭಿರ್ಬ್ರಹ್ಮಣಾಭುವಿ । ಗೌರೀಪತಿರಮಾಕಾಂತೌತೌವಾಸಂತತ್ರಚಕ್ರತುಃ ॥ ೪೭ ॥ ಶ್ರೀಸೂತಃ ॥ ಶ್ರೀಭೂಮಿಕೈಲಾಸಪುರೇಮಹೇಶೋಗೌರೀಸಮೇತಸ್ಸಹಕೇಶವೇನ । ನಂದೀಶಭೃಂಗೀಶಕುಮಾರಮುಖ್ಯೈರುವಾಸವಿಘ್ನೇಶಮುಖೈರ್ಗಣೈಶ್ಚ ॥ ಮಾಹಾತ್ಮ್ಯಮೇತತ್ಪ್ರತತಾಂಭವಾಬ್ಧಿದುರ್ದುಃಖಾಪಹಾಮುಕ್ತಿರಮಾಕರಸ್ಥಾ । ಉಮಾಪತಿಂಯೇಪ್ರಣಮಂತಿಭಕ್ತ್ಯಾತೇಯಾಂತಿಸೌಖ್ಯಂಪದಮೀಶಿತುಶ್ಚ ॥

ಇತಿ ಸ್ಕಾಂದಪುರಾಣೇಗರಳಪುರೀಮಾಹಾತ್ಮ್ಯೇಕೇಶಿವಧೋ
ನಾಮ ದ್ವಿತೀಯೋಽಧ್ಯಾಯಃ

ಶಿವನು ಯಾಗಶಾಲಾವಾಸಿಗಳಾದ ಎಲ್ಲರಿಗೂ ಪ್ರಸನ್ನನಾದನು. ಆ ಯಾಗಶಾಲೆಯಲ್ಲಿ ಆ ಅಸುರನ ದೇಹದಿಂದ ವಿಷವು ಆಶ್ಚರ್ಯಕರವಾಗಿ ಹುಟ್ಟಿತು॥೪೪॥ ತದನಂತರ ಆ ವಿಷಯವು ಭೂಮಿಯನ್ನು ಬಾಧಿಸುತ್ತಿತ್ತು. ಆಗ ಶಿವನು ದೇವತೆಗಳಿಂದ ಪ್ರಾರ್ಥಿಸಲ್ಪಟ್ಟು ಆಶ್ಚರ್ಯವಾಗಿ ವಿಷವಂ ಧರಿಸಿದನು ॥೪೫॥ ಅನಂತರ ಬ್ರಹ್ಮಾದಿದೇವತೆಗಳು, ಋಷಿಗಳು ಸಹ ವಿಷಹಾರಿಯಾಗಿಯೂ, ಕೇಶಿಸಂಹಾರಿಯಾಗಿಯೂ ಇರುವ ಶಿವನಂ ಭಕ್ತಿಯಿಂದ ॥೪೬॥ ಕಮಲಾನಾಥನಾದ ವಿಷ್ಣುವಿನ ವಾಮ ಭಾಗದಲ್ಲಿರುವ ಪಾರ್ವತಿಯನ್ನು ದೇವತೆಗಳೂ, ಋಷಿಗಳೂ ಬ್ರಹ್ಮನೊಡನೇ ಪ್ರಾರ್ಥಿಸಲು ಹರಿಹರರಿಬ್ಬರು ಅಲ್ಲಿ ನಿವಾಸವಂ ಮಾಡಿದರು ॥ ೪೭ ॥

ಸೂತಮುನಿಯು ಹೇಳುತ್ತಾನೆ ಈ ಭೂಕೈಲಾಸದಲ್ಲಿ ಗೌರೀಸಮೇತನಾದ ಮಹೇಶ್ವರನು, ವಿಷ್ಣು ನಂದಿ, ಭೃಂಗಿ, ಕುಮಾರ, ವಿಘ್ನೇಶ, ಮೊದಲಾದ ಪ್ರಮಥ ಗಣಗಳೊಡನೆ ಅಲ್ಲಿ ವಾಸವಂ ಮಾಡಿದನು, ಈ ಮಹಾತ್ಮ್ಯವಂ ಕೇಳಿದವರಿಗೆ ದುಃಖ ನಾಶಕರವಾದ ಮುಕ್ತಿಯು ಹಸ್ತಗತವಾಗುವದು. ಉಮಾಪತಿಯಂ ನಮಸ್ಕಾರವಂ ಮಾಡಿದವರಿಗೆ ಶಿವ ಪದವಿಯು ಉಂಟಾಗುವದೆಂಬಿಲ್ಲಿಗೆ ಸ್ಕಾಂದಪುರಾಣಸ್ಥವಾದ ಗರಳಪುರೀ ಮಹಾತ್ಮ್ಯೆಯಲ್ಲಿ ಕೇಶಿವಧೆಯೆಂಬ ಎರಡನೆ ಅಧ್ಯಾಯವು ಸಮಾಪ್ತವು.

॥ ಋಷಯಃ ॥ ಸಮ್ಯಗುಕ್ತಂಮಹಾಭಾಗಮಹಾತ್ಮ್ಯಂಕೇಶಿವೈರಿಣಃ । ಕೇಶಿಸಂಹರಣಂಚಾಪಿಶ್ರುತಮಸ್ಮಾಭಿರಾದರಾತ್ ॥ ೧ ॥ ಪುನರ್ವದಮುನಿಶ್ರೇಷ್ಠಕ್ಷೇತ್ರಮಾಹಾತ್ಮ್ಯಮುತ್ತಮಂ । ದಗ್ಧೇಕೇಶಿನಿತದ್ದೇಹಾದ್ವಿಷಂಜಾತಮಿತಿತ್ವಯಾ ॥ ೨ ॥ ವರ್ಣಿತಂತತ್ಕಥಂತತ್ರಕಾರಣಂಬ್ರೂಹಿತತ್ವತಃ ॥ ಶ್ರೀಸೂತಃ ॥ ಸಮ್ಯಕ್ಪೃಷ್ಟಮಿಮಂಪ್ರಶ್ನಂವಕ್ಷ್ಯಾಮಿಶೃಣುತಾದರಾತ್ ॥ ೩ ॥ ಇತಿಪ್ರಾಹಮುನಿಶ್ರೇಷ್ಠಃಕಾರಣಂತದ್ವಿಷೋದ್ಭವೇ । ಪುರಾಸಮುದ್ರಮಥನಾಜ್ಜಾತಂಹಲಾಹಲಂವಿಷಂ ॥ ೪ ॥ ಧೃತಂಶಿವೇನಹಿಸುರೈಃಪ್ರಾರ್ಥಿತೇನತದಾಮೃತಂ । ಬಭೂವತತ್ರಚಸುರೈಃಪೀತಂತದಮೃತಂಶುಭಂ ॥ ೫ ॥ ಅಸುರಾಣಾಂನದತ್ತಂತದ್ಧೃತ್ವಾಕೇಶ್ಯಸುರೋತ್ತಮಃ । ತಾಂದೃಷ್ಟ್ವಾಕುಪಿತಸ್ತತ್ರಮೋಹಿನೀಮೋಹಿತೋಭವತ್ ॥ ೬ ॥ ಏತತ್ಸಂಹರಣಾರ್ಥಂತುಶರಕಾಂಡೇವಿಷಂಸ್ಥಿತಂ । ಶಿವಸ್ಯಪಾನಸಮಯೇಪತಿತಂಕಿಂಚಿದೇವಹಿ ॥ ೭ ॥ ತದ್ಧತ್ತ್ವಾಮೋಹಿ

ಋಷಿಗಳೆಲ್ಲರು ಸೂತನಂ ಕುರಿತು ಕೇಳುತ್ತಾರೆ. ಓ ಮಹಾ ಪುಣ್ಯಾತ್ಮನಾದ ಸೂತಮುನಿಯೇ, ಚನ್ನಾಗಿ ಹೇಳಲ್ಪಟ್ಟ ಶಿವಮಹಾತ್ಮ್ಯವು ಕೇಶಿಯ ಸಂಹಾರವು ನಮ್ಮಗಳಿಂದಾ ಆದರಣಪೂರ್ವಕವಾಗಿ ಕೇಳಲ್ಪಟ್ಟಿತು ॥೧॥ ಓ ಮುನಿಶ್ರೇಷ್ಠನೇ ಉತ್ತಮವಾದ ಕ್ಷೇತ್ರಮಹಾತ್ಮ್ಯವಂ ಮತ್ತು ಹೇಳಬೇಕು. ಆ ಕೇಶಿಯೆಂಬವನು ದಗ್ಧವಾದಮೇಲೆ ಅವನದೇಹದಿಂದಾ ವಿಷವು ಹುಟ್ಟಿತೆಂತು ನಿನ್ನಿಂದಾ ಹೇಳಲ್ಪಟ್ಟಿತು ॥೨॥ ಆ ವಿಷವು ಹುಟ್ಟುವದಕ್ಕೆ ಕಾರಣವೇನು ಯಥಾರ್ಥವಾಗಿ ಹೇಳಬೇಕೆನಲು ಸೂತಮುನಿಯು ಹೇಳುತ್ತಾನೆ. ಓ ಋಷಿಗಳಿರಾ ಈ ಪ್ರಶ್ನೆಯಂ ಚನ್ನಾಗಿ ಕೇಳಿದಿರಿ ಹೇಳುತ್ತೇನೆ ಆದರಣೆಯಿಂದಾ ಕೇಳಿರಿ ॥೩॥ ಆ ಸೂತಋಷಿಯು ವಕ್ಷ್ಯಮಾಣಪ್ರಕಾರವಾಗಿ ವಿಷಹುಟ್ಟುವದಕ್ಕೆ ಕಾರಣವಂ ಹೇಳುತ್ತಾನೆ. ಪೂರ್ವದಲ್ಲಿ ಸಮುದ್ರಮಥನೆಯಿಂದ ಹಾಲಾಹಲವೆಂಬ ವಿಷವು ಹುಟ್ಟಿತು ॥೪॥ ಆ ಸಮಯದಲ್ಲಿ ಈಶ್ವರನು ದೇವತೆಗಳಿಂದ ಪ್ರಾರ್ಥಿಸಲ್ಪಟ್ಟವನಾಗಿ ಆ ವಿಷವಂ ಧರಿಸಿದನು. ತದನಂತರ ಅಮೃತವು ಹುಟ್ಟಲು ದೇವತೆಗಳು ಶುಭಪ್ರದವಾದ ಆ ಅಮೃತವಂ ಪಾನಮಾಡಿದರು ॥೫॥ ಆ ಸಮಯದಲ್ಲಿ ಈ ಕೇಶಿಯೆಂಬ ದೈತ್ಯವರನು ರಾಕ್ಷಸರಿಗೆ ಆ ಅಮೃತವನ್ನು ಕೊಡಲಿಲ್ಲವೆಂದು ಕೇಳಿ ಅತ್ಯಂತ ಕೋಪಿಷ್ಠನಾಗಿ ವಿಷ್ಣುವಿನಿಂದಾ ಧರಿಸಲ್ಪಟ್ಟ ಸ್ತ್ರೀವೇಷವಂ ನೋಡಿ ಆ ಮೋಹಿನಿಯಿಂದಾ ಮೋಹಿತನಾದವನಾದನು ॥ ೬ ॥ ಶಿವನು ವಿಷಪಾನವಂ ಮಾಡುವ ಸ

ನೀವೇಷ ಧರೇಣಹರಿಣಾತದಾ । ತಸ್ಮೈದುಷ್ಟಾತ್ಮನೇಸೋಪಿಪಪೌವಿಷಮನುತ್ತಮಂ॥೮॥ಹರೇರ್ವರಪ್ರಸಾದೇನಶಿವಶೇಷ ಪ್ರಭಾವತಃ। ನಮೃತಸ್ಸೋಸುರಸ್ತಸ್ಯ ಮಹದ್ಬಲಮಭೂತ್ತದಾ ॥ ೯ ॥ ಶಿವೇನಸಂಹೃತೇತಸ್ಮಿನ್ತದೀಯಂವಿಷಮುದ್ಬಭೌ । ತಸ್ಮಾತ್ತದ್ಧಾಮಗರಳಕ್ಷೇತ್ರಂಹಿಪ್ರಥಿತಂಭುವಿ ॥೧೦॥ ತತ್ರಾಸ್ತಿಚಮಹಾಭಾಗಾಕಪಿಲಾಸರಿದುತ್ತಮಾ । ತಸ್ಯಾಃಪ್ರಭಾವಂವಕ್ಷ್ಯಾಮಿಹ್ಯುತ್ಪತ್ತಿಂಚವಿಶೇಷತಃ ॥ ೧೧ ॥ ತಸ್ಯಾಶ್ಶ್ರವಣಮಾತ್ರೇಣತೀರ್ಥಯಾತ್ರಾಫಲಂಲಭೇತ್ । ಅಯೋಧ್ಯಾನಾಮನಗರೀತ್ರಿಷುಲೋಕೇಷುವಿಶ್ರುತಾ ॥೧೨॥ ತಸ್ಯಾಂತುಸಗರೋನಾಮರಾಜಾಭೂತ್ಸರ್ವಲಕ್ಷಣಃ ॥ ತಸ್ಯಜಾತಾನಿಪುತ್ರಾಣಾಂ ಮುನೀಂದ್ರಸ್ಯಪ್ರಭಾವತಃ ॥ ೧೩ ॥ ಪತ್ನ್ಯಾಂಷಷ್ಟಿಸಹಸ್ರಾಣಿದ್ವಿತೀಯಾಯಾಂಮಹೀಪತೇಃ । ಜೇಷ್ಠಪತ್ನ್ಯಾಮಭೂತ್ಪುತ್ರಸ್ತ್ವಸಮಂಜಸಇತ್ಯಥ॥೧೪॥ ತತಸ್ಸರಾಜಾಹಿಮುನೀಮಂತ್ರಿಣಸ್ಸ್ವಾಂತ್ಸಮಾನಯತ್ । ವಸಿಷ್ಠ

ಮಯದಲ್ಲಿ ಸ್ವಲ್ಪ ವಿಷವು ಕೆಳಗೆ ಜಾರಿಬಿದ್ದು ಈ ಕೇಶಿಯ ಸಂಹಾರಾರ್ಥವಾಗಿ ಶರಕಾಂಡದಲ್ಲಿ ನಿಂತುಯಿದ್ದದ್ದಾಯಿತು ॥೭॥ ಅದನ್ನ ತೆಗದು ಮೋಹಿನೀವೇಷಧಾರಿಯಾದ ಹರಿಯು ದುಷ್ಟಾತ್ಮನಾದ ಆ ಕೇಶಿಗೆ ಕೊಟ್ಟನು ।೮। ಆ ಅಸುರನು ಸರ್ವೋತ್ತಮವಾದ ವಿಷವಂ ಕುಡಿದನು ॥ ೮ ॥ ಶ್ರೀಹರಿಯವರವರಪ್ರಸಾದದಿಂದಲೂ, ಶಿವನಿಂದ ಪಾನಮಾಡಲ್ಪಟ್ಟ ವಿಷ ಶೇಷಪ್ರಭಾವದಿಂದಲೂ, ಆ ಅಸುರನು ಮೃತನಾಗಲಿಲ್ಲ. ಅವನಿಗೆ ಮತ್ತು ಮಹಾ ಬಲ ಉಂಟಾಯಿತು ॥೯॥ ಅಂಥಾ ಆ ದೈತ್ಯನು ಶಿವನಿಂದಸಂಹರಿಸಲ್ಪಡಲು ಅವನ ದೇಹದಲ್ಲಿದ್ದ ವಿಷವು ಹುಟ್ಟಿತು. ಆದಕಾರಣ ಆ ಸ್ಥಾನವು ಗರಳಕ್ಷೇತ್ರವೆಂದು ಭೂಮಿಯಲ್ಲಿ ಪ್ರಸಿದ್ಧವಾಯಿತು ॥೧೦॥ ಆ ಕ್ಷೇತ್ರದಲ್ಲಿ ಮಹಾ ಪುಣ್ಯಪ್ರದವಾದ ಕಪಿಲಾ ನದಿಯು, ಅತ್ಯುತ್ತಮವಾಗಿರುತ್ತಿದೆ. ಆ ನದಿಯ ಪ್ರಭಾವವನ್ನು ವಿಶೇಷವಾಗಿ ಹೇಳುತ್ತೇನೆ ೧೧ ಆ ನದೀ ಪ್ರಭಾವಶ್ರವಣಮಾತ್ರದಿಂದಲೇ ತೀರ್ಥಯಾತ್ರಾಫಲವು ಲಭಿಸುವದು. ಮೂರು ಲೋಕಗಳಲ್ಲಿಯೂ ಪ್ರಸಿದ್ಧವಾದ ಅಯೋಧ್ಯ ಯೆಂಬ ಪಟ್ಟಣದಲ್ಲಿ ॥ ೧೨॥ ಸರ್ವಲಕ್ಷಣ ಲಕ್ಷಿತನಾದ ಸಗರಚಕ್ರವರ್ತಿಯು ಋಷಿಪ್ರಭಾವದಿಂದ ತನ್ನ ದ್ವಿತೀಯಪತ್ನೀಯಲ್ಲಿ ಅರವತ್ತು ಸಾವಿರ ಪುತ್ರರಂ ಪಡದನು ॥೧೩॥ ಜ್ಯೇಷ್ಠ ಪತ್ನಿಯಲ್ಲಿ ಅಸಮಂಜಸನೆಂಬ ಒಬ್ಬ ಮಗನು ॥೧೪॥ ಹುಟ್ಟಿದನು. ಅನಂತರದಲ್ಲಿ ಆ ಸಗರ ಚಕ್ರವರ್ತಿಯು ಆದರಣೆಯಿಂದ ಮಂತ್ರಿಗಳನ್ನು ವಸಿಷ್ಠ ಪ್ರ

ಪ್ರಮುಖಾಂಸ್ತ್ವರ್ಷೀಂಸ್ತೇಸಮಾಗತ್ಯತ್ವಸತ್ವರಂ॥೧೫॥ ದತ್ತ್ವಾಸನಗೃಹೀತಾ
ರ್ಘ್ಯಾಇದಂವಚನಮಬ್ರುವನ್ । ಅಸ್ಮದಾಗಮನಂಕಿಂತೇಕಾರಣಂವದಭೂ
ಪತೇ ॥ ೧೬ ॥ ತಚ್ಛ್ರುತ್ವಾಪಾರ್ಥಿವೇಂದ್ರೋಪಿಪ್ರೋವಾಚಮುನಿಸತ್ತಮಾನ್।
ಹಯಮೇಧಂಯಿಯಕ್ಷುಃಕಾಮೋವಕ್ತುಮರ್ಹಥತದ್ವಿಧಿಂ ॥ ೧೭ ॥ ತಥಾಸ್ತು
ಹಯಮೇಧಂತ್ವಂಕುರುಷ್ವವಿಧಿವನ್ನೃಪ । ವಿಸೃಜತ್ವಂತುಪುತ್ರಾಣಾಂಸ
ಮರ್ಥಾನಾಂಚಪೃಷ್ಠತಃ ॥ ೧೮ ॥ ತವಷಷ್ಟಿಸಹಸ್ರಾಣಿಪ್ರೇಷಯಸ್ವಾಶ್ವ
ರಕ್ಷಣೇ । ತಚ್ಛ್ರುತ್ವಾರಾಜವರ್ಯೋಪಿಪುತ್ರಾನಾಹೂಯಸತ್ವರಂ ॥ ೧೯ ॥ ಅ
ಶ್ವಂವಿಸರ್ಜಯಾಮಾಸ ಪುತ್ರಾಣಾಂತುಸಮೂಹಕಂ । ತತಶ್ಶಕ್ರತುರ್ದೃ
ಷ್ಟ್ವಾಹಯಮೇಧಂ ಮಹೀಪತೇಃ॥ ೨೦ ॥ಚೋರರೂಪೇಣತಂಹೃತ್ವಾಬಿಲಂ
ಗತ್ವಾಸಸಂಭ್ರಮಂ । ತತ್ರಾಪಿಕಪಿಲೋನಾಮತಪಃಕೃತ್ವಾಚತಿಷ್ಠತಿ॥೨೧॥
ತಸ್ಯಪಶ್ಚಾದ್ಧಯಂಬಧ್ವಾ ಸ್ವದೇಶಂಗತವಾಂಸ್ತದಾ । ತಮದೃಷ್ಟ್ವಾತತಸ್ಸ
ರ್ವೇಖಿನ್ನಚಿತ್ತಾಇತಸ್ತತಃ ॥ ೨೨ ॥ ಧಾವಂತಿಸರ್ವಲೋಕೇಷುವಿಚಾರ್ಯಚ

ಮುಖರಾದ ಋಷಿಗಳನ್ನು ಕರಿಸಿ ಅವರು ಬರಲು ಅವರಿಗೆ ॥೧೫॥ ಅರ್ಘ್ಯ
ಪಾದ್ಯಾದಿಗಳಂ ಕೊಟ್ಟು, ಉಚಿತಾಸನಗಳಂ ಕೊಡಲು ಅವರೆಲ್ಲರು ಕುಳಿ
ತುಕೊಂಡು ನಮ್ಮಗಳ ಬರಮಾಡುವದಕ್ಕೆ ಕಾರಣವೇನೆಂದು ರಾಯನಂ
ಕುರಿತು ಕೇಳಲು॥೧೬॥ ಆ ಸಗರ ಚಕ್ರವರ್ತಿಯು ಓ ಋಷಿಗಳಿರಾ,ಅಶ್ವ
ಮೇಧವಂ ಮಾಡುವದಕ್ಕಾಗಿ ತದ್ವಿಧಾನವಂ ಕೇಳಬೇಕೆಂದು ಕರಸಿದ ಕಾ
ರಣವಂ ಹೇಳಲು, ಋಷಿಗಳೆಲ್ಲರು ಎಲೈ ಪೃಥಿವೀಪತಿಯೇ, ಹಾಗೆಯೇ ಆಗ
ಲಿ, ವಿಧಿಪ್ರಕಾರ ಅಶ್ವಮೇಧವಂ ಮಾಡು, ಸಮರ್ಥರಾದ ಪುತ್ರರ ಹಿಂದ
ಗಡೆಯಲ್ಲಿ ಅಶ್ವವಂ ಬಿಡು ॥೧೮॥ ನಿನ್ನ ಅರವತ್ತು ಸಾವಿರ ಪುತ್ರರನ್ನ ಅ
ಶ್ವರಕ್ಷಣಾರ್ಥವಾಗಿ ಕಳುಹಿಸೆನಲು ಆ ಋಷಿ ವಾಕ್ಯವಂ ಕೇಳಿ, ಶೀಘ್ರ
ವಾಗಿ ಪುತ್ರರಂ ಕರದು ॥೧೯॥ ಆ ರಾಯನು ಕುದುರೆಯ ಹಿಂದೆ ಮಕ್ಕ
ಳನ್ನು ಕಳುಹಿಸಿದನು. ಆ ಬಳಿಕ ಇಂದ್ರನು ರಾಯನ ಅಶ್ವಮೇಧವಂ
ನೋಡಿ, ಚೋರರೂಪದಿಂದ ಅಶ್ವವಂ ಅಪಹರಿಸಿ ತ್ವರೆಯಿಂದ ಪಾತಾಳವಂ
ಹೊಕ್ಕು ಅಲ್ಲಿ ಕಪಿಲ ಋಷಿಯು ತಪವಂ ಮಾಡುತ್ತಿರಲು ॥೨೧॥ ಅವನ
ಹಿಂಭಾಗದಲ್ಲಿ ಈ ಕುದುರೆಯಂ ಕಟ್ಟಿ ಸ್ವಸ್ಥಾನಕ್ಕೆ ಹೋದನು. ಆಗ ಈ
ಸಗರಚಕ್ರವರ್ತಿಯ ಮಕ್ಕಳೆಲ್ಲರು ಆ ಕುದುರೆಯಂ ಕಾಣದೆ ಅಲ್ಲಲ್ಲಿ ತಿರು
ಗಿ ಖಿನ್ನ ಮಾನಸರಾಗಿ ॥೨೨॥ ಬಾರಿಬಾರಿಗೂ ಸರ್ವಲೋಕಗಳಲ್ಲಿಯೂ

ಪುನಃಪುನಃ । ಪಾತಾಳಂಗಂತುಕಾಮಾಸ್ತೇಮಹೀಂಸರ್ವಾಂಖನಂತಿಹಿ ॥ ೨೩ ॥
ತತ್ರಾಸ್ತಿಚಬಿಲದ್ವಾರಂತೇನಗತ್ವಾತುಸಾಗರಾಃ । ತಪಸ್ಯಂತಂಮುನಿವರಂ
ಬ್ರಹ್ಮಧ್ಯಾನಪರಾಯಣಂ ॥ ೨೪ ॥ ದದೃಶುಃಕಪಿಲಂತಸ್ಯಪಶ್ಚಾದ್ಭಾಗೇಸ್ಥಿತಂ
ಹಯಂ । ಬದ್ಧಂಚದೃಷ್ಟ್ವಾಜಲ್ಪಂತಿ ಗರ್ವಿತಾಸ್ತೇಪಿಕೋಪಿತಾಃ । ೨೫ ।
ಅನೇನೈವಗೃಹೀತೋಶ್ವಃಸ್ಥಾಪಿತಸ್ಸ್ವಸ್ಯಪೃಷ್ಠತಃ । ತೇಸರ್ವೇತಾಡಯಂತಿಸ್ಮ
ಕಪಿಲಂಮುನಿಸತ್ತಮಂ ॥ ೨೬ ॥ ತಾಂದೃಷ್ಟ್ವಾಸಹಸೋತ್ಥಾಯ ಕಾಲಾ
ಗ್ನಿಸಮಚಕ್ಷುಷಾ । ದದಾಹಸಾಗರಾಂತ್ಸರ್ವಾನ್ಕ್ಷಣಾನ್ಮುನಿವರೋತ್ತಮಃ
॥ ೨೭ ॥ ತತಸ್ತೇಷಾಂತುಗಾತ್ರಾಣಿಭಸ್ಮೀಭೂತಾನಿತತ್ರಹಿ । ಕಪಿಲೋಪಿ
ಮುನಿಶ್ಶೀಘ್ರಂಕಮಂಡಲುಜಟಾಧರಃ ॥ ೨೮ ॥ ತತ್ಸ್ಥಳಂತುಪರಿತ್ಯಜ್ಯ
ಭೂಮಾವಾಗತ್ಯಚಿಂತಯನ್ । ಗಮಿಷ್ಯಾಮಿತಪಃಕರ್ತುಂಪುನಃಕುತ್ರಾಹಮ
ದ್ಯವೈ । ೨೯ ॥ ನೀಲಾಚಲಂಗಮಿಷ್ಯಾಮಿಕರ್ಮಭೂಮೌವಿಶೇಷತಃ । ತತ್ರಸಿ
ದ್ಧಿಂಚತಪಸಃಪ್ರಾಪ್ಸ್ಯಾಮೀತಿತದಾಯಯೌ ॥ ೩೦ ॥ ದದರ್ಶನೀಲಾದ್ರಿ

ವಿಚಾರಿಸುತ್ತಾ ಪಾತಾಳವಂ ಕುರಿತು ಹೋಗಲಪೇಕ್ಷೆಯುಳ್ಳವರಾಗಿ ಭೂ
ಮಿಯನ್ನೆಲ್ಲಾ ಅಗದರು ।೨೩। ಅಲ್ಲಿ ಇದ್ದ ಬಿಲದ್ವಾರದಿಂದ ಆ ರಾಜಪುತ್ರ
ರೆಲ್ಲರೂ ಹೋಗಿ, ಅಲ್ಲಿ ತಪವಂ ಮಾಡುತ್ತಿರುವ ಬ್ರಹ್ಮಧ್ಯಾನಪರಾಯಣ
ನಾದ ಕಪಿಲ ಮಹಾ ಋಷಿಯಂ ।೨೪। ನೋಡಿ ಅವನ ಹಿಂಭಾಗದಲ್ಲಿ ಕ
ಟ್ಟಲ್ಪಟ್ಟಿರುವ ಕುದುರೆಯಂ ನೋಡಿ ಗರ್ವಿತರಾಗಿಯೂ ಕೋಪಿಷ್ಟರಾಗಿ
ಸ್ವೇಚ್ಛೆಯಾಗಿ ಮಾತನಾಡುತ್ತಾ ।೨೫। ಇವನಿಂದಲೇ ಈ ಕುದುರೆಯು
ಹಿಡಿಯಲ್ಪಟ್ಟು, ತನ್ನ ಹಿಂಭಾಗದಲ್ಲಿ ಕಟ್ಟಲ್ಪಟ್ಟಿತೆಂದು ಅವರೆಲ್ಲರು ಆ ಕಪಿ
ಲ ಮಹಾಮುನಿಯಂ ಪ್ರಹರಿಸಿದರು ।೨೬। ಆ ಋಷಿಯು ಶೀಘ್ರದಿಂದೆ
ದ್ದು ಕಾಲಾಗ್ನಿಗೆ ಸಮನಾದ ನೇತ್ರದಿಂದ ಅವರುಗಳಂ ನೋಡಿ ಕೋಪ
ದಿಂದ ದಹಿಸಿದನು ।೨೭। ತದನಂತರ ಆ ಸಗರಚಕ್ರವರ್ತಿಯ ಮಕ್ಕಳ
ಶರೀರಗಳು ಭಸ್ಮಗಳಾದವು. ಕಮಂಡಲ ಜಟಾಧಾರಿಯಾದ ಕಪಿಲಋಷಿ
ಯು ಶೀಘ್ರವಾಗಿ ।೨೮। ಆ ಸ್ಥಳವಂ ಬಿಟ್ಟು ಭೂಮಿಗೆ ಬಂದು ಈಗ
ನಾನು ತಪಸ್ಸು ಮಾಡುವದಕ್ಕೆ ಎಲ್ಲಿಗೆ ಹೋಗಲೆಂದು ಯೋಚಿಸಿದವನಾ
ಗಿ ।೨೯। ಕರ್ಮ ಭೂಮಿಯಲ್ಲಿ ವಿಶೇಷವಾದ ನೀಲಾಚಲವಂ ಕುರಿತು
ಹೋಗಬೇಕು. ಅಲ್ಲಿ ತಪಃಸ್ಸಿದ್ಧಿಯಂ ಹೊಂದುತ್ತೇನೆಂದು ಹೋಗಿ।೩೦।
ಸರ್ವ ಲಕ್ಷಣ ಯುಕ್ತವಾಗಿಯೂ, ನಾನಾ ವೃಕ್ಷಗಳ ನೆರಳುಗಳುಳ್ಳದ್ದಾಗಿ

ಮಸೌಸರ್ವಲಕ್ಷಣಸಂಯುತಂ। ನಾನಾವಿಧತರುಚ್ಛನ್ನಂನಾನಾಪುಷ್ಪಲತಾ
ಯುತಂ ॥ ೩೧ ॥ ನಾನಾಪಕ್ಷಿಗಣೈರ್ಜುಷ್ಟಂನಾನಾಮೃಗನಿಷೇವಿತಂ । ಋ
ಷಿಸಿದ್ಧಗಣೈರ್ಜುಷ್ಟಂಸದಾತಿಥಿನಿಷೇವಿತಂ ॥ ೩೨ ॥ ಸರ್ವಾಶ್ಚರ್ಯಕರಂಭೋ
ಗ್ಯಂದುರ್ಭಿಕ್ಷಭಯವರ್ಜಿತಂ । ತಂಗತ್ವಾಹರ್ಷಮಾಪನ್ನಸ್ಸಾಕ್ಷಾನ್ನಾರಾ
ಯಣಾತ್ಮಕಃ ॥ ೩೩ ॥ ತತ್ರಸ್ನಾತ್ವಾಚವಿಧಿವತ್ಕೃತ್ವಾಕೃತ್ಯಂಮುನೀಶ್ವ
ರಃ । ತಪಸ್ತೇಪೆಯಥಾಪೂರ್ವಂಶಿವಧ್ಯಾನಪರಾಯಣಃ ॥ ೩೪ ॥ ಜಗತ್ಸಂರ
ಕ್ಷಣಾರ್ಥಂತುಕ್ರೂರಂತಸ್ಮಿನ್ಗಿರೌತದಾ । ತತಶ್ಶಿವಃಪ್ರಸನ್ನೋಭೂತ್ಸ್ವ
ಗಣೈರುಮಯಾಸಹ ॥ ೩೫ ॥ ಪಸ್ಪರ್ಶಬ್ರಹ್ಮರಂಧ್ರಂತು ಮುನೇಸ್ತಸ್ಯಪುರೋ
ವದತ್ । ವರಂವರಯಭದ್ರಂತೇದಾತುಮದ್ಯಾಹಮಾಗತಃ ॥ ೩೬ ॥ ತ್ವಯಾ
ಕೃತೇನತಪಸಾಪ್ರೀತೋಸ್ಮಿಮುನಿಪುಂಗವ।ತಚ್ಛ್ರುತ್ವಾಸಹಸೋತ್ಥಾಯನತ್ವಾ
ಸ್ತುತ್ವಾಥಶಂಕರಂ ॥ ೩೭ ॥ ಅರ್ಘ್ಯಪಾದ್ಯಾದಿವಿಧಿವತ್ಕೃತ್ವಾತಸ್ಯಕೃತಾಂ
ಜಲಿಃ । ಉವಾಚಪರಮಂವಾಕ್ಯಂಪೂರ್ವಕರ್ಮವಿಚೇಷ್ಟಿತಂ ॥ ೩೮ ॥ ನಿವೇದ್ಯಚ

ಯೂ, ನಾನಾ ಪುಷ್ಪಲತೆಗಳಿಂದ ಕೂಡಿರುವದಾಗಿಯೂ, ನಾನಾ ಪಕ್ಷಿ ಮೃಗಗಣಸೇವಿತವಾದದ್ದಾಗಿಯೂ, ಋಷಿಸಿದ್ಧಗಣ ಸೇವಿತವಾಗಿಯೂ, ಅತಿಥಿ ಸೇವಿತವಾಗಿಯೂ ॥ ೩೨ ॥ ಸರ್ವಾಶ್ಚರ್ಯಕರವಾಗಿಯೂ, ದುರ್ಭಿಕ್ಷಭಯವಿಲ್ಲದ್ದಾಗಿಯೂ, ಸುಖಪಡತಕ್ಕದ್ದಾಗಿಯೂ ಇರುವ ನೀಲಾದ್ರಿಯಂ ಹೊಂದಿ ಸಾಕ್ಷನ್ನಾರಾಯಣ ಸ್ವರೂಪನಾದ ಕಪಿಲ ಋಷಿಯು ಹರ್ಷ ಸಂಪನ್ನನಾಗಿ ಆ ಪರ್ವತದಲ್ಲಿ ವಿಧಿ ಪ್ರಕಾರ ಸ್ನಾನವಂ ಮಾಡಿ ನಿತ್ಯಕೃತ್ಯವಂ ಮಾಡಿಕೊಂಡು ಪೂರ್ವದಂತೆ ಶಿವಧ್ಯಾನ ಪರಾಯಣನಾಗಿ ತಪಸ್ಸು ಮಾಡುತ್ತಿದ್ದನು ॥ ೩೪ ॥ ಆ ಸಮಯದಲ್ಲಿ ಆ ಪರ್ವತದೊಳಗೆ ಜಗತ್ಸಂರಕ್ಷಣಾರ್ಥವಾಗಿ ಈಶ್ವರನು ಕ್ರೂರವಾದ ತಪವಂ ನೋಡಿ ಪ್ರಮಥಗಣರೊಡನೆ ಪ್ರಸನ್ನನಾಗಿ ಆ ಕಪಿಲ ಋಷಿಯ ಬ್ರಹ್ಮರಂಧ್ರವಂ ಹಸ್ತದಿದಂ ಸ್ಪರ್ಶವಂ ಮಾಡಿ ಎಲೈ ಕಪಿಲ ಋಷಿಯೇ, ನಿನಗೆ ಬೇಕಾದ ವರವಂಕೇಳು, ನೀ ಕೇಳಿದ ವರವಂ ಕೊಡುವದಕ್ಕಾಗಿ ನಾನು ಬಂದೆನು ॥ ೩೬ ॥ ನೀನು ಮಾಡಿದತಪಸ್ಸಿನಿಂದ ನಾನು ಸಂತುಷ್ಟನಾದೆನು. ಇಂತೆಂದು ಹೇಳಿದ ಶಿವನ ವಚನವಂಕೇಳಿ ಕಪಿಲ ಮುನಿಯು ಶೀಘ್ರದಿಂದೆದ್ದು ನಮಸ್ಕಾರ ಸ್ತೋತ್ರಗಳಂ ಮಾಡಿ ಅರ್ಘ್ಯ ಪಾದ್ಯಾದಿ ಪೂಜೆಯಂ ಯಥಾವಿಧಿಯಾಗಿ ಮಾಡಿ ಈಶ್ವರನಂ ಕುರಿತು ಅಂಜಲಿಬದ್ಧನಾಗಿ ಪೂರ್ವಕರ್ಮವ್ಯಾಪಾರ

ಪುನರ್ನತ್ವಾನಿದಧ್ಯೌತತ್ಸನ್ನಿಧೌ। ತಸ್ಯವಾಕ್ಯಂಮಹೇಶಾನಶ್ಶ್ರುತ್ವಾಪ್ರತ್ಯವದನ್ಮುನಿಂ ॥೩೯॥ ತ್ವಯಾತಪಃಪುರಾಕೃತ್ವಾಮುನಿರೂಪಧರೇಣವೈ। ಕಪಿಲಾಖ್ಯೇನವಿಷ್ಣುಸ್ತ್ವಂಲೋಕೋಪಕೃತಿಕಾಮ್ಯಯಾ ॥೪೦॥ ದಗ್ಧಾಶ್ಚ ಸಾಗರಾಸ್ಸರ್ವೇಸಮುದ್ರಾನ್ಕರ್ತುಮುದ್ಭವಾಃ। ಮಾವಿಚಾರಂಕುರುಷ್ವಾತ್ರತವದೋಷೋನಕಿಂಚನ ॥೪೧॥ ತ್ವದಗ್ಧ್ರಸಂಪರಮಂಧ್ಯಾಯಂತ್ಸಚ್ಚಿದಾನಂದಲಕ್ಷಣಂ। ನಿರ್ಗುಣಂನಿರ್ವಿಕಾರಂತ್ವಂನಿಶ್ಶರೀರಂನಿರಂಜನಂ ॥೪೨॥ ಅದ್ವಿತೀಯಮಖಂಡಂತತ್ಸೂಕ್ಷ್ಮಮತ್ರಸುಖಂವಸ। ತೇನಧ್ಯಾನೇನಚಭುವಿತ್ವದೀಯಾಮೃತಂಶುಭಂ ॥೪೩॥ ಪತಿಷ್ಯತಿಮಹಾಬುದ್ಧೇಬ್ರಹ್ಮರಂಧ್ರಸ್ಥಿತಂತದಾ। ತಸ್ಮಾಚ್ಚತುಲಸೀದೇವೀತವಮಾಯಾಭವಿಷ್ಯತಿ ॥೪೪॥ ತನ್ಮೂಲಸಂಭವಾಕಾಚಿತ್ತ್ವನ್ನಾಮ್ನಾಸರಿದುತ್ತಮಾ। ಕಪಿಲೇತಿಮಹಾಭಾಗಮಮಪ್ರೀತಿವಿಧಾಯಿನೀ ॥೪೫॥

ವಂ ಕಾರಿತು ॥೩೮॥ ಆ ಈಶ್ವರನ ಸನ್ನಿಧಾನದಲ್ಲಿ ತಿಳುಹಿಸಿ ಮತ್ತು ನಮಸ್ಕರಿಸಿ ಧ್ಯಾನ ಮಾಡುತಿದ್ದನು ಮಹಾದೇವನು ಕಪಿಲ ಋಷಿಯ ವಾಕ್ಯವಂ ಕೇಳಿ ಪ್ರತ್ಯುತ್ತರವಂ ನುಡಿದನು. ಪೂರ್ವದಲ್ಲಿ ಮುನಿರೂಪಧಾರಿಯಾದ ಕಪಿಲನೆಂಬ ಹೆಸರುಳ್ಳ ನಿನ್ನಿಂದ ಲೋಕೋಪಕಾರವಾಗಬೇಕೆಂಬ ಅಪೇಕ್ಷೆಯಿಂದ ತಪಸ್ಸು ಮಾಡಲ್ಪಟ್ಟಿತು. ನೀನೇ ಸಾಕ್ಷಾದ್ವಿಷ್ಣು ಸ್ವರೂಪನು, ಸಮುದ್ರಗಳನ್ನು ಮಾಡುವದಕ್ಕೋಸ್ಕರ ಹುಟ್ಟಿದ ಸಗರ ಚಕ್ರವರ್ತಿಯ ಮಕ್ಕಳು ನಿನ್ನಿಂದ ದಹಿಸಲ್ಪಟ್ಟರು. ಈ ವಿಷಯದಲ್ಲಿ ವಿಚಾರವಂ ಮಾಡಬ್ಯಾಡ, ನಿನಗೆಸ್ವಲ್ಪವಾದರೂ ದೋಷವಿಲ್ಲ ॥೪೧॥ ಸಚ್ಚಿದಾನಂದ ಲಕ್ಷಣಗಳುಳ್ಳದ್ದಾಗಿಯೂ, ನಿರ್ಗುಣವಾಗಿಯೂ, ನಿರ್ವಿಕಾರವಾಗಿಯೂ, ಶರೀರ ರಹಿತವಾಗಿಯು, ಅದ್ವಿತೀಯವಾಗಿಯೂ, ನಿರಂಜನವಾಗಿಯೂ, ಅಖಂಡವಾಗಿಯೂ, ಸೂಕ್ಷ್ಮವಾಗಿಯೂ ಇರುವ ಸ್ವರೂಪವನ್ನ ಧ್ಯಾನಿಸುತ್ತಾ, ನಿರಂತರದಲ್ಲಿಯೂ, ಇಲ್ಲಿಯೇ ಸುಖವಾಗಿ ವಾಸವಂ ಮಾಡೆಂದು ಶಿವನು ಹೇಳಿದ ಪ್ರಕಾರ ಧ್ಯಾನಿಸುತ್ತಿದ್ದರೆ, ಆಧ್ಯಾನದಿಂದ ಭೂಮಿಯಲ್ಲಿ ನಿನ್ನ ಧ್ಯಾನಾಮೃತವು. ಬ್ರಹ್ಮರಂಧ್ರದಿಂದ ಬೀಳುವದು. ಆ ಅಮೃತದಿಂದ ನಿನ್ನ ಮಾಯೆಯು ತುಲಸೀರೂಪವಾಗಿ ಹುಟ್ಟುತ್ತದೆ. ನಿನ್ನ ಹೆಸರಿನಿಂದ ಒಂದು ಶ್ರೇಷ್ಠವಾದನದಿಯು ಆ ತುಲಸೀಮೂಲದಿಂದ ಉತ್ಪತ್ತಿಯಾಗುವದು. ಅದು ನನಿಗೆ ಪ್ರೀತಿಯನ್ನುಂಟುಮಾಡುತ್ತಿರುವದು, ಮನುಷ್ಯರಿಗೆ ದರ್ಶನಮಾತ್ರದಿಂದಲೇ ಮುಕ್ತಿಯನ್ನುಂಟುಮಾಡುವದು. ಅಂಥಾನದಿಯು ಕಾವೇರಿ

ದರ್ಶನಾನ್ಮುಕ್ತಿದಾ ನೃಣಾಂ ಕಾವೇರ್ಯಾಯೋಗಮೇಷ್ಯತಿ । ತಸ್ಯಾಸ್ತೀರದ್ವಯೇ ಚಾಹಂ ವಾಸಮೇಷ್ಯಾಮಿ ಭೋ ಮುನೇ ॥೪೬॥ ಇತಿ ದತ್ವಾ ವರಂ ತಸ್ಮೈ ತತ್ರೈವಾಂತರಧೀಯತ । ಕಪಿಲೋಪಿ ವಚಶ್ಶ್ರುತ್ವಾ ಶಿವಸ್ಯಾಮೃತಸನ್ನಿಭಂ ॥೪೭॥ ಹರ್ಷಮಾಪ ತಥಾ ಧ್ಯಾತ್ವಾ ಸ್ವರೂಪಂ ಚಿದಾತ್ಮಕಂ । ತೇನ ಧ್ಯಾನೇನ ಸಂಭಿನ್ನಂ ಸುಧಾಕುಂಭಂ ಮುನೇಸ್ತತಃ ॥೪೮॥ ತೇನಾಮೃತೇನ ಸರ್ವಾಂಗಂ ಸಿಕ್ತಂ ಭುವಿ ತದಾಪತತ್ । ತದೀಯಮಮೃತಂ ದಿವ್ಯಂ ತುಲಸ್ಯಾಸೀನ್ಮಹತ್ಯಪಿ ॥೪೯॥ ತನ್ಮೂಲಾದುದ್ಬಭೌ ಕಾಚಿನ್ನದೀ ಮುಖ್ಯಾ ಶುಭೋದಕಾ । ಶಿವಪ್ರಸಾದಾತ್ಕಪಿಲಾ ನಾಮ್ನಾಸೀನ್ಮುಕ್ತಿದಾಯಿನೀ ॥೫೦॥ ನಿತ್ಯಪೂರ್ಣೋದಕಾ ಪುಣ್ಯಾ ಸರ್ವಾಘೌಘನಿವಾರಿಣೀ । ಮೃಗಪಕ್ಷಿಗಣಾಕೀರ್ಣಾ ನಿತ್ಯತೃಪ್ತಿಕರೀ ನದೀ ॥೫೧॥ ಸಕೃತ್ತರ್ಪಣಮಾತ್ರೇಣ ಪಿತೄಣಾಂ ಮುಕ್ತಿದಾಯಿನೀ । ದೇವಾನಾಂ ಚ ವಿಶೇಷೇಣ ನಿತ್ಯತೃಪ್ತಿಕರೀ ಹಿ ಸಾ ॥೫೨॥ ಕಾವೇರೀಯೋಗಮಾಪನ್ನಾ ಪೂರ್ವಸಾಗರಗಾಮಿನೀ । ತಾಂ ದೃಷ್ಟ್ವಾ ಹರ್ಷಿತೋ ಭೂತ್ವಾ ತಸ್ಯಾಂ ಸ್ನಾತ್ವಾ ಮುನೀ

ಯ ಸಂಗಮವಂ ಹೊಂದುತ್ತದೆ. ಆ ನದಿಯ ಎರಡು ದಡಗಳಲ್ಲಿಯೂ ನಾನು ವಾಸವಂ ಮಾಡುತ್ತೇನೆ ॥೪೬॥ ಇಂತೆಂದು ಕಪಿಲ ಮುನಿಗೆ ವರವಂ ಕೊಟ್ಟು ಅಲ್ಲಿಯೇ ಅಂತರ್ಧಾನವಾದನು. ಆ ಕಪಿಲ ಋಷಿಯು ಅಮೃತಕ್ಕೆ ಸಮಾನವಾದ ಆ ಶಿವನ ವಾಕ್ಯವಂ ಕೇಳಿ ॥೪೭॥ ಸಂತೋಷವಂ ತಾಳಿದನು. ಅದೇ ಪ್ರಕಾರ ಚಿದಾತ್ಮಕವಾದ ಸ್ವರೂಪವಂ ಧ್ಯಾನಿಸಿ ಆ ಧ್ಯಾನದಿಂದ ಅಮೃತಕಲಶವು ಒಡೆದು ಆ ಅಮೃತದಿಂದ ಸರ್ವಾಂಗವು ನೆನೆದು ಭೂಮಿಯಲ್ಲಿ ಬಿತ್ತು. ತತ್ಸಮ್ಬಂಧವಾದ ಅಮೃತವು ಶ್ರೇಷ್ಠವಾದ ತುಲಸೀ ವೃಕ್ಷವಾಯಿತು ॥೪೯॥ ಆ ತುಲಸೀಮೂಲದಿಂದ ಶುಭೋದಕವುಳ್ಳ ಒಂದು ನದಿಯು ಉದ್ಭವಿಸಿತು. ಅದು ಶಿವಪ್ರಸಾದದಿಂದ ಮುಕ್ತಿದಾಯಕವಾದ ಕಪಿಲಾ ಯೆಂಬ ನದಿಯು ಆಯಿತು ॥೫೦॥ ಆ ನದಿಯು ಸದಾ ತುಂಬಿರುವ ಉದಕವುಳ್ಳದ್ದಾಗಿಯೂ, ಪುಣ್ಯಕರವಾಗಿಯೂ, ಪಾಪಸಂಘಗಳಂ ಪರಿಹರಿಸುವದಾಗಿಯೂ, ಮೃಗ ಪಕ್ಷಿಗಣಗಳಿಂದ ವ್ಯಾಪ್ತವಾಗಿಯೂ, ನಿತ್ಯತೃಪ್ತಿಯನ್ನುಂಟುಮಾಡುವದಾಗಿಯೂ ॥೫೧॥ ಪಿತೃಗಳಿಗೆ ಒಂದಾವರ್ತಿ ತರ್ಪಣವಂ ಮಾಡಿದ್ದರಿಂದಲೇ ಮುಕ್ತಿಯನ್ನುಂಟುಮಾಡುವದಾಗಿಯೂ, ದೇವತೆಗಳಿಗೂ ಸಹಾ ತೃಪ್ತಿಕಾರಿಯಾದ್ದಾಗಿ ॥೫೨॥ ಕಾವೇರಿಯಲ್ಲಿ ಸಂಗಮವಂ ಹೊಂದಿ ಪೂರ್ವಸಮುದ್ರಗಾಮಿನಿ ಆಗಿದೆ. ಅಂಥಾ ನದಿಯನ್ನೋ

ಶ್ವರಾಃ ॥೫೪॥ ಉಕ್ತಂಮಯಾಚಭವತಾಂ ಕಿಂಭೂಯಃಶ್ರೋತುಮಿಚ್ಛಥ॥

ಇತಿಶ್ರೀ ಸ್ಕಾಂದಪುರಾಣೆ ಗರಳಪುರೀಮಾಹಾತ್ಮ್ಯೇ ಕಪಿ

ಲೋತ್ಪತ್ತಿವರ್ಣನಂನಾಮ ತೃತೀಯೋಧ್ಯಾಯಃ.

ಋಷಯಃ ॥ಸಮ್ಯಗುಕ್ತಂಮುನಿಶ್ರೇಷ್ಠ ಮಾಹಾತ್ಮ್ಯಂಪರಮಾದ್ಭುತಂ। ಪುನರ್ವದಸ್ವತಸ್ಯಾಶ್ಚ ವೈಭವಂತ್ವಂದಯಾನಿಧೇ॥೧॥ ತಛ್ರುತ್ವಾಸಮುನಿಃಪ್ರಾಹಕಪಿಲಾಯಾಶ್ಚ ವೈಭವಂ । ಯಸ್ಯಾಂಸ್ನಾಂತಿಮಹಾವೀರಾಸ್ತೇಶತ್ರೂನ್ವಿಜಯಂತಿಹಿ॥೨॥ ರಾಜ್ಯಕಾಮಾನಿಮಜ್ಜಂತಿ ನರಾಶ್ಚಕ್ರವರ್ತಿನಃ। ಉಪರಾಗಸಹಸ್ರೇಷು ವ್ಯತೀಪಾತಾಯುತೇಷುಚ ॥೩॥ ಅಯನವ್ರತಕಾಲೇಷು ಗಂಗಾಸ್ನಾನಾಚ್ಚಯತ್ಫಲಂ। ತತ್ಫಲಂಸಮವಾಪ್ನೋತಿಸಕೃತ್ಸ್ನಾನಾಚ್ಚಭೂದಕೇ॥೪॥ ಯಸ್ಯಾಂಮಜ್ಜಂತಿದಾರಿದ್ರ್ಯ ರೋಗಾರ್ತಾಭುವಿತೇನರಾಃ। ದೇವೆಂದ್ರಸದೃಶಾಸ್ಸರ್ವೆ ಭುಂಜಂತೆಸರ್ವಸಂಪದಃ॥೫॥ ಪುರಾದಾಶರಥಿಶ್ರೀಮಾನ್ ಲಕ್ಷ್ಮಣೇನಚಸೀತಯಾ। ಸಹಿತಃಪಿತೃವಾಕ್ಯಂತು ಪಾಲಯನ್ಪ್ರಯಯೌತ

ದಿ ಅದರಲ್ಲಿ ಸ್ನಾನವಂ ಮಾಡಿ ಋಷಿಗಳೆಲ್ಲರು ಸಂತುಷ್ಟರಾದರು. ನಿಮ್ಮಗಳಿಗೆ ವೃತ್ತಾಂತವೆಲ್ಲವಂ ನನ್ನಿಂದ ಹೇಳಲ್ಪಟ್ಟಿತು ॥೫೩॥ ಇನ್ನು ಮೇಲೆ ಏನುಕೇಳಲಿಛ್ಛೈಸುತ್ತೀರಿ ಇಂತೆಂಬಿಲ್ಲಿಗೆ ಸ್ಕಾಂದಪುರಾಣದೊಳು ಗರಪುರಿ ಮಾಹಾತ್ಮ್ಯೆಯಲ್ಲಿ ಕಪಿಲೋತ್ಪತ್ತಿ ವರ್ಣನೆಯೆಂಬ ಮೂರನೇ ಅಧ್ಯಾಯ ಸಂಪೂರ್ಣವು.

ಋಷಿಗಳು ಹೇಳುತ್ತಾರೆ.—ಓ ಋಷಿಶ್ರೇಷ್ಠನೇ ಪರಮಾಶ್ಚರ್ಯಕರವಾದ ಮಹಾತ್ಮ್ಯವಂ ಚನ್ನಾಗಿ ಹೇಳಿದಿರಿ ಮತ್ತು ಅದರ ಆಶ್ಚರ್ಯಕರವಾದ ವೈಭವವಂ ಹೇಳಬೇಕೆನಲು ೧ ಅದಂಕೇಳಿ ಆ ಸೂತನು ಕಪಿಲಾನದಿಯ ಮಹಿಮೆಯಂ ಹೇಳುತ್ತಾನೆ. ಯಾವ ಮಹಾವೀರರು ಈ ನದಿಯಲ್ಲಿ ಸ್ನಾನಮಾಡುವರೋ ಅವರು ಶತೃಗಳಂಜೈಸುತ್ತಾರೆ೨ ಯಾವಮನುಷ್ಯರು ರಾಜ್ಯಕಾಮರಾಗಿ ಮಜ್ಜನವಂ ಮಾಡಿದವರು ಚಕ್ರವರ್ತಿಗಳಾಗುತ್ತಾರೆ ಸಾವಿರಗ್ರಹಣಗಳಲ್ಲಿಯೂ ಹತ್ತುಸಾವಿರ ವ್ಯತೀಪಾತಪುಣ್ಯಕಾಲಗಳಲ್ಲಿಯೂ ಉತ್ತರಾಯಣ ದಕ್ಷಿಣಾಯನಗಳಲ್ಲಿಯೂವ್ರತಕಾಲಗಳಲ್ಲಿಯೂ ಗಂಗಾಸ್ನಾನದಿಂದಾ ಯಾವಫಲ ಉಂಟಾಗುವದೋ ಅಂಥಾಫಲವು ಈ ನದಿಯಲ್ಲಿ ಒಂದಾವರ್ತಿ ಸ್ನಾನವಂಮಾಡಿದ್ದರಿಂದಲೇ ಉಂಟಾಗುವದು ೪ ಭೂಮಿಯಲ್ಲಿ ಯಾವಮನುಷ್ಯರು ದಾರಿದ್ರ್ಯವೆಂಬ ರೋಗದಿಂದಾ ಪೀಡಿತರಾಗಿರುವರೋ

ದಾ ॥ ೬ ॥ ದಶಾನನೇನ ದುಷ್ಟೇನ ಕೃತಸೀತಾಪಹಾರಕಃ । ಇತಸ್ತತೋ ವಿಚಿ
ನ್ವಂಸ್ತಾಂ ಕಪಿಲಾತೀರಮಾಯಯೌ ॥೭॥ ತಸ್ಯಾಂ ಸ್ನಾತ್ವಾ ಚ ವಿಧಿವಲ್ಲಕ್ಷ್ಮ
ಣೇನ ಮಹಾಬಲಃ । ದತ್ತಂ ಫಲಾದಿ ಸಂಭುಕ್ತ್ವಾ ವಧಾರ್ಥಂ ರಾವಣಸ್ಯ ಚ ॥೮॥
ಯಯೌ ಸಮುದ್ರರಾಜಸ್ಯ ತೀರಂ ತತ್ರ ಸೇತುಬಂಧನಂ । ಸುಗ್ರೀವಾದ್ಯೈಶ್ಚ ಕ
ಪಿಭಿಃ ಕೃತ್ವಾ ವಾಯುಸುತೇನ ಚ ॥೯॥ ಲಂಕಾಂ ದಗ್ಧ್ವಾ ದಶಾಸ್ಯಂ ಚ ಹತ್ವಾ
ಸಾನುಗಮಾಹವೇ । ವಿಭೀಷಣಂ ತು ಲಂಕಾಯಾಮಭಿಷಿಚ್ಯ ನೃಪೋತ್ತಮಃ ॥೧೦॥
ಪುಷ್ಪಯಾನಂ ಗೃಹೀತ್ವಾ ಚ ಸೀತಾಂ ಪ್ರಾಪ್ಯ ಯಯೌ ತದಾ । ಪುನಶ್ಚ ಕಪಿಲಾ
ತೀರಮಾಗತಸ್ಸಾನುಗೈಸ್ಸಹ ॥ ೧೧ ॥ ತುಲಸೀಮೂಲಮಾಶ್ರಿತ್ಯ ರಾಮಸ್ಸ್ನಾ
ತ್ವಾ ಯಥಾವಿಧಿ । ಕಪಿಲಾಶ್ರಮಮಾಗತ್ಯ ತತ್ರ ಭುಕ್ತ್ವಾ ಯಥೇಪ್ಸಿತಂ ॥೧೨॥
ತಸ್ಮಿನ್ರಾತ್ರಿಂ ನಿನಾಯಾಥಾ ಕಪಿಲಾಖ್ಯಾನವರ್ಣನಾತ್ । ಪ್ರಾತಸ್ತತ್ರ ಪುನ
ಸ್ಸ್ನಾತ್ವಾ ಕಪಿಲೀಂ ನಮಹೀಪತಿಃ ॥೧೩॥ ಪ್ರವಾಹಿನೀಂ ನದೀಂ ಮುಖ್ಯಾಂ ದರ್ಶ
ಯನ್ಹೃಷ್ಟಮಾನಸಃ । ಪ್ರಸ್ಥಿತಃ ಕಪಿಲಾತೀರೇ ಪಶ್ಚಿಮಾಭಿಮುಖೀಂ ನದೀಂ

ಅವರು ಈ ನದಿಯಲ್ಲಿ ಸ್ನಾನಮಾಡಿದ್ದರಿಂದ ದೇವೇಂದ್ರನಿಗೆ ಸಮಾನರಾಗಿ ಸರ್ವಸಂಪದಗಳನ್ನನುಭವಿಸುವರು ೫ ಪೂರ್ವದಲ್ಲಿ ಶ್ರೀರಾಮಚಂದ್ರನು ಸೀತಾಲಕ್ಷ್ಮಣರಸಹಿತವಾಗಿ ಪಿತೃವಾಕ್ಯಮಂ ಪರಿಪಾಲಿಸುತ್ತಾ ೬ ಅರಣ್ಯಕ್ಕೆ ಹೋಗಿ ಸೀತಾದೇವಿಯಂ ದುಷ್ಟನಾದ ರಾವಣಾಸುರನು ಅಪಹರಿಸಲು ಅಲ್ಲಲ್ಲಿ ಹುಡುಕುತ್ತಾ ಕಪಿಲಾತೀರಕ್ಕೆ ಬಂದು ೭ ಆ ಕಪಿಲಾನದಿಯಲ್ಲಿ ಯಥಾವಿಧಿಯಾಗಿ ಸ್ನಾನಮಂಮಾಡಿ ಲಕ್ಷ್ಮಣನಿಂದಾ ಕೊಡಲ್ಪಟ್ಟ ಫಲಾದಿಗಳಂ ಭುಂಜಿಸಿ ರಾವಣಾಸುರನ ವಧಾರ್ಥವಾಗಿ ೮ ಸಮುದ್ರತೀರಮಂ ಹೊಂದಿ ಸುಗ್ರೀವಾದಿ ಕಪಿಗಳಿಂದ ಸೇತುವೆಯಂ ಕಟ್ಟಿ ೯ ಹನುಮಂತನಿಂದಾ ಲಂಕೆಯಂ ಸುಟ್ಟು ಯುದ್ಧದಲ್ಲಿ ತಮ್ಮಂದಿರೊಡಗೂಡಿದ ರಾವಣಾಸುರನಂ ಸಂಹರಿಸಿ ಲಂಕಾಪಟ್ಟಣದಲ್ಲಿ ವಿಭೀಷಣನಿಗೆ ಪಟ್ಟಾಭಿಷೇಕಮಂ ಮಾಡಿ ॥ ೧೦ ॥ ಸೀತೆಯಂ ಹೊಂದಿ ಪುಷ್ಪಕಮಂ ಹತ್ತಿ ಹೊರಟು ಪುನಹಾ ಅನುಜರನೊಡನೆ ಕಪಿಲಾತೀರಮಂ ಹೊಂದಿ ॥ ೧೧ ॥ ಶ್ರೀರಾಮನು ತುಲಸೀಮೂಲಮಂ ಆಶ್ರೈಸಿ ವಿಧ್ಯುಕ್ತವಾಗಿ ಸ್ನಾನಮಂ ಮಾಡಿ ಕಪಿಲಾಶ್ರಮಕ್ಕೆ ಬಂದು ಇಷ್ಟಪ್ರಕಾರ ಭೋಜನಮಂಮಾಡಿ ॥ ೧೨ ॥ ಈ ಸ್ಥಳದಲ್ಲಿ ಕಪಿಲಾನದಿಯ ಆಖ್ಯಾನಮಂ ಕೇಳುವದರಿಂದ ರಾತ್ರಿಯಂ ಕಳೆದು ಆ ನದಿಯಲ್ಲಿ ಪುನಹಾ ಕಪಿಲಮುನಿಯೊಡನೆ ॥ ೧೩ ॥ ಪ್ರವಹಿಸುತ್ತಿರುವ ಮುಖ್ಯ ನದಿಯಂ ಸಂತುಷ್ಟಮನಸ್ಕನಾಗಿ ನೋಡುತ್ತಾ ಪಶ್ಚಿಮಾಭಿಮುಖವಾದ ನದಿಯಂ ಕುರಿತು ಕಪಿಲಾ

॥೧೪॥ ತಾಂದೃಷ್ಟ್ವಾಮುನಿನಾರಾಮಸ್ಸ್ಥಿತ್ವಾತತ್ರಸಹಾನುಗೈಃ। ಸ್ನಾತ್ವಾ
ಪಶ್ಚಿಮವಾಹಿನ್ಯಾಂಲಕ್ಷ್ಮಣಂಪ್ರವದದ್ವಚಃ ॥೧೫॥ ಸ್ಥಾಪಯಾಮಿಮಹಾ
ಲಿಂಗಮತ್ರಮೇರಮತೇಮನಃ। ಸಾಧನಾನ್ಯಾನಯಸ್ವಾಸ್ಯದಿವ್ಯಾನಿವಿವಿಧಾ
ನಿಮೇ ॥೧೬॥ ವಾಯುಸೂನೋಮಹಾಪ್ರಾಜ್ಞಕಾಶೀಂಗತ್ವಾತಿವೇಗತಃ। ಲಿಂ
ಗಮಾನಯಮೇದಿವ್ಯಮಾದಿದೇಶಾಂಜನೋದ್ಭವಂ ॥ ೧೭ ॥ ಲಕ್ಷ್ಮಣೋಹನು
ಮಾಂಛೀಘ್ರಮಾನೇತುಂಗತವಾಂಸ್ತದಾ। ವಿಳಂಬಂವಾಯುಸೂನೋಶ್ಚ ದೃ
ಷ್ಟ್ವಾರಾಮಸ್ತುಸೈಕತೈಃ ॥೧೮॥ ಲಿಂಗಂಸಂಸ್ಥಾಪಯಾಮಾಸಸಹಸಾವಿ
ತ್ರಿಣಾಸ್ತ್ರಿಯಾ। ರಾಮವಾಕ್ಯಮನುಸ್ಮೃತ್ಯಹನುಮಾನಗ್ರತಸ್ತದಾ೧೯
ಕಾಶೀಲಿಂಗಂಗೃಹೀತ್ವಾತು ತಂದೃಷ್ಟ್ವಾದುಃಖಿತೋಭವತ್। ಕಿಂಕೃತಂ
ತುತ್ವಯಾಸ್ವಾಮಿನ್ನಿತಿವಾಲಾಭಿಘಟ್ಟನಂ ॥೨೦॥ ಕೃತವಾನ್ಸೈಕತಂಲಿಂಗ
ಮುದ್ಧರ್ತುಂನಚಚಾಲತತ್। ತಂದೃಷ್ಟ್ವಾವಿಸ್ಮಿತೋರಾಮೋವಾಯುಸೂ

ತೀರದಲ್ಲಿ ಪ್ರಯಾಣ ಮಾಡಿದವನಾಗಿ ॥ ೧೪ ॥ ಆ ಪಶ್ಚಿಮವಾಹಿನಿಯಂನೋ
ಡಿ ಕಪಿಲಋಷಿ ಸಹಿತನಾಗಿ ಅನುಜನೊಡನೆ ಅಲ್ಲಿ ನಿಂತು ಆ ಪಶ್ಚಿಮವಾ
ಹಿನಿಯಲ್ಲಿ ಸ್ನಾನವಂ ಮಾಡಿ ಲಕ್ಷ್ಮಣನಂ ಕುರಿತು ಇಂತೆಂದು ನುಡಿದನು
॥ ೧೫ ॥ ಓ ಲಕ್ಷ್ಮಣನೆ ಇಲ್ಲಿ ನನ್ನ ಮನಸ್ಸು ರಮಿಸುತ್ತಿದೆ ಇಲ್ಲಿ ಮಹಾ
ಲಿಂಗವಂ ಪ್ರತಿಷ್ಠಿಸುತ್ತೇನೆ ಬೇಕಾದ ವಿವಿಧ ಸಾಮಗ್ರಿಗಳಂ ತರಿಸೆಂದು ಹೇ
ಳಿ ಆಂಜನೇಯನಂ ಕುರಿತು ಹೇಳುದ್ತಾನೆ ॥ ೧೬ ॥ ಓ ವಾಯು ಪುತ್ರನೆ
ಮಹಾ ಪ್ರಜ್ಞಾಶಾಲಿಯಾದ ನೀನು ಅತಿವೇಗದಿಂದ ಕಾಶೀಕ್ಷೇತ್ರಕ್ಕೆ ಹೋಗಿ
ಶಿವ ಲಿಂಗವಂ ತೆಗದುಕೊಂಡು ಬಾಯೆಂದು ಆಜ್ಞಾಪಿಸಲು ॥ ೧೭ ॥ ಸಕಲ
ಸಾಮಗ್ರಿಗಳಂ ತರುವದಕ್ಕೆ ಲಕ್ಷ್ಮಣಸ್ವಾಮಿಯು ಹೋದನು. ಲಿಂಗವಂ
ತರುವದಕ್ಕೆ ಆಂಜನೆಯನು ಹೋದನು. ಆ ಸಮಯದಲ್ಲಿ ವಾಯುಪುತ್ರ
ನ ಸಾವಕಾಶವಂ ನೋಡಿ ಶ್ರೀರಾಮನು ಮರಳಿನಿಂದ ಲಿಂಗವಂಸ್ಥಾಪಿಸಿ ಸೀ
ತಾ ಲಕ್ಷ್ಮಣರೊಡನೆ ಪ್ರತಿಷ್ಠೆಯಂ ಮಾಡಿದನು ಹನುಮಂತನಾಗ ರಾಮ
ವಾಕ್ಯವಂ ಸ್ಮರಿಸುತ್ತಾ ॥ ೧೯ ॥ ಕಾಶೀ ಲಿಂಗವಂ ತೆಗದುಕೊಂಡು ಬಂ
ದು ಆ ಸಿಕತಾ ಲಿಂಗವಂ ನೋಡಿ ಅತ್ಯಂತ ದುಃಖಿತನಾಗಿ ಓ ಸ್ವಾಮಿಯೆ
ಯಾತಕ್ಕೆ ಹೀಗೆ ಮಾಡಿದಿರೆಂದು ಬಾಲವಂ ನೆಲಕ್ಕೆ ಅಪ್ಪಳಿಸಿ॥ ೨೦ ॥ ಆಸಿಕ
ತಾ ಲಿಂಗವಂ ಕೀಳುವದಕ್ಕೆ ಪ್ರಯತ್ನ ಮಾಡಲು ಸ್ವಲ್ಪವಾದರೂ ಚಲಿಸಲಿಲ್ಲ
ಅದರನ್ನ ನೋಡಿ ಶ್ರೀರಾಮನು ಆಶ್ಚರ್ಯಯುಕ್ತನಾಗಿ ಹನುಮಂತನಂ
ಕುರಿತು ಹೇಳುತ್ತಾನೆ ॥೨೧॥ ಓ ಸತ್ಪುರುಷನಾದ ಆಂಜನೇಯನೇ, ಯಾ

ನುಮಥಾಬ್ರವೀತ್ ‖೨೧‖ ಕಿಮರ್ಥಂ ಖಿದ್ಯಸೇ ಸಾಧೋ ಲಿಂಗಂ ತತ್ಸ್ಥಾಪಯಾತ್ರ ತು । ತಲ್ಲಿಂಗದರ್ಶನಾತ್ಸದ್ಯಸ್ಸರ್ವಕಾಮಾರ್ಥಸಿದ್ಧಯಃ ‖೨೨‖ ತಚ್ಛ್ರುತ್ವಾ ಸಹಸೋತ್ಥಾಯ ಲಿಂಗಂ ಸ್ಥಾಪಿತವಾಂಸ್ತದಾ। ತಸ್ಯಾಸ್ತು ದಕ್ಷಿಣಂ ತೀರಂ ಮುನಿನಾ ಸಹಿತೋಗಮತ್ ‖೨೩‖ ಭೃಗುನದ್ಯಾಸ್ಸಂಗಮೇ ಚ ಸ್ನಾತ್ವಾ ಕೃತ್ವಾ ಶಿವಾರ್ಚನಂ। ತತಸ್ತೇನೈವ ಮಾರ್ಗೇಣ ನದೀಮುತ್ತರವಾಹಿನೀಂ ೨೪ ಆಗತ್ಯ ಮುನಿನಾ ಸಾರ್ಧಂ ಸ್ನಾತ್ವಾ ತಸ್ಯಾಮುವಾಸ ಸಃ । ತಸ್ಮಿನ್ಸ್ತು ಸಮಯೇ ಬ್ರಹ್ಮಾ ಯಷ್ಟುಕಾಮಸ್ತದಾಯಯೌ ‖೨೫‖ ಉದಕ್ಪ್ರವಾಹಿನೀತೀರೇ ದೃಷ್ಟ್ವಾ ರಘುನಾಯಕಂ । ತತಸ್ತು ಪರಮಪ್ರೀತೋ ದತ್ತಪಾದ್ಯಾರ್ಚನಾದಿಭಿಃ ‖೨೬‖ ಉವಾಚ ರಾಮ ಭದ್ರಂ ತೇ ಮದ್ವಚಶ್ಶೃಣು ಭೂಪತೇ। ಅಸ್ಯಾಸ್ತೀರೇ ಯಷ್ಟುಕಾಮಶ್ಚಾಗತೋಸ್ಮಿ ಮಹಾಮತೇ ‖೨೭‖ ಏತತ್ಪ್ರಯಾಗಾದಧಿಕಮಿತ್ಯುಕ್ತಂ ಮುನಿಭಿಃ ಪುರಾ । ಪ್ರಾರ್ಥಿತಂ ರುದ್ರಪಾದಂ ತು ಕಪಿಲೇನ ಮಹಾತ್ಮನಾ ‖೨೮‖ ರುದ್ರಪುಷ್ಕರಣೀ ನಾಮ ವರ್ತತೇ ತೀರ್ಥನಾಯಕಃ ।

ತಕ್ಕೆ ದುಃಖಿಸುತ್ತಿ, ಇಲ್ಲಿ ನೀನು ತಂದ ಲಿಂಗವಂ ಪ್ರತಿಷ್ಠೆ ಮಾಡೋಣ. ಆ ಲಿಂಗ ದರುಶನದಿಂದ ಸರ್ವ ಇಷ್ಟಾರ್ಥ ಸಿದ್ಧಿಗಳು ಆಗುವವೆಂದು ಹೇಳಿದ ‖೨೨‖ ರಾಮನ ವಚನವಂ ಕೇಳಿ ಶೀಘ್ರದಿಂದೆದ್ದು ತಾನು ತಂದ ಲಿಂಗವಂ ಸ್ಥಾಪಿಸಿದನು. ಅನಂತರದಲ್ಲಿ ಆ ಕಪಿಲ ಋಷಿಯೊಡನೆ ಆ ನದಿಯ ದಕ್ಷಿಣ ತೀರಕ್ಕೆ ಹೋಗಿ ಭೃಗು ನದೀ ಸಂಗಮ ತೀರದಲ್ಲಿ ಸ್ನಾನವಂ ಮಾಡಿ ಶಿವಾರ್ಚನೆಯಂ ಮಾಡಿ ಆ ಮಾರ್ಗದಿಂದಲೇ ಉತ್ತರವಾಹಿನಿಯಂ ಹೊಂದಿ ‖೨೪‖ ಅಲ್ಲಿ ಸ್ನಾನವಂ ಮಾಡಿ ಇರುವ ಸಮಯದಲ್ಲಿ ಬ್ರಹ್ಮನು ಯಜ್ಞ ಮಾಡುವ ಇಚ್ಛೆಯುಳ್ಳವನಾಗಿ ಅಲ್ಲಿಗೆ ಬಂದನು ‖೨೫‖ ಉತ್ತರವಾಹಿನೀ ತೀರದಲ್ಲಿ ಬ್ರಹ್ಮನು ರಾಮಚಂದ್ರನಂ ನೋಡಿ ರಾಮನಿಂದ ಕೊಡಲ್ಪಟ್ಟ ಅರ್ಘ್ಯಪಾದ್ಯಾದಿಗಳಿಂದ ಪರಮ ಸಂತುಷ್ಟನಾಗಿ, ಅನಂತರ ‖೨೬‖ ಶ್ರೀರಾಮನಂ ಕುರಿತು ಓ, ರಾಮಚಂದ್ರನೇ, ನನ್ನ ವಚನವಂ ಕೇಳು, ಈ ನದೀ ತೀರದಲ್ಲಿ ಯಜ್ಞ ಮಾಡತಕ್ಕ ಇಚ್ಛೆಯುಳ್ಳವನಾಗಿ ಬಂದವನಾದೆನು ‖೨೭‖ ಈ ಕ್ಷೇತ್ರವು ಪ್ರಯಾಗಕ್ಕಿಂತಲೂ ಅಧಿಕವಾದದ್ದೆಂದು ಪೂರ್ವದಲ್ಲಿ ಋಷಿಗಳಿಂದ ಹೇಳಲ್ಪಟ್ಟಿತು. ಮತ್ತು ಮಹಾತ್ಮನಾದ ಕಪಿಲ ಋಷಿಯಿಂದ ರುದ್ರಪಾದವು ಪ್ರಾರ್ಥಿಸಲ್ಪಟ್ಟಿತು ‖೨೮‖ ರುದ್ರಪುಷ್ಕರಿಣಿ ಎಂಬ ತೀರ್ಥರಾಜವು ಇಲ್ಲಿ ಇರುತ್ತಿದೆ. ಆದಕಾರಣ ನಾನಿಲ್ಲಿ ಋಷಿಗಣರೊಡನೆ ಯಾಗವಂ ಮಾಡುತ್ತೇನೆ ‖೨೯‖

ತಸ್ಮಾದಹಂಕರಿಷ್ಯಾಮಿಯಾಗಂಮುನಿಗಣೈಸ್ಸಹ ॥೨೯॥ ತ್ವಯಾಸಮಾಪ್ಯ
ಗಂತವ್ಯಂಲಿಂಗಂಸ್ಥಾಪ್ಯಯಥಾಪುರಾ । ತಥೈವಕಾರಯಾಮಾಸವಿಧಿನಾಮು
ನಿಭಿಸ್ಸಹ ॥೩೦॥ ಯಜ್ಞಂಸದಕ್ಷಿಣಂರಾಮೋಲಿಂಗಂಸ್ಥಾಪಿತವಾಂಸ್ತದಾ। ತ
ತಃಪದ್ಮಭುವಾಸಾಕಂಕಪಿಲೇನರ್ಷಭೊದ್ವಹಃ ॥೩೧॥ ಕೈಲಾಸಶಿಖರಂಪ್ರಾಪ್ಯ
ರಾವಣೇನಾಹೃತಂಪುರಾ । ಕಪಿಲಾಕೌಂಡಿನೀಮಧ್ಯೇವಸಂತಂವಿಷಹಾರಿಣಂ
॥೩೨॥ ದದರ್ಶವಿಶ್ವಶರಣಂವಿಶ್ವರಕ್ಷಾಕರಂಶಿವಂ । ತತೋಹೃಷ್ಟಮನಾರಾ
ಮೋಲಕ್ಷ್ಮಣೇನಚಸೀತಯಾ ॥ ೩೩ ॥ ಮುನಿಭಿರ್ಬ್ರಹ್ಮಣಾಸಾಕಂಕಪಿಲಾ
ಯಾಶ್ಚಸಂಗಮೆ।ಕೌಂಡಿನ್ಯಾಂಸಾನುಗಸ್ಸ್ನಾತ್ವಾಸುಗ್ರೀವೇಣಹನೂಮತಾ
॥೩೪॥ ತತಸ್ತುತೈರ್ದಾಶರಥಿಸ್ತೀರ್ಥಾನಿಸ್ವಸ್ವನಾಮತಃ । ಕಾರಯಾಮಾ
ಸವಿಧಿವತ್ಪ್ರತ್ಯೇಕಂವಿವಿಧಾನಿಚ ॥ ೩೫ ॥ ನೀಲಕಂಠಸ್ಯಪುರತಃಕೇಶವಸ್ಯಚ
ರಾಘವಃ । ಆಗತ್ಯನತ್ವಾಸ್ತುತ್ವಾಚಭಕ್ಷ್ಯಭೋಜ್ಯೈರನೇಕಶಃ ॥೩೬॥ ನಾ
ನಾವಿಧೈಃಷಡ್ರಸೈಶ್ಚಅನ್ನೈಶ್ಶಾಕೈಶ್ಚಪಾಯಸೈಃ । ಏವಂಬಹುವಿಧೈರ್ದ್ರ

ನೀನು ಯಾಗ ಪೂರ್ತಿಯಂಮಾಡಿಸಿ ಪೂರ್ವದಂತೆ ಲಿಂಗ ಪ್ರತಿಷ್ಠೆಯಂ
ಮಾಡಿ ಹೋಗಬೇಕೆನಲು ಶ್ರೀರಾಮನು "ಹಾಗೆಯೇ ಆಗಲೆಂದುಬ್ರಹ್ಮನಿಂ
ದ ಋಷಿಗಳೊಡನೆ ಸದಕ್ಷಿಣವಾದ ಯಜ್ಞವಂಮಾಡಿಸಿ ಶಿವಲಿಂಗಸ್ಥಾಪಿತವಂ
ಮಾಡಿದನು. ಆಕಾಲದಲ್ಲಿ ಶ್ರೀರಾಮಭದ್ರನು ಬ್ರಹ್ಮನ ಸಂಗಡಲು ಕಪಿಲ
ಋಷಿಯು ಸಂಗಡಲು ಪೂರ್ವದಲ್ಲಿ ರಾವಣಾಸುರನಿಂದಾ ಅಪಹರಿಸಲ್ಪಟ್ಟ
ಕಪಿಲಾಕೌಂಡಿನೀ ಮಧ್ಯದಲ್ಲಿರುವ ಕೈಲಾಸ ಶಿಖರವಂ ಹೊಂದಿ ವಿಶ್ವಶರ
ಣ್ಯನಾಗಿಯು, ಪ್ರಪಂಚಗಳ ಸಂರಕ್ಷಣೆಯಂ ಮಾಡುವವನಾಗಿಯು, ವಿಷಹ
ರನಾಗಿಯು, ಇರುವ ಶಿವನ ದರುಶನವಂಮಾಡಿ ಸಂತುಷ್ಟನಾದ ಮನ
ಸ್ಸುಳ್ಳವನಾಗಿ ಶೀತಾ ಲಕ್ಷ್ಮಣರೊಡನೆಯು॥ ೩೩ ॥ ಋಷಿಗಳೊಡನೆಯು,
ಬ್ರಹ್ಮನೊಡನೆಯು, ಕಪಿಲಾಕೌಂಡಿನೀ ಸಂಗಮದಲ್ಲಿ ಸುಗ್ರೀವ ಹನುಮಾ
ದಿಗಳೊಡನೆ ಶ್ರೀರಾಮನು ಸ್ನಾನವಂ ಮಾಡಿ ॥೩೪॥ ಅವರೆಲ್ಲರ ಸಂಗಡಲು
ತೀರ್ಥಗಳನ್ನು ತಮ್ಮ ಹೆಸರುಗಳಿಂದ ಅನೇಕ ವಿಧಗಳಾಗಿ ಮಾಡಿಸಿದನು॥
॥೩೫॥ ಶ್ರೀಕಂಠನ ಪುರೋಭಾಗದಲ್ಲಿಯು, ಕೇಶವನ ಪುರೋಭಾಗದಲ್ಲಿ
ಯೂ ರಾಮನು ಬಂದು ನಮಸ್ಕಾರ ಸ್ತೋತ್ರಗಳಂ ಮಾಡಿ, ಅನೇಕ ಪ್ರ
ಕಾರ ಭಕ್ಷ್ಯ ಭೋಜ್ಯಾದಿಗಳಿಂದಲೂ ॥೩೬॥ ನಾನಾ ವಿಧ ಷಡ್ರಸಾನ್ನಗ
ಳಿಂದಲೂ, ಶಾಕಗಳಿಂದಲೂ, ಪರಮಾನ್ನಗಳಿಂದಲೂ ಈಶ್ವರನನ್ನು ಸಂ

ವಂತೋಷಯಿತ್ವಾಮಹೇಶ್ವರಂ ॥ ೨೭ ॥ ಸಂಪೂಜ್ಯವಿಧಿವತ್ಸರ್ವೈಸ್ಸಹಿತಸ್ಸ್ವಪು
ರಂಯಯೌ । ಕಪಿಲಾಖ್ಯೋಮುನಿಸ್ತತ್ರತಪಃಕೃತ್ವಾಚತಿಷ್ಠತಿ ॥ ೨೮ ॥ ಬ್ರ
ಹ್ಮಾಚಮುನಿಭಿಸ್ಸಾರ್ಧಂಸ್ವಾಲಯಂಪ್ರಯಯೌತದಾ ॥ ೨೯ ॥ ಶ್ರೀಸೂ
ತಃ ॥ ಯೇಶೃಣ್ವಂತಿಪಠಂತ್ಯೇತತ್ಕಪಿಲಾಯಾಶ್ಚವೈಭವಂ । ಸರ್ವಭೋಗಸ
ಮಾಯುಕ್ತಂಸಾಮ್ರಾಜ್ಯಂಪ್ರಾಪ್ನುವಂತಿತೇ ॥ ೩೦ ॥ ರಾಮೋಪ್ಯಸ್ಯಾಜಲೇಸ್ನಾ
ತ್ವಾಸ್ವರಾಜ್ಯಂಪ್ರಾಪಸಾನುಗಃ । ಅಸ್ಯಾಂಸ್ನಾತ್ವಾವಸಿಷ್ಠಸ್ಸ್ವಧರ್ಮಪತ್ನೀಮ
ರುಂಧತೀಂ ॥ ೩೧ ॥ ಶಚೀಚಾರುರೂಪಸಂಪನ್ನಾ ಸ್ನಾತ್ವಾಸ್ಯಾನಿರ್ಮಲೋದಕೇ ।
ಅದಿತಿಃಪುತ್ರಕಾಮಾಚಸಂಗಮೇಸ್ನಾತ್ವಾಸ್ಸುತಾನ್ಬಹೂನ್ ॥ ೩೨ ॥ ಲೇಭೇಶತಕ್ರತು
ಮುಖ್ಯಾನ್ಸ್ನಾತ್ವಾಭೀಷ್ಟಂಮುನೀಶ್ವರಾಃ । ಅಸ್ಮಿನ್ಕ್ಷೇತ್ರೇನೃಣಾಂವಾಸೋ
ಭುಕ್ತಿಮುಕ್ತಿಪ್ರದಃಕ್ಷಣಾತ್ ॥ ೩೩ ॥ ಏತದೇವಪರಂಪಥ್ಯಮೇತದೇವಪರಂತಪಃ ।
ಏತದೇವಪರಂಜ್ಞಾನಮೇತದೇವಪರಂಸುಖಂ ॥ ೩೪ ॥ ಕಿಂವೇದೈಃಕಿಂಪುರಾಣೈಶ್ಚ

ತೋಷಪಡಿಸಿ ॥ ೨೭ ॥ ವಿಧಿಪ್ರಕಾರ ಪೂಜೆಯಂ ಮಾಡಿ ಎಲ್ಲರ ಸಂಗಡಲೂ
ಕೂಡಿದವನಾಗಿ ತನ್ನ ಅಯೋಧ್ಯಾ ಪಟ್ಟಣಕ್ಕೆ ಹೋದನು. ಕಪಿಲ ಮಹರ್ಷಿ
ಯು ಅಲ್ಲಿಯೇ ತಪವಂ ಮಾಡಿಕೊಂಡು ಇದ್ದನು. ಬ್ರಹ್ಮನು ಋಷಿಗಳೊ
ಡನೆ ಸತ್ಯಲೋಕಕ್ಕೆ ಹೋದನು. ಸೂತ ಮಹರ್ಷಿ ಹೇಳುತ್ತಾನೆ ಯಾ
ರು ಈ ಕಪಿಲಾ ಮಹಾತ್ಮ್ಯೆಯಂ ಕೇಳುತ್ತಾರೋ, ಯಾರು ಪಠಿಸುತ್ತಾ
ರೋ ಅವರು ಸರ್ವ ಭೋಗಗಳಿಂದೊಡಗೂಡಿದ ಸಾಮ್ರಾಜ್ಯವಂ ಹೊಂದು
ತ್ತಾರೆ ॥ ೩೦ ॥ ಶ್ರೀರಾಮಚಂದ್ರನು ಅನುಜರೊಡಗೂಡಿದವನಾಗಿ ಈ ನ
ದೀ ಸ್ನಾನಂಮಾಡಿ ಸ್ವರಾಜ್ಯವಂ ಹೊಂದಿದನು. ವಸಿಷ್ಠ ಮಹರ್ಷಿಯು
ಈ ಕಪಿಲಾ ನದಿಯಲ್ಲಿ ಸ್ನಾನವಂ ಮಾಡಿ ಅರುಂಧತಿಯೆಂಬ ಧರ್ಮ ಪತ್ನಿಯಂ
ಹೊಂದಿದನು. ಶಚೀದೇವಿಯು ಈ ತೀರ್ಥದಲ್ಲಿ ಸ್ನಾನವಂ ಮಾಡಿ ರೂ
ಪಸಂಪನ್ನಳಾದಳು. ಅದಿತಿಯು ಈ ತೀರ್ಥದಲ್ಲಿ ಸ್ನಾನವಂ ಮಾಡಿ ಇಂ
ದ್ರಾದಿ ಬಹು ಪುತ್ರರಂ ಪಡದಳು ॥ ೩೨ ॥ ಋಷಿಗಳೆಲ್ಲರು ಸ್ನಾನವಂ
ಮಾಡಿ ತಮ್ಮ ತಮ್ಮ ಇಷ್ಟಾರ್ಥಗಳಂ ಪಡದರು. ಮನುಷ್ಯರಿಗೆ ಈ ಕ್ಷೇ
ತ್ರದಲ್ಲಿ ಕ್ಷಣ ಮಾತ್ರ ಮಾಡುವ ವಾಸವು ಭುಕ್ತಿ ಮುಕ್ತಿಗಳಂ ಕೊಡುವದು
॥ ೩೩ ॥ ಮನುಷ್ಯರಿಗೆ ಈ ಕ್ಷೇತ್ರವೇ ಶ್ರೇಷ್ಠವಾದ ಪಥ್ಯಸ್ವರೂಪವಾದದ್ದು
ಮತ್ತು ತಪಸ್ವರೂಪವಾದದ್ದು, ಮತ್ತು ಜ್ಞಾನ ಸ್ವರೂಪವಾದದ್ದು ॥ ೩೪ ॥
ವೇದಳಿಂಗದಲೂ, ಪುರಾಣಗಳಿಂದಲೂ, ಕಾಯ ಕ್ಲೇಶಗಳಿಂದಲೂ ಏನು ಪ್ರ

ಶರೀರಕ್ಲೇಶಮಾತ್ರಕೈಃ। ಅಸ್ಮಿನ್ವಾಸಾತ್ಸರ್ವಸಿದ್ಧಿರ್ಭವೇದ್ಗರಪುರೇಶುಭೇ॥

ಇತಿಶ್ರೀ ಸ್ಕಾಂದಪುರಾಣೇ ಗರಳಪುರೀಮಾಹಾತ್ಮ್ಯೆ ಕಪಿಲಾವೈ
ಭವವರ್ಣನಂನಾಮ ಚತುರ್ಥೋಧ್ಯಾಯಃ.

ಋಷಯಃ ॥ ವರ್ಣಿತಂಭವತಾಸಮ್ಯಙ್ಮಾಹಾತ್ಮ್ಯಂಸರಿತೋಮುನೇ । ಕೌಂಡಿನ್ಯಾಶ್ಚಸಮುತ್ಪತ್ತಿಂ ಸಮ್ಯಗ್ವದಕೃಪಾನಿಧೇ ।೧॥ ಶ್ರೀಸೂತಃ॥ ತಚ್ಛ್ರುತ್ವಾಮುನಿವರ್ಯಾಣಾಮುವಾಚಹಿತಕಾಮ್ಯಯಾ ।ಏತಸ್ಯಾಃಶ್ರವಣಾದೇವ ಸರ್ವಪಾಪೈಃಪ್ರಮುಚ್ಯತೇ ।೨॥ ಕೌಂಡಿನ್ಯೋನಾಮವಿಪ್ರೇಂದ್ರೋವೇದವೇದಾಂಗಪಾರಗಃ । ತಸ್ಯಭಾರ್ಯಾಭವಚ್ಛೀಲಾಸುಮಂತುತನಯಾಶುಭಾ॥೩॥ ಸಾಕದಾಚಿನ್ಮುನೀಂದ್ರಾಣಾಂಪತ್ನೀನಾಮುಪದೇಶತಃ । ಅನಂತಸ್ಯವ್ರತಂಚಕ್ರೇಪ್ರತಿವರ್ಷಂಯಥಾವಿಧಿ ॥ ೪ ॥ ತೇನವ್ರತಪ್ರಭಾವೇನಹ್ಯಣಿಮಾದ್ಯಷ್ಟಸಿದ್ಧಯಃ । ಜಾತಾಗೃಹೇಸ್ಯಾಶೀಲಾಯಾಸ್ತತ್ಪತಿಸ್ತುಷ್ಟುವುಸ್ತದಾ॥೫॥ ಮಮಪುಣ್ಯಪ್ರಭಾವೇನ ಜಾತಾಃಸಂಪದಇತ್ಯಹೋ । ಸಮುನೀಂದ್ರಃಕದಾಚಿತ್ತು

ಜಯೋನ, ಈ ಗರಳಪುರಿಯೆಂಬ ಕ್ಷೇತ್ರದಲ್ಲಿ ವಾಸ ಮಾತ್ರದಿಂದಲೇ ಸರ್ವಸಿದ್ಧಿಗಳೂ ಉಂಟಾಗುವವು ಇಲ್ಲಿಗೆ ಸ್ಕಾಂದ ಪುರಾಣದಲ್ಲಿ ಗರಳಪುರೀ ಮಹಾತ್ಮ್ಯೆಯಲ್ಲಿ ಕಪಿಲಾಮಹಿಮಾನುವರ್ಣನವೆಂಬ ನಾಲ್ಕನೇ ಅಧ್ಯಾಯವು
ಸಮಾಪ್ತವು.

ಮತ್ತು ಋಷಿಗಳು ಕೇಳುತ್ತಾರೆ,-ಓದಯಾನಿಧಿಯಾದ ಸೂತಮಹರ್ಷಿಯೇ, ನೀನು ಕಪಿಲಾನದಿಯ ಮಹಾತ್ಮ್ಯವಂ ಚನ್ನಾಗಿ ಹೇಳಿದೆ. ಇನ್ನು ಕೌಂಡಿನೀ ನದಿಯ ಉತ್ಪತ್ತಿಯಂ ಹೇಳಬೇಕೆನಲು ಸೂತಮುನಿಯು॥೧। ಆ ಋಷಿಗಳ ವಾಕ್ಯವಂ ಕೇಳಿ ಹಿತಾಪೇಕ್ಷೆಯಿಂದ ಹೇಳುತ್ತಾನೆ. ಈ ನದೀ ಪ್ರಭಾವ ಶ್ರವಣ ಮಾತ್ರದಿಂದಲೇ, ಸಮಸ್ತ ಪಾಪಗಳಿಂದಲು ಮುಕ್ತನಾಗುತ್ತಾನೆ ॥೨॥ ಕೌಂಡಿನ್ಯನೆಂಬವಿಪ್ರವರನು ವೇದವೇದಾಂಗ ಪಾರಂಗತನಾಗಿದ್ದನು. ಅವನಿಗೆ ಸುಮಂತನೆಂಬ ಬ್ರಾಹ್ಮಣನ ಶುಭ ಲಕ್ಷಣಳಾದ ಮಗಳು ಶೀಲೆಯೆಂಬ ಹೆಸರುಳ್ಳವಳಾಗಿ ಆ ಕೌಂಡಿನ್ಯನಿಗೆ ಭಾರ್ಯೆಯಾದಳು ॥೩॥ ಆ ಶೀಲೆಯು ಒಂದಾನೊಂದು ವ್ಯಾಳೆಯಲ್ಲಿ ಋಷಿಪತ್ನಿಗಳ ಉಪದೇಶದಿಂದ ಪ್ರತಿ ವರ್ಷದಲ್ಲಿಯೂ ಯಥಾ ವಿಧಿಯಾಗಿ ಅನಂತ ವ್ರತವಂ ಮಾಡುತ್ತಿದ್ದಳು ೪ ಆ ವ್ರತಪ್ರಭಾವದಿಂದ ಆಕೆಯ ಗೃಹದಲ್ಲಿ, ಅಣಿಮಾದ್ಯಷ್ಟಸಿದ್ಧಿಗಳು ವುಂಟಾಗಿ ಆ ಜಾಯಾಪತಿಗಳಿಬ್ಬರು ಸಂತೋಷಿಸುತ್ತಿದ್ದರು ॥೫॥ ಆ ಕೌಂಡಿನ್ಯನು ಒಂದಾನೊಂದು ಸಮಯದಲ್ಲಿ ಪತ್ನಿಯಂ ಕುರಿತು ಓ, ಪ

ತ್ವಯಾಕಿಂಧಾರ್ಯತೇಕರೇ ॥೬॥ ಇತಿಪ್ರಾಹಪ್ರಿಯಾಂಸಾಪಿಪ್ರತ್ಯುವಾಚಪತಿಂ
ಸ್ವಕಂ। ಅನಂತದೋರಮೇತದ್ಧಿಋಷಿಪತ್ನ್ಯುಪದೇಶತಃ॥೭॥ ನದೀತೀರೇಧೃ
ತಂನಾಥತತ್ಪ್ರಭಾವಾಚ್ಚ ಸಿದ್ಧಯಃ। ಜಾತಾಸ್ಸ್ಯುಸ್ತದ್ವಚಶ್ಶ್ರುತ್ವಾಕೋಪಾದಾ
ಕೃಷ್ಯದೋರಕಂ ॥೮॥ ಅಗ್ನೌನಿಕ್ಷಿಪ್ತವಾಂಛೀಘ್ರಂಕ್ಷೀರೇಸಂಗೃಹ್ಯಸಾಕ್ಷಿ
ಪತ್ । ದೃಷ್ಟ್ವಾದೋರಂಸ್ವಕಂದುಖ್ಖಾ ಧಾಹಾಕೃತ್ವಾತುರೋದತಿ ॥೯॥
ನಿರಾಹಾರಾಥತಸ್ಯಾಂತುರಾತ್ರೌಚೋರೈರ್ಹೃತಂಧನಂ । ಗೃಹೋಪಕರಣಂ
ಸರ್ವಂಗೃಹಂದಗ್ಧಂಕ್ಷಣಾದಹೋ ॥ ೧೦ ॥ ಪ್ರಭಾತೇಸಮುನಿಃಪ್ರಾಹಪತ್ನೀಂ
ರೋದನತತ್ಪರಾಂ। ಹಾಹಾಕಷ್ಟಂಮಹಾಪತ್ತಿಂಪ್ರಾಪ್ತಂಕಿಂಕರವಾಣ್ಯಹಂ॥
೧೧॥ ಅನಂತಾಕ್ಷೇಪದೋಷೇಣದಾರಿದ್ರ್ಯಂಪ್ರಾಪ್ತಮೇವಹಿ । ತಚ್ಛ್ರುತ್ವಾತಸ್ಯಪ
ತ್ನೀತುಸಾಂತ್ವಯಿತ್ವಾವದತ್ಪತಿಂ ॥೧೨॥ ಕಿಮರ್ಥಂಖಿದ್ಯಸೇನಾಥಕಿಂಕ
ರ್ತವ್ಯಂತ್ವಯಾಧುನಾ। ಪ್ರಾಯಶ್ಚಿತ್ತಂತುಪಾಪಸ್ಯಭೂಮಿಯಾತ್ರಾಂಕು

ತ್ನಿಯೇ, ನನ್ನ ಪುಣ್ಯಪ್ರಭಾವದಿಂದ ಈ ಸಂಪದೆಗಳುಂಟಾದವು. ನೀನು
ಹಸ್ತದಲ್ಲಿ ಈ ಧಾರವಂ ಯಾತಕ್ಕೆ ಕಟ್ಟಿಕೊಂಡಿದ್ಧೀ ॥೬॥ ಇಂತೆಂದು ಕೇ
ಳಲಾಪತ್ನಿಯು ಪ್ರತ್ಯುತ್ತರವಂ ಹೇಳಿದಳು. ಋಷಿಪತ್ನಿಗಳ ಉಪದೇಶ
ದಿಂದ ಮಾಡಿದ ಅನಂತ ವ್ರತಾಂಗವಾದ ಧಾರವಿದು ॥೭॥ ನದೀ ತೀರದಲ್ಲಿ
ಇದು ಧರಿಸಿಕೊಂಡೆನು. ಇದರ ಪ್ರಭಾವದಿಂದ ಅಷ್ಟಸಿದ್ಧಿಗಳುಂಟಾದ
ವೆಂದು ಹೇಳಿದ ಪತ್ನಿಯ ವಚನವಂ ಕೇಳಿ ಕೋಪದಿಂದ ಧಾರವಂ ಕಿತ್ತು
॥೮॥ ಅಗ್ನಿಯಲ್ಲಿಹಾಕಲಾಪತ್ನಿಯು ಆ ಧಾರವಂ ಶೀಘ್ರವಾಗಿತೆಗದು ಕ್ಷೀ
ರದಲ್ಲಿ ಹಾಕಿ ಆ ಧಾರವಂ ನೋಡಿ ದುಃಖದಿಂದ ಹಾಹಾಕಾರದೊಡನೆ ಅಳು
ತ್ತಿದ್ದಳು॥೯॥ಮತ್ತು ಉಪವಾಸವಿದ್ದಳು. ಆ ರಾತ್ರಿಯಲ್ಲಿಮನೆಯಲ್ಲಿದ್ದ ಸರ್ವ
ಧನವು, ಸಮಸ್ತ ಸಾಮಗ್ರಿಗಳು ಕಳ್ಳರಿಂದ ಅಪಹರಿಸಲ್ಪಟ್ಟಿತು. ಕ್ಷಣಮಾ
ತ್ರದಲ್ಲಿಯೇ ಆಶ್ಚರ್ಯವಾಗಿ ಮನೆಯು ಅಗ್ನಿಯಿಂದ ಸುಟ್ಟುಹೋಯಿತು॥೧೦
ಎರಡನೇ ದಿನದ ಪ್ರಾತಃಕಾಲದಲ್ಲಿ ಆ ಕೌಂಡಿನ್ಯನು ಅಳುತ್ತಿರುವ ಪತ್ನಿ
ಯಂ ಕುರಿತು ಎಲೇ ಪತ್ನಿಯೇ ಮಹಾ ಕಷ್ಟವು, ಮಹದಾಪತ್ತು ಪ್ರಾ
ಪ್ತವಾಯಿತು, ಏನು ಮಾಡಲಿ ॥೧೧॥ ಅನಂತಾಕ್ಷೇಪದಿಂದ ಉಂಟಾದ
ದೋಷದಿಂದ ದಾರಿದ್ರ್ಯವು ಪ್ರಾಪ್ತವಾಗಲೇ ಆಯಿತು. ಇಂತೆಂದ ಪತಿಯ
ವಾಕ್ಯವಂ ಕೇಳಿ ಆ ಪತ್ನಿಯು ಪತಿಯಂ ಸಮಾಧಾನವಂ ಪಡಿಸಿ ಹೇಳಿದಳು.
ಓ, ಪತಿಯೇ ಯಾತಕ್ಕೆ ವ್ಯಸನವಂ ಮಾಡುತ್ತಿ. ನೀನು ಈಗ ಪಾಪ ಪರಿ
ಹಾರಾರ್ಥವಾಗಿ ಭೂಯಾತ್ರಾ ರೂಪವಾದ ಪ್ರಾಯಶ್ಚಿತ್ತವಂ ಮಾಡಿ ಅ

ರುಷ್ಯಪಿ ॥೧೩॥ ದೃಷ್ಟ್ವಾನಂತಂತು ಸಂಪ್ರಾರ್ಥ್ಯ ವ್ರತಂ ಕುರು ಯಥಾವಿಧಿ।
ಇತ್ಯುಕ್ತ್ವಾನಂತಮೇವಂ ಸಾಧ್ಯಾಯಂತೀ ಹೃದಿ ಸರ್ವದಾ ॥೧೪॥ ತದ್ವಾಕ್ಯಮಾ
ಕರ್ಣ್ಯ ಮುನೀಶ್ವರಸ್ತದಾ ಸಧರ್ಮಪತ್ನೀಸಹಿತಸ್ತಥಾ ಕರೋತ್ । ಅನಂತ
ದೇವಂ ಹೃದಿ ತಂ ಚ ಭಾವಯನ್ ಪುನಃಪುನರ್ಬಾಷ್ಪಪರೀತಲೋಚನಃ ॥೧೫॥
ತತಃ ಕ್ಷೇತ್ರಾಣಿ ಪುಣ್ಯಾನಿ ತೀರ್ಥಾನಿ ಚ ಮುನೀಶ್ವರಃ । ಗತ್ವಾ ಕಾಶೀಮಪಿ ತಥಾ
ತತ್ರ ಸ್ನಾತ್ವಾ ಯಥಾವಿಧಿ ॥೧೬॥ ವಿಶ್ವನಾಥಂ ಸಮಭ್ಯರ್ಚ್ಯ ತಾರಯಿತ್ವಾಪಿ
ತೄನ್ಸ್ವಕಾನ್ । ಪಶ್ಚಾನ್ಮುನಿರ್ಗಯಾಶ್ರಾದ್ಧಮಕರೋನ್ಮುಕ್ತಿಕಾರಣಾತ್
॥೧೭॥ ತತಃ ಪ್ರಯಾಗಂ ಸಂಪ್ರಾಪ್ಯ ಸ್ನಾತ್ವಾ ಮೃತ್ತಿಕಯಾ ಪುನಃ । ಕಮಂ
ಡಲುಂ ಚ ನಿರ್ಮಾಯ ಗಾಂಗಂ ಸಂಪೂರ್ಯ ಚೋದಕಂ ॥೧೮॥ ದಿಶಂ ತು ದಕ್ಷಿಣಾಂ
ಗತ್ವಾ ಸ ಗತಸ್ಸೇತುಬಂಧನಂ । ತತ್ರ ಸ್ನಾತ್ವಾ ಚ ವಿಧಿವದ್ರಾಮೇಶಮಭಿಷಿಚ್ಯ ಚ
॥೧೯॥ ಕಮಂಡಲುಸ್ಥಗಾಂಗೇನ ಜಲೇನ ಮುನಿಸತ್ತಮಃ । ಸಂಪೂಜ್ಯ ಭಕ್ಷ್ಯ
ಭೋಜ್ಯಾದ್ಯೈರ್ನಿವೇದ್ಯಾಥ ಮಹಾಮುನಿಃ ॥೨೦॥ ಧ್ಯಾಯನ್ನಹರ್ನಿಶಂ ದೇ
ವಮನಂತಂ ವಿಶ್ವರೂಪಿಣಂ । ತತಸ್ತಂ ದ್ರಷ್ಟುಕಾಮೋಸೌ ಗತವಾನ್ನಿರ್ಜನಂ

ನಂತನ ದರ್ಶನವಂ ಮಾಡಿ ಚನ್ನಾಗಿ ಪ್ರಾರ್ಥಿಸಿ ॥೧೩॥ ಯಥಾವಿಧಿಯಾಗಿ
ವ್ರತಂ ಮಾಡೆಂದು ಹೇಳಿ ಸರ್ವದಾ ಆ ಶೀಲೆಯು ಹೃದಯದಲ್ಲಿ ಅನಂತನ
ನ್ನ ಧ್ಯಾನಿಸುತ್ತಿದ್ದಳು ೧೪ ಆ ಕೌಂಡಿನ್ಯನು ಆ ಪತ್ನಿಯ ಯೋಚನೆಯಂ
ಕೇಳಿ ಸಪತ್ನೀಕನಾಗಿ ಅದೇ ಪ್ರಕಾರ ಮಾಡಿದನು. ಆ ಅನಂತನ್ನ ಹೃದ
ಯದಲ್ಲಿ ಧ್ಯಾನಿಸುತ್ತಾ ಬಾರಿಬಾರಿಗೂ ಕಣ್ಣುಗಳಲ್ಲಿ ನೀರು ತುಂಬಿದವ
ನಾಗಿ ॥೧೫॥ ಪುಣ್ಯ ಕ್ಷೇತ್ರಗಳನ್ನು, ಪುಣ್ಯತೀರ್ಥಗಳನ್ನು ಕುರಿತು ಹೋ
ಗುತ್ತಾ ಕಾಶಿಗೆ ಹೋಗಿ ಯಥಾವಿಧಿಯಾಗಿ ಸ್ನಾನವಂ ಮಾಡಿ ॥೧೬॥ ವಿಶ್ವೇ
ಶ್ವರನ್ನ ಪೂಜೆಯಂ ಮಾಡಿ ತನ್ನ ಪಿತೃಗಳಂ ನರಕವಂ ದಾಟಿಸಿ ಅನಂತರ
ದಲ್ಲಿ ಮುಕ್ತ್ಯರ್ಥವಾಗಿ ಗಯಾ ಶ್ರಾದ್ಧವಂ ಮಾಡಿದನು॥ ೧೭ ॥ ಅನಂತರ
ಪ್ರಯಾಗಕ್ಕೆ ಹೋಗಿ ಸ್ನಾನವಂ ಮಾಡಿ ಮೃತ್ತಿಕೆಯಿಂದ ಕಮಂಡಲವಂ
ಮಾಡಿ ಗಂಗೋದಕವಂ ತುಂಬಿ ॥ ೧೮ ॥ ದಕ್ಷಿಣದಿಕ್ಕಿಗೆ ಹೋಗಿ ರಾಮ
ಸೇತುವೆಯಂ ಹೊಂದಿ ಯಥಾವಿಧಿಯಾಗಿ ಸ್ನಾನವಂ ಮಾಡಿ ರಾಮೇಶ್ವರನಿ
ಗೆ ॥೧೯॥ ಕಮಂಡಲದಲ್ಲಿದ್ದ ಗಂಗೋದಕದಿಂದಭಿಷೇಕವಂ ಮಾಡಿ ಭಕ್ಷ್ಯ
ಭೋಜ್ಯಗಳಿಂದ ನೈವೇದ್ಯವಂ ಮಾಡಿ ಚನ್ನಾಗಿ ಪೂಜಿಸಿ ॥೨೦॥ ದಿವಾರಾ
ತ್ರಿಯಲ್ಲಿಯೂ, ವಿಶ್ವರೂಪಿಯಾದ ಅನಂತನನ್ನ ಧ್ಯಾನಿಸುತ್ತಾ ಅನಂತನ
ದರ್ಶನ ಮಾಡಬೇಕೆಂದು ಇಚ್ಛೆ ಉಳ್ಳವನಾಗಿ ನಿರ್ಜನವಾದ ಅರಣ್ಯವಂ

ವನಂ ॥೨೧॥ ವೃದ್ಧಬ್ರಾಹ್ಮಣರೂಪೇಣತಂಗೃಹೀತ್ವಾಕರೇಣತು। ಸ್ವಂಧಾಮ
ದರ್ಶಯಾಮಾಸಪದ್ಮನಾಭೋಮಹಾದ್ಭುತಂ॥೨೨॥ ಸರ್ವಸೌಭಾಗ್ಯಸಂಯು
ಕ್ತಂಹೇಮಪ್ರಾಕಾರಶೋಭಿತಂ। ತತ್ರಸ್ಥಿತಂಪದ್ಮನಾಭಂಶಂಖಚಕ್ರಗದಾಧ
ರಂ॥೨೩॥ ಲಕ್ಷ್ಮೀಸಮೇತಂಭೋಗೀಂದ್ರಶಾಯಿನಂರತ್ನಕುಂಡಲಂ। ಕೌ
ಸ್ತುಭೇನವಿರಾಜಂತಂಚತುರ್ಬಾಹುಂಕಿರೀಟಿನಂ ॥೨೪॥ ದದರ್ಶಪರಯಾ
ಭಕ್ತ್ಯಾನತ್ವಾಸ್ತುತ್ವಾಮುನೀಶ್ವರಃ। ಉವಾಚವಿನಯಾವಿಷ್ಟಃಕೃತಾಂಜ
ಲಿರಿದಂವಚಃ ॥೨೫॥ ದೇವದೇವಮಹಾಬಾಹೋಶರಣಾಗತವತ್ಸಲ। ಪಾಹಿ
ಮಾಂಶರಣಂಪ್ರಾಪ್ತಮಪರಾಧಿನಮದ್ಯತು॥೨೬॥ ಪತ್ನ್ಯಾಕರೇಧೃತಂದೋ
ರಮಗ್ನೌಕ್ಷಿಪ್ತಂಮಯಾಪುರಾ। ತೇನದೋಷೇಣಮಹತಾದಾರಿದ್ರ್ಯಂಪತಿತಂ
ಗೃಹೇ॥೨೭॥ ತತ್ಕ್ಷಮಸ್ವಜಗನ್ನಾಥಭಕ್ತಿಂದೇಹ್ಯಚಲಾಂಕುರು। ತಚ್ಛ್ರು
ತ್ವಾನಂತದೇವೇಶೋಮುನಿಮಾಹದಯಾನಿಧಿಃ ॥೨೮॥ ಮಮವ್ರತಂಕುರು
ಷ್ವಾತ್ರ ಭುಕ್ತಿಮುಕ್ತಿಪ್ರದಂನೃಣಾಂ। ಮದ್ದೋರಂತೇಕರೇಬಧ್ವಾ ವರ್ಷೇವ

ಹೊಂದಿದನು ॥೨೧॥ ಅಲ್ಲಿ ಅನಂತಪದ್ಮನಾಭನು ವೃದ್ಧ ಬ್ರಾಹ್ಮಣ ರೂ
ಪದಿಂದ ಕೌಂಡಿನ್ಯನ ಕರವಂ ಪಿಡಿದು ಮಹದಾಶ್ಚರ್ಯಕರವಾದ ॥೨೨॥ ಸ
ರ್ವ ಸೌಭಾಗ್ಯಯುಕ್ತವಾಗಿಯೂ, ಹೇಮಪ್ರಾಕಾರ ಶೋಭಿತವಾಗಿಯೂ
ಇರುವ ತನ್ನ ಭವನವಂ ತೋರಿಸಿದನು. ಅಲ್ಲಿ ಶಂಖಚಕ್ರ ಗದಾಧರನಾಗಿ
ಯೂ ॥೨೩॥ ಲಕ್ಷ್ಮೀ ಸಮೇತನಾಗಿಯೂ, ಶೇಷಶಾಯಿಯಾಗಿಯೂ, ರತ್ನ
ಕುಂಡಲಗಳುಳ್ಳವನಾಗಿಯೂ, ಕೌಸ್ತುಭವೆಂಬ ಮಾಣಿಕ್ಯದಿಂದ ಪ್ರಕಾಶಿ
ಸುತ್ತಿರುವವನಾಗಿಯೂ, ಚತುರ್ಬಾಹುವಾಗಿಯೂ, ಕಿರೀಟಧಾರಿಯಾಗಿ
ಯೂ, ಇರುವ ಅನಂತಪದ್ಮನಾಭನ ದರ್ಶನವಂ ಮಾಡಿದವನಾದನು॥೨೪॥
ಪರಮಭಕ್ತಿಯಿಂದ ಕೌಂಡಿನ್ಯನು ನಮಸ್ಕಾರವಂ ಮಾಡಿ ಅನೇಕ ಪ್ರಕಾರ
ಸ್ತೋತ್ರವಂ ಮಾಡಿ ವಿನಯದೊಡನೆ ಅಂಜಲೀಬದ್ಧನಾಗಿ ನುಡಿದ ಓ, ಶರ
ಣಾಗತವತ್ಸಲನಾದ ದೇವ ದೇವನೇ, ಶರಣೆಂದು ಬಂದ ಅಪರಾಧಿಯಾದ
ನನ್ನನ್ನು ರಕ್ಷಿಸು॥೨೬॥ ಪತ್ನಿಯಿಂದ ಹಸ್ತದಲ್ಲಿರಿಸಲ್ಪಟ್ಟ ಧಾರವು ನನ್ನಿಂ
ದಾ ಅಗ್ನಿಯಲ್ಲಿ ಹಾಕಲ್ಪಟ್ಟಿತು. ಆ ಮಹಾ ದೋಷದಿಂದ ಮನೆಯಲ್ಲಿ ದರಿ
ದ್ರವು ಪ್ರಾಪ್ತವಾಯಿತು ॥೨೭॥ ಓ, ಜಗತ್ಪತಿಯೇ, ಆ ಅಪರಾಧವಂ ಕ್ಷ
ಮಿಸಿ ನನ್ನ ಭಕ್ತಿಯನ್ನ ನಿಶ್ಚಂಚಲವಾಗಿ ಮಾಡೆಂದು ನುಡಿದ ವಾಕ್ಯವಂ
ಕೇಳಿ ದಯಾನಿಧಿಯಾದ ಅನಂತನು ಕೌಂಡಿನ್ಯನಂಕುರಿತು ಹೇಳಿದನು।೨೮
ಓ, ಕೌಂಡಿನ್ಯನೇ ಮನುಷ್ಯರಿಗೆ ಭುಕ್ತಿ ಮುಕ್ತಿಗಳಂ ಕೊಡುವ, ನನ್ನ

ರ್ಷವ್ರತಂಚರ ॥ ೧೯ ॥ ಅನಯಾಭಾರ್ಯಯಾಸಾಕಂ ಸರ್ವಾನ್ಕಾಮಾನವಾಪ್ಸ್ಯಸಿ । ಗೊವರ್ಧನಗಿರಿಸ್ನಾಘೊವರ್ತತೆಪರ್ವತೊತ್ತಮಃ ॥ ೨೦ ॥ ತತ್ರತಿಷ್ಠಾಮಿವಿಪ್ರೇಂದ್ರಗೋಪವೇಷಧರಸ್ತ್ವಹಂ । ಸದಾರಸ್ತತ್ರಗಚ್ಛತ್ವಂವ್ರತಂಕೃತ್ವಾಸುಖಂವಸ ॥ ೨೧ ॥ ಮಮಪಾದೋದ್ಭವಾಕಾಚಿ ತ್ಕಾಂಡಿನೀತಿಭವಿಷ್ಯತಿ। ಲೊಕೊಪಕಾರಿಣೀಪುಣ್ಯಾಸರ್ವಪಾಪವಿನಾಶಿನೀ ॥ ೨೨ ॥ ಕಪಿಲಾಯೋಗಸಂಪನ್ನಾ ತದಾಮುಕ್ತಿರ್ಭವಿಷ್ಯತಿ । ಇತ್ಯುಕ್ತವಂತಂದೇವೇಶಂ ನಮಸ್ಕೃತ್ಯೈಚತುರ್ಭುಜಂ॥೨೩॥ ಅನಂತಸ್ಯವ್ರತಂತತ್ರಕೃತ್ವಾಚವಿಧಿಪೂರ್ವಕಂ । ತದನುಜ್ಞಾಮವಾಪ್ಯಾಸೌ ಗೊವರ್ಧನಗಿರಿಂಗತಃ ॥೨೪॥ ತಸ್ಮಿನ್ಗಿರೌರತ್ನಮಯೆ ಹೇಮಶೃಂಗಯುತೆಶುಭೆ । ಅನೆಕಖೆಚರಯುತೆನಾನಾತರುಸುಶೋಭಿತೆ ॥೨೫॥ ಸಿದ್ಧಗಂಧರ್ವಸಂವೀತೆಕಿನ್ನರೊರಗಸೆವಿತೆ। ತಸ್ಮಿನ್ವಸಂತಂಗೊಪಾಲಂದಿವ್ಯಪೀತಾಂಬರಾವೃತಂ ॥೨೬॥ ನೀಲಮೆಘಸಮಚ್ಛಾಯಂಮುಕುಟಾಂಗದಕುಂಡಲೈಃ । ಕೌಸ್ತುಭೆನವಿರಾಜಂತಂಮುಕ್ತಾಹಾರೈರಲಂಕೃತಂ ॥೨೭॥ ಮಹಾರ್ಹವೆಷಾಭರಣಂಕೊಟಿಸೂರ್ಯಸಮದ್ಯುತಿಂ। ದ

ವ್ರತವಂ ಮಾಡು ಪ್ರತಿವರ್ಷದಲ್ಲಿಯು, ನನ್ನ ಧಾರವಂ ಕೈಯಲ್ಲಿ ಕಟ್ಟಿಕೊಂಡು ವ್ರತವಂಮಾಡು ॥ ೧೯ ॥ ಈ ನಿನ್ನ ಪತ್ನಿಯೊಡನೆ ಸಮಸ್ತಕಾಮಗಳಂ ಹೊಂದುತ್ತಾ ಪರ್ವತ ಶ್ರೇಷ್ಠವಾದ ಗೊವರ್ಧನ ಗಿರಿಯೆಂಬೆ ಪರ್ವತವು ಇರುತ್ತದೆ. ಅದರಲ್ಲಿ ನಾನು ಗೋಪವೇಷ ಧಾರಿಯಾಗಿರುತ್ತಿಹೆನು. ಅಲ್ಲಿಗೆ ಹೋಗಿ ಸಾತ್ವೀಕನಾಗಿ ವ್ರತವಂಮಾಡಿ ಸುಖವಾಗಿರು॥೨೦॥ ಅಲ್ಲಿ ಒಂದು ನದಿಯು ನನ್ನ ಪಾದದಿಂದ ಹುಟ್ಟಿದ್ದಾಗಿ ಕೌಂಡಿನೀ ಎಂಬ ಹೆಸರುಳ್ಳದ್ದಾಗಿಯು, ಲೋಕೋಪಕಾರಿಣಿಯಾಗಿಯು, ಸರ್ವ ಪಾಪಗಳಂ ಪರಿಹರಿಸುವದಾಗಿಯು, ಪುಣ್ಯಕರವಾಗಿಯು ॥ ೨೨ ॥ ಕಪಿಲಾ ನದಿಯ ಸಂಗವಂ ಹೊಂದಿದ್ದು ಆಗುತ್ತದೆ. ಆಸಮಯದಲ್ಲಿ ನಿನಗೆ ಮುಕ್ತಿ ಆಗುವದೆಂದು ಹೇಳಿದ ವಿಷ್ಣುವನ್ನ ನಮಸ್ಕರಿಸಿ ॥ ೨೩ ॥ ಆಪರ್ವತದಲ್ಲಿ ವಿಧಿಪೂರ್ವಕವಾಗಿ ಅನಂತ ವ್ರತವಂಮಾಡಿ ಆ ಅನಂತನ ಆಜ್ಞಾಪ್ರಕಾರ ಗೋವರ್ಧನ ಗಿರಿಯಲ್ಲಿ ವಾಸ ಮಾಡುತ್ತಿದ್ದನು ॥೨೪॥ ಆ ಗಿರಿ ರತ್ನ ಮಯವಾಗಿಯು, ಸುವರ್ಣ ಮಯಶಿಖರಗಳುಳ್ಳದ್ದಾಗಿಯು, ಅನೇಕ ದೇವತಾಯುಕ್ತವಾಗಿಯು, ಬಹು ವೃಕ್ಷಶೋಭಿತ ವಾಗಿಯು ॥ ೨೫ ॥ ಸಿದ್ಧ ಗಂಧರ್ವ ಕಿನ್ನರೋರಗ ಸೇವಿತ ವಾದ ಆ ಗಿರಿಯಲ್ಲಿ ದಿವ್ಯ ಪೀತಾಂಬರನಾಗಿ

ದರ್ಶನಸಮುನಿಶ್ಶ್ರೇಷ್ಠಸ್ಸಹರ್ಷಂಶೀಲಯಾಸಹ । ೪೮ ॥ ತನ್ನತ್ವಾತತ್ರ
ಚಾಪಾಸಂಚಕಾರ ಪರಯಾಮುದಾ ।ಮಾಸಿಭಾದ್ರಪದೇಶುಕ್ಲೇ ಚತುರ್ದಶ್ಯಾಂ
ಮುನೀಶ್ವರ ॥ ೪೯ ॥ ತ್ರಯೋದಶ್ಯಾಂಮಿತಾಹಾರಃಪ್ರಾತಸ್ಸ್ನಾತ್ವಾಶು
ಭೋದಕೇ । ಅಷ್ಟತೀರ್ಥೇಷುಚಗಿರೌಪದ್ಮಾಕ್ಷಃಕದಲ್ಯೈರ್ಯ್ಯತೇ॥೫೦॥ ರುಕ್ಮಿ
ಣ್ಯಾಸಹಿತಂಕೃಷ್ಣಂಗೋಪಾಲಂಸತ್ಯಭಾಮಯಾ । ಧ್ಯಾತ್ವಾಮೂಲೇನಮಂ
ತ್ರೇಣಕಮಂಡಲುಜಲೈಶ್ಶುಭೈಃ ॥೫೧॥ ತತ್ಪಾದಾವಭಿಷಿಚ್ಯಾಥಕುಂಕುಮಾ
ಕ್ತಂಸುದೋರಕಂ। ತತ್ಪಾದಯೋಃಪ್ರತಿಷ್ಠಾಪ್ಯಗಂಧಪುಷ್ಪಾಕ್ಷತಾದಿಭಿಃ॥೫೨॥
ತತ್ರಾನಂತಂಸಮಾವಾಹ್ಯಷೋಡಶೋಪಚಾರೈಸ್ಸಮರ್ಚ್ಯತಿ।ನೈವೇದ್ಯೈರ್ವಿವಿಧೈರ್ಭಕ್ಷ್ಯೈ
ರ್ಭೋಜ್ಯೈರನ್ನಾನಾವಿಧೈರಪಿ॥ ೫೩॥ ತೇನತುಷ್ಟಃಪ್ರಸನ್ನೋಭೂದುವಾಚಮು
ನಿಸತ್ತಮಂ । ವರಂವರಯಭದ್ರಂತೇದೋರಂಗೃಹ್ಣೀಷ್ವಮತ್ಪ್ರಿಯಂ ॥ ೫೪॥
ತೇಃಪ್ರೀತ್ಯಾತೇನತದ್ದತ್ತಂ ಬಧ್ವಾಚಪ್ರಿಯಯಾಸಹ । ನತ್ವಾಸ್ತುತ್ವಾಪುನ
ರ್ದೇವಮುವಾಚಪರಮಂವಚಃ ॥೫೫॥ ಭಗವಂಚ್ಛ್ರೀಪತೇಪ್ರಾಪ್ತಂದರ್ಶನಾ

ಯು, ನೀಲ ಮೇಘ ಸಮಚ್ಛಾಯನಾಗಿಯು. ಮಕುಟ ಅಂಗದ ಕುಂಡಲ
ಕೌಸ್ತುಭ ಮುಕ್ತಾಹಾರಾದಿ ॥ ೪೮ ॥ ದಿವ್ಯಾಭರಣಾಲಂಕೃತನಾಗಿಯು,
ಇರುವ ಗೋಪಾಲ ಮೂರ್ತಿಯ ದರ್ಶನವಂ ಮಾಡಿ ಶೀಲೆಯೊಡನೆ ಹರ್ಷಿ
ತನಾಗಿ ಆ ಗೋಪಾಲ ಮೂರ್ತಿಗೆ ನಮಸ್ಕರಿಸಿ ಮಹಾ ಸಂತೋಷದಿಂದಾ
ಭಾದ್ರಪದ ಶುಕ್ಲ ಚತುರ್ದಶಿ ಬರಲು ॥ ೪೯ ॥

ತ್ರಯೋದಶೀ ದಿನದಲ್ಲಿ ಮಿತಾಹಾರಿಯಾಗಿ ಶುಭೋದಕಗಳುಳ್ಳ ಆ ಪರ್ವ
ತದಲ್ಲಿರುವ ಅಷ್ಟತೀರ್ಥಗಳಲ್ಲಿ ಪ್ರಾತಸ್ನಾನವಂಮಾಡಿ ರುಕ್ಮಿಣೀ ಸತ್ಯಭಾ
ಮಾ ಸಮೇತನಾದ ಗೋಪಾಲ ಕೃಷ್ಣನಂ ಧ್ಯಾನಿಸಿ ಮೂಲ ಮಂತ್ರದಿಂ
ದಾ ಶ್ರೀಕೃಷ್ಣನ ಪಾದ ಕಮಲವಂ ಕಮಂಡಲೋದಕಂಗಳಿಂದ ಅಭಿಷೇ
ಕವಂ ಮಾಡಿ ॥ ೫೧ ॥ ಕುಂಕುಮದಲ್ಲಿ ನೆನಸಲ್ಪಟ್ಟ ಧಾರವಂ ಕೃಷ್ಣಮೂ
ರ್ತಿಯ ಪಾದಗಳಲ್ಲಿ ಇರಿಸಿ ಗಂಧ ಪುಷ್ಪಾಕ್ಷತಾದಿಗಳಿಂದ ಆ ಧಾರದಲ್ಲಿ ಅ
ನಂತನ್ನ ಆವಾಹನೆಯಂಮಾಡಿ ಷೋಡಶೋಪಚಾರಗಳಿಂದಲೂ, ನಾನಾವಿ
ಧವಾದ ಭಕ್ಷ್ಯ ಭೋಜ್ಯಾದಿ ನೈವೇದ್ಯಗಳಿಂದಲೂ, ಪೂಜೆಯಂ ಮಾಡಿದ
ನು. ಅದರಿಂದಾ ಸ್ವಾಮಿಯು ಕೌಂಡಿನ್ಯನಂ ಕುರಿತು ಪ್ರಸನ್ನನಾಗಿ ಎಲೈ
ಕೌಂಡಿನ್ಯನೆ ನನಿಗೆ ಪ್ರಿಯವಾದ ಧಾರವಂ ಗ್ರಹಿಸು ನಿನಗೆ ಶುಭವುಂಟಾ
ಗುತ್ತದೆ ನಿನಗೆ ಬೇಕಾದ ವರವಂ ಕೇಳೆನಲು ಆ ಕೃಷ್ಣಮೂರ್ತಿಯು ಮಾ

ತ್ಸಕಲಂತವ। ಮುಕ್ತಿರ್ಮೆಸ್ಯಾದ್ಭವತ್ಪಾದಾತ್ಸಂಭೂತಾಕೌಂಡಿನೀನದೀ॥೪೬
ಮುಕ್ತಿಪ್ರದಾಸ್ತುಸರ್ವೇಶ ಗಿರಾವಸ್ಮಿನ್ವಸಾಮ್ಯಹಂ । ಇತಿಬ್ರುವಾಣಮಾಹೆ
ಶಂತಥಾಸ್ತ್ವಿತಿಕೃಪಾನಿಧಿಃ । ೪೭ ॥ ಹರೇರ್ವರಪ್ರಭಾವೇನಗೋಪಾಲಸ್ಯಪದೋ
ದ್ಭವಾ। ಕೌಂಡಿನೀನಾಮಚನದೀಖ್ಯಾತಾಸೀದ್ಭುವನತ್ರಯೇ॥೪೮॥ ಸರ್ವರೋ
ಗೌಘಶಮನೀ ಸರ್ವಾರಿಷ್ಟನಿವಾರಿಣೀ। ಸರ್ವಾಘೌಘಪ್ರಶಮನೀಚಿಂತಿತಾಭೀ
ಷ್ಟದಾಯಿನೀ॥೪೯॥ ಮೃಗಪಕ್ಷಿಪ್ರೀತಿಕರೀಸ್ನಾತಾನಾಂಮುಕ್ತಿದಾಯಿನೀ।
ಸರ್ವಸಂಪತ್ಪ್ರದಾನಿತ್ಯಮಖಂಡಿತಜಲಸ್ರವಾ ॥೫೦॥ ವಿಷಕಂಠಸಮೀಪಸ್ಥಾ
ಕಪಿಲಾಯೋಗಮಾಗತಾ । ಪ್ರವಹಂತೀಸರಿನ್ಮುಖ್ಯಾಸರ್ವಲೋಕೋಪಕಾರಿಣೀ॥
೫೧॥ ತಾಂದೃಷ್ಟ್ವಾಹರ್ಷಮಾಪನ್ನಸ್ಸದಾರಸ್ತತ್ರಸಂಸ್ಥಿತಃ। ಅನೇಕಶಿಷ್ಯ

ತುಗಳಂ ಕೇಳಿ ಆತನಿಂದಾ ಕೊಡಲ್ಪಟ್ಟ ಧಾರವಂ ಕಟ್ಟಿಕೊಂಡು ನಮಸ್ಕರಿ
ಸಿ ಸ್ತೋತ್ರವಂಮಾಡಿ ಮತ್ತು ಸ್ವಾಮಿಯಂ ಕುರಿತು ಕೇಳುತ್ತಾನೆ ॥೪೫॥
ಓ ಭಗವಂತನಾದ ಲಕ್ಷ್ಮೀಪತಿಯೆ ನಿನ್ನ ದರ್ಶನದಿಂದಾ ಸಕಲವು ಪ್ರಾಪ್ತ
ವಾಯಿತು. ನನಿಗೆ ಮುಕ್ತಿಯು ಆಗಬೇಕು. ನಿನ್ನ ಪಾದದಿಂದ ಹುಟ್ಟಿದ
ಕೌಂಡಿನೀ ನದಿಯು ॥ ೪೬ ॥ ಮುಕ್ತಿಯನ್ನ ಕೊಡುವಂಥಾದ್ದಾಗಲಿ ನಾ
ನು ಈ ಪರ್ವತದಲ್ಲಿಯೇ ವಾಸಮಾಡುತ್ತಿರುವೆನೆಂದು ಹೇಳುತ್ತಿರುವ ಕೌಂ
ಡಿನ್ಯನಂಕುರಿತು ದಯಾನಿಧಿಯಾದ ಭಗವಂತನು ಹಾಗೆಯೇ ಆಗಲೆಂದು
ಹೇಳಿದನು. ಆ ಹರಿಯವರ ಪ್ರಭಾವದಿಂದ ಗೋಪಾಲಮೂರ್ತಿಯ ಪಾದ
ದಲ್ಲಿ ಹುಟ್ಟಿದ ಕೌಂಡಿನೀ ನದಿಯು, ಲೋಕತ್ರಯದಲ್ಲಿಯು, ಪ್ರಸಿದ್ಧವಾದ
ದ್ದಾಯಿತು ॥ ೪೮ ॥ ಆನದಿಯು ಸರ್ವ ರೋಗಗಳಂ ಶಾಂತಿ ಮಾಡುವಂ
ಥಾದ್ದು, ಸರ್ವಾರಿಷ್ಟಗಳಂ ನಿವಾರಿಸುವಂಥಾದ್ದು, ಸರ್ವ ಪಾಪ ರಾಶಿಗ
ಳಂ ಶಮನ ಮಾಡುವಂಥಾದ್ದು, ಅಪೇಕ್ಷಿಸಿದ ಇಷ್ಟಾರ್ಥಗಳಂ ಕೊಡುವಂಥಾ
ದ್ದು, ಮೃಗಪಕ್ಷಿಗಳಿಗೂ ಪ್ರೀತಿಕರವಾದಂಥಾದ್ದು, ಸ್ನಾನ ಮಾಡಿದಂಥಾ
ವರಿಗೆ ಮುಕ್ತಿಯಂ ಕೊಡುವಂಥಾದ್ದು, ಸರ್ವ ಸಂಪತ್ತುಗಳಂ ಕೊಡುವಂ
ಥಾದ್ದು, ಸರ್ವಕಾಲದಲ್ಲಿಯು ನಿಲ್ಲದೆ ಜಲ ಪ್ರವಾಹವುಳ್ಳದ್ದು ॥೫೦॥ ಶ್ರೀ
ಕಂಠನಿಗೆ ಸಮೀಪದಲ್ಲಿರುವಂಥಾದ್ದು, ಕಪಿಲಾನದಿಯ ಸಂಗಮವಂ ಹೊಂ
ದಿದಂಥಾದ್ದು, ಸರ್ವ ಲೋಕಗಳಿಗೂ ಉಪಕಾರಿಣಿಯಾಗಿ ಪ್ರವಹಿಸುತ್ತಿರು
ವ ನದಿಗಳಲ್ಲಿ ಈ ಕೌಂಡಿನೀ ನದಿಯು ಮುಖ್ಯವಾದದ್ದು ॥ ೫೧ ॥ ಅಂಥಾ
ನದಿಯನ್ನ ನೋಡಿ ಹರ್ಷಿತನಾಗಿ ಕೌಂಡಿನ್ಯನು ಪತ್ನಿ ಶಿಷ್ಯ ಪುತ್ರ ಸಮೇ

ಸಂಯುಕ್ತಃಪುತ್ರಪೌತ್ರೈಃಪರಿಷ್ಕೃತಃ ॥ ೫೦ ॥ ತಸ್ಯಾಂಸ್ನಾತ್ವಾಚವಿಧಿವದ್ದೃಷ್ಟ್ವಾಗೋಪಾಲಮೇವಚ। ತದನುಜ್ಞಾಮನುಪ್ರಾಪ್ಯಭೂಕೈಲಾಸಮಥಾಗಮತ್ ॥೫೧॥ ಕೌಂಡಿನೀತೀರಮಾರ್ಗೇಣದೃಷ್ಟ್ವಾತಾಮತಿಸಂಭ್ರಮಃ। ಕಪಿಲಾಕೌಂಡಿನೀಸಂಗೇಸ್ನಾತ್ವಾವೈವಿಷಹಾರಿಣಂ ॥೫೨ ॥ ದೃಷ್ಟ್ವಾನತ್ವಾಚ ಕೌಂಡಿನ್ಯೋದೃಷ್ಟ್ವಾವೈಕೇಶವಂತಥಾ। ಸ್ವಮಾಶ್ರಮಮನುಪ್ರಾಪ್ಯಸರ್ವಭೋಗಸಮಾಶ್ರಿತಃ ॥೫೩ ॥ ಪುತ್ರೈಃಪೌತ್ರೈಃಪ್ರಪೌತ್ರೈಶ್ಚಸಭಾರ್ಯೋಮುನಿಸತ್ತಮಃ । ಬುಭುಜೇಸಕಲಾನ್ಭೋಗಾನ್ಜಗಾಮಾಂತೇಪರಂಪದಂ ॥೫೪॥ ಶ್ರೀಸೂತ:॥ ಕೌಂಡಿನ್ಯಾಶ್ಚಸಮುತ್ಪತ್ತಿಂಯೇಶೃಣ್ವಂತಿಪಠಂತಿಚ । ಅಶ್ವಮೇಧಫಲಂತೇಷಾಂಭೂಮಿಯಾತ್ರಾಫಲಂಲಭೇತ್ ॥೫೫॥

ಇತಿಶ್ರೀ ಸ್ಕಾಂದಪುರಾಣೆ ಗರಳಪುರೀಮಹಾತ್ಮ್ಯೇ ಕೌಂಡಿನ್ಯುತ್ಪತ್ತಿ
ಕಥನಂನಾಮ ಪಂಚಮೋಧ್ಯಾಯಃ.

ಋಷಯಃ॥ ಸಮ್ಯಗುಕ್ತಂಮಹಾಭಾಗ ಮಾಹಾತ್ಮ್ಯಂ ಪರಮಾದ್ಭುತಂ ತದ್ಭೂಯಶ್ರೋತುಕಾಮಾನಾಂ ವದವಿಸ್ತರತೋಮುನೇ ॥ ೧ ॥ ಶ್ರೀಸೂ

ತನಾಗಿ ಅಲ್ಲಿದ್ದುಕೊಂಡು ಆ ನದಿಯಲ್ಲಿ ವಿಧಿ ಪ್ರಕಾರ ಸ್ನಾನವಂಮಾಡಿ ಗೋಪಾಲ ಮೂರ್ತಿಯ ದರ್ಶನವಂಮಾಡಿ ಆ ಗೋಪಾಲ ಮೂರ್ತಿಯ ಅಪ್ಪಣೆಯಂ ಹೊಂದಿ ಭೂಕೈಲಾಸವಾದ ಗರಳಪುರಿಯಂ ಕುರಿತು ಕೌಂಡಿನೀ ನದಿಯ ತೀರಸ್ಥವಾದ ಮಾರ್ಗದಿಂದಾ ಬಂದು ಅತಿ ಸಂಭ್ರಮಯುಕ್ತನಾಗಿ ಆ ನದಿಯಂ ನೋಡಿ ಕಪಿಲಾ, ಕೌಂಡಿನೀ, ಸಂಗಮ, ಸ್ಥಳವಲ್ಲಿ ಸ್ನಾನವಂ ಮಾಡಿ ವಿಷ ಹರನಾದ ಶ್ರೀಕಂಠನ ದರ್ಶನವಂಮಾಡಿ॥ ೫೨ ॥ ನಮಸ್ಕಾರವಂಮಾಡಿ ಅಲ್ಲಿದ್ದ ಕೇಶವ ಮೂರ್ತಿಯ ದರ್ಶನವಂಮಾಡಿ ಸ್ವಾಶ್ರಮಕ್ಕೆ ಹೋಗಿ ಸರ್ವ ಭೋಗಗಳನ್ನು ಹೊಂದಿ ॥ ೫೩ ॥ ಪುತ್ರ ಪೌತ್ರ ಪ್ರಪೌತ್ರರೊಂದಿಗೆ ಸಭಾರ್ಯನಾಗಿ ಸಕಲ ಭೋಗಗಳಂ ಅನುಭವಿಸಿ ಪರಮ ಪದವಿಯಂ ಹೊಂದಿದನು ॥ ೫೪ ॥ ಸೂತನು ಹೇಳುತ್ತಾನೆ. ಈ ಕೌಂಡಿನಿ ನದಿಯ ಉತ್ಪತ್ತಿಯನ್ನ ಕೇಳಿದವರು, ಹೇಳಿದವರು, ಅಶ್ವಮೇಧ ಯಾಗದ ಫಲವನ್ನು, ಭೂ ಯಾತ್ರೆ ಮಾಡಿದ ಫಲವನ್ನು,ಹೊಂದುವರು. ❋॥ ❋॥ ಇಲ್ಲಿಗೆ ಸ್ಕಾಂದ ಪುರಾಣದಲ್ಲಿ ಗರಳಪುರಿ ಮಾಹಾತ್ಮ್ಯೆಯಲ್ಲಿ ಕೌಂಡಿನೀ ಉತ್ಪತ್ತಿ ಕಥನವೆಂಬ ಐದನೇ ಅಧ್ಯಾಯವು.

ಸಮಸ್ತ ಋಷಿಗಳು ಕೇಳುತ್ತಾರೆ. ಓ ಮಹಾ ಪುಣ್ಯಾತ್ಮರಾದ ಸೂತ

ತೇ‖ ಕೌಂಡಿನ್ಯಾಃಪೂರ್ವದಿಗ್ಭಾಗೆಕ್ಷೇತ್ರಮಸ್ತಿಮಹತ್ತರಂ । ತಪೋಯೋಗಕರಂ ಯೋಗ್ಯಂಪ್ರಾಣಿನಾಂಮುಕ್ತಿದಾಯಕಂ‖ ೨‖ ವಕ್ಷ್ಯಾಮಿತಸ್ಯಮಾಹಾತ್ಮ್ಯಂ ಶ್ರವಣಾತ್ಪಾಪನಾಶನಂ । ವಾಚಕಂಕಾಯಕಂಪಾಪಂಮಾನಸಂತುವಿನಶ್ಯತಿ ‖೩‖ ತತ್ ಕ್ಷೇತ್ರದರ್ಶನಾದ್ವಾಸಾದ್ಭುಕ್ತಿಮುಕ್ತಿಫಲಪ್ರದಂ । ಪುರಾದೇವರ್ಷಯ ಸ್ತತ್ರನಾರದಾದ್ಯಾಸ್ಸಶಿಷ್ಯಕಾಃ । ಗೌರೀಶಂದ್ರಷ್ಟುಕಾಮಾಹಿಕೈಲಾಸಮಾಗ ಮಂತ್ಸುರಾಃ। ತತ್ರಶಂಭುಮದೃಷ್ಟ್ವಾತುವೈಕುಂಠಮಾಗಮಂಸ್ತದಾ ‖೪‖ ತತ್ರಾಪ್ಯಪಶ್ಯಮಾನಾಸ್ತೆಗೌರೀಶಂಹರಿಮಪ್ಯಥ । ತತ್ರಸರ್ವೆಮಿಳಿತ್ವಾತುಭೂಲೋಕೆವಿಷಕಂಧರಃ ‖ ೫ ‖ ಕೇಶವೋಪಿವಸತ್ಯದ್ಧಾಪರಿವಾರಸಮನ್ವಿತಃ । ಇತ್ಯಾಲೋಚ್ಯಸಮಾಜಗ್ಮುಃಪದ್ಮಜನ್ಮಾದಯಸ್ಸುರಾಃ ‖೬‖ ಕಪಿಲಾಕೌಂಡಿನೀ ಮಧ್ಯೆವಸಂತಂವಿಷಹಾರಿಣಂ । ಕೇಶವಂದದೃಶುಸ್ತೆತು ಹರ್ಷಭಕ್ತಿಸಮನ್ವಿತಾಃ ‖೭‖ ಕಪಿಲಾಯಾಂಮಹಾನದ್ಯಾಂಕೌಂಡಿನ್ಯಾಂಚವಿಶೆಷತಃ। ತೆತ್ರಯೊ

ಮುನಿಯೇ, ಪರಮಾಶ್ಚರ್ಯಕರವಾದ ಮಾಹಾತ್ಮ್ಯವು ನಿನ್ನಿಂದಾ ಚನ್ನಾಗಿ ಹೇಳಲ್ಪಟ್ಟಿತು.. ಆ ಮಹಾತ್ಮ್ಯವಂ ಮತ್ತು ವಿಸ್ತಾರವಾಗಿ ಕೇಳಲಿಚ್ಛೈಸುತ್ತಿರುವ ನಮ್ಮಗಳಿಗೆ ಹೇಳಬೇಕೆನಲು ಸೂತಮುನಿಯು ಹೇಳುತ್ತಾನೆ ‖೧‖ ಕೌಂಡಿನೀ ನದಿಯ ಪೂರ್ವದಿಗ್ಭಾಗದಲ್ಲಿ ಮಹತ್ತರವಾದ ಕ್ಷೇತ್ರವಿರುತ್ತದೆ. ಅದು ಪ್ರಾಣಿಗಳಿಗೆ ತಪೋ ಯೋಗ್ಯವಾಗಿಯೂ, ಮುಕ್ತಿಪ್ರದವಾಗಿಯೂ ಇರುತ್ತದೆ. ಅದರ ಮಹಾತ್ಮ್ಯವಂ ಕೇಳಿದ್ದರಿಂದ ಪಾಪನಾಶನವಾಗುವದು. ಮತ್ತು ಕಾಯಕ, ಕವಾಚಕ, ಮಾನಸಿಕಗಳೆಂಬ ಪಾಪಗಳು ನಶಿಸುತ್ತವೆ. ಆ ಕ್ಷೇತ್ರದ ದರ್ಶನದಿಂದಲೂ, ವಾಸದಿಂದಲೂ ಭುಕ್ತಿ ಮುಕ್ತಿ ಫಲಗಳುಂಟಾಗುತ್ತವೆ. ಪೂರ್ವದಲ್ಲಿ ನಾರದಾದಿ ಮಹರ್ಷಿಗಳು ಸಶಿಷ್ಯರಾಗಿ ಗೌರೀ ಪತಿಯನ್ನು ನೋಡಬಿಚ್ಛೈಸಿ ಕೈಲಾಸಕ್ಕೆಹೋಗಿ ಅಲ್ಲಿ ಪರಮೇಶ್ವರನಂ ಕಾಣದೆ ವೈಕುಂಠಕ್ಕೆ ಹೋದರು‖೪‖ ಅಲ್ಲಿಯು ಹರಿಹರರನ್ನ ಕಾಣದೆ ಎಲ್ಲರು ಗುಂಪು ಕೂಡಿ ಭೂಲೋಕದಲ್ಲಿ ಈಶ್ವರ‖೫ ವಿಷ್ಣುವು ಸಹ ಇರುತ್ತಿಹನು. ಯಥಾರ್ಥವೆಂದು ಸಪರಿವಾರವಾಗಿ ಅಲೋಚಿಸಿ ಬ್ರಹ್ಮಾದಿ ಸುರರು ಹೊರಟುಬಂದು ‖೬ ‖ ಕಪಿಲಾ ಕೌಂಡಿನೀ ಮಧ್ಯೆದಲ್ಲಿರುತ್ತಿರುವ ಹರಿಹರರನ್ನ ಭಕ್ತಿಯುಕ್ತರಾಗಿ ದರ್ಶನವಂ ಮಾಡಿದರು ‖೭‖ ಆ ದೇವ ಋಷಿಗಳು ಕಪಿಲಾ ನದಿಯಲ್ಲಿಯೂ, ಕೌಂಡಿನೀ ನದಿಯಲ್ಲಿಯೂ, ಆ ಎರಡು ಸಂಗಮದಲ್ಲಿಯೂ ವಿಧ್ಯುಕ್ತವಾಗಿ ಸ್ನಾನವಂ ಮಾ

ಸ್ವಂಗಮೊಯತ್ರತತ್ರಸಸ್ನುರ್ಯಥಾವಿಧಿ ॥೯॥ ವಿಷಪ್ರಹರಣಂದೇವಂಶಂಖಚಕ್ರ
ಗದಾಧರಂ । ಕೇಶವಂಪುರತೋದೃಷ್ಟ್ವಾಸಾಷ್ಟಾಂಗಂಪ್ರಣಿಪತ್ಯಚ ॥೧೦॥
ತುಷ್ಟುವುರ್ವಿವಿಧೈರ್ವಾಕ್ಯೈಶ್ಚತುರ್ವೇದಸಮುದ್ಭವೈಃ । ನಮಸ್ತೆದೇವದೇವೇ
ಶನಮಸ್ತೇಧರಣೀಧರ ॥೧೧॥ ನಮಸ್ತೆಪುಂಡರೀಕಾಕ್ಷವೇದವೇದ್ಯಜಗತ್ಪತೇ ।
ಇತಿಸ್ತುತ್ವಾಮಹಾವಿಷ್ಣುಂಶಂಕರಂತುಷ್ಟುವುಸ್ತದಾ ॥೧೨॥ ನಮೋನಮಃ
ಕಾರಣಕಾರಣಾಯಜಗನ್ಮಯಾಯಾಹಿತನಾಶಕಾಯ । ತ್ರೈತಾಪದಪದ್ಮಾಶ್ರಿ
ತರಕ್ಷಕಾಯಶ್ರೀನೀಲಕಂಠಾಯನಮಶ್ಶಿವಾಯ ॥೧೩॥ ಧ್ಯಾಯಂತಿಯೇತ್ವಾಂ
ಯತಯಸ್ತುಮಂತಿಹೃದಂಬುಜೇದೀಪಸಮಪ್ರಕಾಶಂ । ನಾಸಾಗ್ರವಿನ್ಯಸ್ತವಿ
ಲೋಚನಾಯಶ್ರೀನೀಲಕಂಠಾಯನಮಶ್ಶಿವಾಯ ॥೧೪॥ ಸರ್ಗಸ್ಥಿತಿಧ್ವಂಸನೆ
ಕಾತಣಾಯ ಯಮಾದಿಯೋಗಾಷ್ಟಕಸಿದ್ಧಿದಾಯ । ತಪಸ್ವಿನಾಂಶೀಘ್ರಫಲ
ಪ್ರದಾಯಶ್ರೀನಿಲಕಂಠಾಯನಮಶ್ಶಿವಾಯ ॥೧೫॥ ವೇದಾದಿರೂಪಾಯತ್ರಿ
ಲೋಚನಾಯವೇದಾಂತವೇದ್ಯಾಯದಿಗಂಬರಾಯ । ವಿಭೂತಿಶುಭ್ರಾಯಜಟಾ
ಧರಾಯಶ್ರೀನೀಲಕಂಠಾಯನಮಶ್ಶಿವಾಯ ॥೧೬॥ ಉಗ್ರಾಯಸಂಸಾರಭ
ಯಾಪಹಾಯ ಜ್ಞಾನಪ್ರದಾಯಾಶುಸುಖಪ್ರದಾಯ । ಕಾಲಾಂತಕಾಯಪ್ರಳ
ಯಾನಿಲಾಯಶ್ರೀನೀಲಕಂಠಾಯನಮಶ್ಶಿವಾಯ ॥೧೭॥ ವಿಧಾತೃರೂಪಾಯ
ಜಗದ್ಧಿತಾಯ ರಮೇಶರೂಪಾಯಸದಾಶಿವಾಯ । ಅನಂತರೂಪಾಯಚತು
ರ್ಭುಜಾಯಶ್ರೀನೀಲಕಂಠಾಯನಮಶ್ಶಿವಾಯ ॥೧೮॥ ವಿಶ್ವೈಕವಂದ್ಯಾ

ಡಿದರು ॥೯॥ ವಿಷಪ್ರಹರಣನಾದ ಈಶ್ವರನನ್ನು ಶಂಖ ಚಕ್ರ ಗದಾಧಾರಿಯಾದ ಕೇಶವ ಮೂರ್ತಿಯನ್ನು ಪುರೋಭಾಗದಲ್ಲಿ ನೋಡಿ ಸಾಷ್ಟಾಂಗವಾಗಿ ನಮಸ್ಕರಿಸಿ ॥೧೦॥ ಚತುರ್ವೇದಗಳಿಂದ ಹುಟ್ಟಿದ ನಾನಾವಿಧ ಸ್ತೋತ್ರಗಳಿಂದ ಅನುಗ್ರಹಯುಕ್ತರಂ ಮಾಡುವವರಾಗಿ ಹೇ ದೇವ ದೇವ, ಧರಣೀಧರ ಪುಂಡರೀಕಾಕ್ಷ, ವೇದವೇದ್ಯ, ಜಗತ್ಪತೆ ನಿನಗೆ ನಮಸ್ಕಾರವು ಹೀಗೆಂದು ಸ್ತೋತ್ರವಂ ಮಾಡಿದರು ॥೧೨॥ (ಸ್ತೋತ್ರ ಯೆಂಟು ಶ್ಲೋಕ ಸೇರಿ ೨೦). ಈ ಪ್ರಕಾರ ಸ್ತೋತ್ರವು ಮಾಡಿ ಬಾರಿ ಬಾರಿಗು ಮಹಾದೇವನಂ ನಮಸ್ಕರಿಸಿ ಸಮಸ್ತ ಋಷಿಗಳೂ, ಬ್ರಹ್ಮಾದಿ ದೇವತೆಗಳೂ ಸಹಾ ಧ್ಯಾನವು ಮಾಡಿದರು. ಆ ಸ್ತೋತ್ರದಿಂದ ಪರಮೇಶ್ವರನು ಸಂತುಷ್ಟನಾಗಿ ಆದೇವರ್ಕಳಂಕುರಿತು ಓ ಪುಣ್ಯಾತ್ಮರಾದ ದೇವತೆಗಳಿರಾ, ಈ ಸ್ತೋತ್ರದಿಂದ ಸಂತುಷ್ಟನಾದೆನು. ನಾನು ವಿಶ್ವಾಸದಿಂದ ವರವು ಕೊಡುತ್ತೇ

ಯ ಕಲಾಧರಾಯ ಸಮಸ್ತಲೋಕೈಕಸಮಾಶ್ರಯಾಯ । ಕಾಂತಾರಪಾಶಾಂಕು
ಶಪಾಣಿನೇ ಚ ಶ್ರೀನೀಲಕಂಠಾಯ ನಮಶ್ಶಿವಾಯ ॥೧೯॥ ಶರ್ವಾಯ ಸರ್ವಪ್ರಿ
ಯಕಾರಣಾಯ ಪಿನಾಕಿನೇ ಬಾಣಧರಾಯ ತುಭ್ಯಂ । ಗೌರೀಪ್ರಿಯಾಯಾಖಿಲ
ಪಾಲಕಾಯ ಶ್ರೀನೀಲಕಂಠಾಯ ನಮಶ್ಶಿವಾಯ ॥೨೦॥ ತೇನ ಸ್ತೋತ್ರೇಣ ಸಂ
ತುಷ್ಟಃ ಪಿನಾಕೀ ಪ್ರಾಹ ತಾನ್ ಸುರಾನ್ । ಪ್ರೀತೋಸ್ಮಿ ಚ ಮಹಾಭಾಗಾಸ್ಸ್ತೋ
ತ್ರೇಣಾನೇನ ಭೋ ಸುರಾಃ ॥೨೧॥ ವರಂ ದದಾಮ್ಯಹಂ ಪ್ರೀತ್ಯಾ ವೃಣುಧ್ವಂ ಮ
ನಸೇಪ್ಸಿತಂ ॥ದೇವಾ ಊಚುಃ॥ ತ್ವದ್ದರ್ಶನಾದಭೀಷ್ಟಂ ನೋ ಜಾತಮದ್ಯ ಪ್ರ
ಭೋ ಹರ । ತ್ವಾಂ ದ್ರಷ್ಟುಕಾಮಾ ಹಿ ವಯಂ ಪ್ರಾಪ್ತಾ ಗೌರೀಪತೇ ವಿಭೋ ॥೨೩॥
ಕೈಲಾಸಂ ಭವದಾವಾಸಂ ವೈಕುಂಠಂ ಹರಿಸಂಶ್ರಯಂ । ಯುವಾಂ ತತ್ರಾಪ್ಯದೃ
ಷ್ಟ್ವೈತು ವಯಂ ಪ್ರಾಪ್ತಾಸ್ತ್ವದಂತಿಕಂ ॥೨೪॥ ಇದಾನೀಂ ತವ ಭೋಗೀಂದ್ರ
ಭೂಷಣ ಪ್ರಮಥಾಧಿಪ । ಪಾದಾರವಿಂದೇ ದೃಷ್ಟಾಸ್ಮಸ್ತ್ವತ್ಕ್ಷೇತ್ರೇ ತವ ಉತ್ತ
ಮಂ ॥೨೫॥ ಕರ್ತುಮಾಗಮಿಷ್ಯಾಮಃ ಕರ್ಮಭೂಮೌ ವಿಶೇಷತಃ । ಅ
ನುಜ್ಞಾಂ ಕುರು ದೇವೇಶ ಮುಕ್ತಿಂ ಕುರು ಮಹೇಶ್ವರ ॥೨೬॥ ತಚ್ಛ್ರುತ್ವಾ ವಚನಂ
ತೇಷಾಂ ವಾಕ್ಯಂ ತ್ವಮೃತಸಂಮಿತಂ । ಪುನರಪ್ಯಾಹ ಭಗವಾನೃಷೀಂದೇವಾಂದ
ಯಾಪರಃ ॥೨೭॥ ತಪಸ್ಥಲಂ ತು ವಕ್ಷ್ಯಾಮಿ ಯೋಗಿನಾಂ ಮುಕ್ತಿದಂ ನೃಣಾಂ ।
ಶ್ರವಣಾತ್ಸರ್ವಪಾಪಘ್ನಂ ದೋಷತ್ರಯವಿನಾಶನಂ ॥೨೮॥ ಗುಪ್ತಾಗುಪ್ತ

ನೆ. ನಿಮ್ಮ ಮನಸ್ಸಿಗೆ ಇಷ್ಟವಾದವರನ್ನ ಬೇಡಿರೆನಲು, ದೇವತೆಗಳು ಹೇ
ಳುತ್ತಾರೆ ॥೨೨॥ ಓ ಪ್ರಭುವಾದ ಹರನೇ, ನಿಮ್ಮ ದರ್ಶನದಿಂದಲೇ ನಂ
ಮ ಇಷ್ಟಾರ್ಥವಾಯಿತು. ನಿನ್ನನ್ನು ನೋಡಬೇಕೆಂಬ ಇಚ್ಛೆವುಳ್ಳವರಾ
ಗಿ ಬಂದೆವು॥೨೩॥ ನಿನಗೆ ಕೈಲಾಸವು ವಾಸಸ್ಥಾನವಾದದ್ದು. ವೈಕುಂಠವು
ಶ್ರೀಮಹಾವಿಷ್ಣುವಿಗೆ ವಾಸಸ್ಥಾನವಾದದ್ದು ಆ ಎರಡು ಸ್ಥಳಗಳಲ್ಲಿಯೂ ನಿ
ಮ್ಮನ್ನು ಕಾಣದೆ ನಾವುಗಳು ನಿನ್ನ ಸಮೀಪವಂ ಕುರಿತು ಬಂದೆವು ॥೨೪॥
ಓ ಹರಿಹರರೇ, ನಿಮ್ಮ ಪಾದಾರವಿಂದವನ್ನು, ಉತ್ತಮವಾದ ನಿಮ್ಮ ಕ್ಷೇ
ತ್ರವನ್ನು ನೋಡಿದವರಾದೆವು. ಈ ಕರ್ಮ ಭೂಮಿಯಲ್ಲಿ ಸತ್ಕರ್ಮ ಮಾ
ಡುವದಕ್ಕಾಗಿ ಬಂದೆವು. ವಿಶೇಷವಾಗಿ ಅಪ್ಪಣೆಯಂ ಕೊಟ್ಟು ಮುಕ್ತಿಯ
ನ್ನುಂಟುಮಾಡೆಂದು ಬೇಡುತ್ತಿರುವ ದೇವತೆಗಳ ಅಮೃತೋಪಮಾನ ವಾ
ಕ್ಯವಂ ಕೇಳಿ ಆ ಮಹಾದೇವನು ದೇವ ಋಷಿಗಳಂ ಕುರಿತು ಮತ್ತಂತೆಂದ
ನು॥೨೬॥ ಓ ದೇವತೆಗಳಿರಾ, ಯೋಗಿಗಳಿಗೂ, ಮನುಷ್ಯರಿಗೂ ಮುಕ್ತಿ

ಪ್ರಶಮನಂಮಹಾಪಾತಕನಾಶನಂ। ವಸತಾಂಕರ್ಮಕರ್ತ್ರೂಣಾಂಕರ್ಮ
ಸಿದ್ಧಿಪ್ರದಂನೃಣಾಂ ॥೧೯॥ ಕಾಶೀವಾಸಫಲಂಯತ್ರಗಯಾಶ್ರಾದ್ಧಫಲಂಲ
ಭೇತ್ । ಕೌಂಡಿನ್ಯಾಪೂರ್ವದಿಗ್ಭಾಗೆಕ್ಷೇತ್ರಂಸಂಗಮಸಂಜ್ಞಿಕಂ ।೨೦॥ ಕ್ಷೇ
ತ್ರಾಣಾಮುತ್ತಮಂಕ್ಷೇತ್ರಂ ಸರ್ವವೃಕ್ಷಸಮನ್ವಿತಂ । ಸದಾಫಲಂಸದಾಪು
ಷ್ಪಂಸರ್ವಪಕ್ಷಿಸಮಾಶ್ರಯಂ ।೨೧ । ತಪಸ್ತತ್ರತುಕರ್ತವ್ಯಂನಿಯತಾತ್ಮ
ಭಿರಂಜಸಾ। ಇತಿಹಾಸಂಪ್ರವಕ್ಷ್ಯಾಮಿಮುನಯಃಶ್ರೂಣುತಾದರಾತ್॥೨೨॥
ಪುರಾಕೇಶ್ಯಸುರವಧೇತದ್ದೇಹಾದ್ವಿಷಮುದ್ಬಭೌ। ಅದಹತ್ಪೃಥಿವೀಂಸರ್ವಾಂ
ಸುರಾವಕ್ತ್ರಂಸಮಾಗತಾಃ ।೨೩ । ತದಹಂಪ್ರಾರ್ಥಿತೋದೇವೈರ್ವಿಷಂಹಿತ್ವಾ
ಚಿರಂಸ್ಥಿತಃ ।೨೪॥ ಧರಾಸಮಾಗತ್ಯೇಹಮತ್ಸಮೀಪಂಸ್ವರೂಪಿಣೀಮಾಧವಧ
ರ್ಮಪತ್ನೀ । ಅಪೃಚ್ಛದನ್ವೀಕ್ಷ್ಯಹಿಮಾಂಪ್ರಸನ್ನಮಿಹತ್ವಯಾಸಂಹೃತಮಿ
ತ್ಯಹೋಗರಂ॥೨೫॥ ಏತತ್ಸಮುದ್ಭೂತಗರಂಜಗದ್ದಹದ್ರಮೇಶವಾಗೀಶಮು
ಖೈಸ್ಸುರೈರಪಿ। ಸುದುಸ್ಸಹಂಭೂತಪತೇಜಗದ್ಗುರೋತಥಾಪಿಮಾಂದಹ್ಯತಿಚಾ

ಯಂಕೇಳದಮಾತ್ರದಿಂದಲೇ ಕೊಡುವಂಥಾ ಸರ್ವ ಪಾಪವಂ ಪರಿಹರಿಸು
ವಂಥಾ, ಮನೋವಾಕ್ಕಾಯಸಂಭೂತ ದೋಷಗಳಂ ಪರಿಹರಿಸುವ ತಪ ಸ್ಥ
ಳವಂ ಹೇಳುತ್ತೇನೆ ಆ ಕ್ಷೇತ್ರವು ಮಹಾ ಪಾತಕಗಳಂ ನಾಶನವಂಮಾಡು
ವಂಥಾದ್ದು. ಗುಪ್ತವಾಗಿರುವ ಮತ್ತು ಪ್ರಕಟಿತವಾಗಿರುವ ಪಾಪಗಳನ್ನೆಲ್ಲಾ
ಶಾಂತಿಯಂ ಮಾಡುವಂಥಾದ್ದು. ಅಲ್ಲಿ ಇರುವ ಸತ್ಕರ್ಮ ಮಾಡುವವರಿಗೆ
ಲ್ಲ ಕರ್ಮ ಸಿದ್ಧಿಯನ್ನುಂಟುಮಾಡುವದು. ಆ ಸ್ಥಳದಲ್ಲಿ ಕಾಶೀವಾಸ ಫ
ಲವೂ, ಗಯಾಶ್ರಾದ್ಧ ಫಲವೂ ಸಹಾ ಲಭಿಸುವದು. ಕೌಂಡಿನೀ ನದಿಯ ಪೂ
ರ್ವ ಭಾಗದಲ್ಲಿ ಕ್ಷೇತ್ರಗಳೊಳಗೆ ಉತ್ತಮವಾದ್ದಾಗಿಯೂ, ಸರ್ವ ವೃಕ್ಷಗ
ಳಿಂದ ಕೂಡಿರುವದಾಗಿ ಸದಾ ಫಲ ಪುಷ್ಪಗಳುಳ್ಳದ್ದಾಗಿಯೂ ಇರುವ ಸಂ
ಗಮ ಕ್ಷೇತ್ರವು ಇಧೆ ।೨೧ । ಅಲ್ಲಿ ಮನೋನಿಗ್ರಹವಂ ಮಾಡಿದವರು ತಪ
ಸ್ಸು ಮಾಡಬೇಕು. ಓ ಋಷಿಗಳಿರಾ, ಒಂದು ಇತಿ ಹಾಸವಂ ಹೇಳುತ್ತೇ
ನೆ. ಆದರಣೆಯಿಂದ ಕೇಳಿರಿ ।೨೨॥ ಪೂರ್ವದಲ್ಲಿ ಕೇಶಿನಾಮಕ ದೈತ್ಯನ
ಸಂಹಾರವಾಗಲು ಅವನ ಶರೀರದಿಂದ ವಿಷವು ಹುಟ್ಟಿ ಭೂಮಿಯನ್ನೆಲ್ಲಾ
ದಹಿಸಲು, ಆ ವೃತ್ತಾಂತವಂ ಹೇಳುವದಕ್ಕೆ ಬಂದ ದೇವತೆಗಳಿಂದ ।೨೩।
ಪ್ರಾರ್ಥಿಸಲ್ಪಟ್ಟ ನಾನು ವಿಷವಂ ಬಿಟ್ಟು ಬಹುಕಾಲವಿದ್ದೆನು. ಆ ಸಮ
ಯದಲ್ಲಿ ಲಕ್ಷ್ಮೀಪತಿಗೆ ಧರ್ಮ ಪತ್ನಿಯಾದ ಭೂದೇವಿಯು, ಸ್ವರೂಪಧಾರಿ

ಗ್ನಿಸಂಭವಂ ॥ ೩೬ ॥ ಜಗದ್ಧಿತಾರ್ಥಾಯಧೃತಂಪುರಾವಿಷಂತ್ರಿಲೋಕಸಂಭೂತಭಯಾಪಹಾಯುವೈ । ಮದರ್ಥಮೇವಾದ್ಯಹೃತಂದಯಾಳುನಾತ್ವಯಾನಚೇಜ್ಜೀವನಮೇವದುಸ್ಸಹಂ ॥ ೩೭ ॥ ತತೋಭವತ್ಕೇಶಿವಧಾದುಪಾಪತೆವಿಷಂಹಿಲಾಪ್ತಂತಾತ್ರದೀಯಮೃತ್ತಿಕಾ । ನರೊತ್ತಮೈಸ್ಸರ್ಪಮುಖಾದಿದಂಶಿತೈಃಪಿಶಾಚಬಾಧಾದಿಯುತೈರ್ವಿಷಾಶನೈಃ ॥ ೩೮ ॥ ಯದಾತದಾಪ್ರಾಪ್ತಭಯೈಸ್ತುಧಾರ್ಯತೆಸದಾಸ್ತುತೆಷಾಂಸಕಲಾರ್ತಿನಾಶನಂ । ಸುತಾರ್ಥಿಭೀರೋಗವಿಮೋಕ್ಷಕಾಮಿಭಿಃಪ್ರಭಾತಕಾಲೆಯುದಿಸೇವ್ಯತೆಜಲೈಃ ॥ ೩೯ ॥ ಮದೀಯಮೃದ್ದಿವ್ಯಮಹೌಷಧಂ ನೃಣಾಂಭವೇತ್ತದಾಸರ್ವಫಲಪ್ರದಂಯಥಾ ॥ ೪೦ ॥ ಅಸ್ಮಿನ್‌ಕ್ಷೇತ್ರೆವಿಶೇಷೇಣತಪಃಕುರ್ವಂತಿಯೇನರಾಃ । ತೇಷಾಂತುಸದ್ಯಏವಾಸ್ತು

ಣಿಯಾಗಿ ನನ್ನ ಸಮೀಪವಂ ಕುರಿತು ಬಂದು ಪ್ರಸನ್ನನಾದ ನನ್ನನ್ನು ನೋಡಿ ಹೇಳಿದಳು. ಕೇಶಿಯೆಂಬ ಅಸುರನ್ನ ನೀನು ಸಂಹಾರವಂ ಮಾಡಿದೆ ॥ ೩೫ ॥ ಆ ಅಸುರನ ದೇಹದಿಂದಾ ಹುಟ್ಟಿದ ವಿಷವು, ವಿಷ್ಣು ಬ್ರಹ್ಮಾದಿ ಸುರರಿಂದಲು, ಸಹಿಸಕೂಡದ್ದಾಗಿ ಲೋಕವನ್ನೆಲ್ಲಾ ಸುಡುತ್ತದೆ. ಹಾಗಾದರು ಓ ಜಗದ್ಗುರುವಾದ ಭೂತ ಪತಿಯೆ, ನನ್ನನ್ನು ವಿಶೇಷವಾಗಿ ಸುಡುತ್ತಿದೆ. ಪೂರ್ವದೋಳ್ ಸಮುದ್ರದಲ್ಲಿ ಹುಟ್ಟಿದ ವಿಷವನ್ನ ॥೩೬॥ ಲೋಕ ಹಿತಾರ್ಥವಾಗಿಯು, ಮೂರು ಲೋಕಗಳಲ್ಲಿ ಹುಟ್ಟಿದ ಭಯವಂ ಪರಿಹರಿಸುವದಕ್ಕಾಗಿಯು, ಕಂಠದಲ್ಲಿ ಧರಿಸಿಕೊಂಡೆ. ಈಗ ನನ್ನ ನಿಮಿತ್ತ್ಯವಾಗಿ ಈ ವಿಷವಂ ತೆಗದುಕೊಳ್ಳದಿದ್ದರೆ ನನ್ನ ಜೀವನವೆ ದುಸ್ಸಹವಾಗಿರುವದು. ॥೩೭॥ ಇಂತೆಂದು ಪ್ರಾರ್ಥಿಸಲು, ಆಅಸುರದೇಹೋದ್ಭವವಾದ ವಿಷವಂಪರಿಗ್ರಹಿಸಿದನು. ಅನಂತರದಲ್ಲಿ ಮತ್ತು ಆಭೂಮಿಯುಹರನನ್ನು ಕುರಿತುಬೇಡಿದ್ದೇನೆಂದರೆ, ಈದೈತ್ಯದೇಹಜನ್ಯವಾದವಿಷವುಯಾವ ಸ್ಥಳದಲ್ಲಿಲೀನವಾಯಿತೋ ಆಸ್ಥಳದಲ್ಲಿರುವಮೃತ್ತಿಕೆಯುಸರ್ಪಮೊದಲಾದವಿಷ ಜಂತುಗಳಿಂದಕಚ್ಚಲ್ಪಟ್ಟವರು, ಪಿಶಾಚಾದಿ ಬಾಧೆಯಂ ಹೊಂದಿದವರು ಧರಿಸಿದರೆ, ಅವರುಗಳ ಸಮಸ್ತ ಬಾಧೆಗಳನ್ನು' ಸಮಸ್ತ ಭಯಂಗಳನ್ನು ಹೊಂದದೇ ಇರುವವರು, ಪುತ್ರಾಪೇಕ್ಷೆಯುಳ್ಳವರು, ಆರೋಗ್ಯವಂ ಅಪೇಕ್ಷಿಸಿದವರು, ಪ್ರಾತಃಕಾಲದಲ್ಲಿ ಶುದ್ಧೋದಕಗಳಿಂದ ನನ್ನ ಸಮ್ಮಂಧವಾದ ಮೃತ್ತಿಕೆಯೆಂಬ ಮಹಾ ದಿವ್ಯೌಷಧವಂ ಸೇವಿಸಿದವರಿಗೆ ಈಮೃತ್ತಿಕೆಯು ಸರ್ವ ಫಲಂಗಳಂ ಕೊಡುವಂಥಾದ್ದಾಗಲೀ ॥೪೦॥ ಯಾವ ಮನುಷ್ಯರು ಈ ಕ್ಷೇತ್ರದಲ್ಲಿ ವಿಶೇಷವಾಗಿ ತಪಸ್ಸು ಮಾಡುತ್ತಾರೋ ಅವರಿಗೆ ಆ ಕ್ಷಣದಲ್ಲಿಯೇ ತಪಃಫಲವು ಉಂಟಾ

ಪಾರ್ವತೀಶತಪಃಫಲಂ ॥೪೧॥ ಯಏತನ್ಮೃತ್ತಿಕಾಸೇವಾಂಕುರ್ವಂತಿಜನ
ರೋತ್ತಮಾಃ। ತೇಷಾಂತುಸತತಂಭುಕ್ತಿರ್ಮುಕ್ತಿರಸ್ತುಜಗತ್ಪ್ರಭೋ॥೪೨॥
ತ್ವತ್ಪಾದಾಂಬುಜಸಂಭೂತಜಲಮಿಶ್ರಾಂಚಮೃತ್ತಿಕಾಂ । ಪಿಬಂತಿಯೇನರ
ಶ್ರೇಷ್ಠಾಸ್ತೇಯಾಂತುಪರಮಾಂಗತಿಂ ॥ ೪೩ ॥ ಲಲಾಟೇಧಾರ್ಯತೇಯೇನತೇನಪ್ರಾ
ಪ್ತಂಜಗತ್ರಯಂ। ಅದ್ಯಪ್ರಭೃತಿಲೋಕೇಸ್ಮಿನ್ ಖ್ಯಾತಮಸ್ತುಮಹೌಷಧಂ॥೪೪॥
ಇತ್ಯೇವಂಪ್ರಾರ್ಥ್ಯಮಾಂದೇವೀತೂಷ್ಣೀಂಸ್ಥಿತವತೀಮಹೀ। ತದಾದತ್ತಂಮ
ಯಾತಸ್ಯೈಭೂದೇವ್ಯೈವರಮುತ್ತಮಂ ॥೪೫॥ ತಸ್ಮಿನ್ ಕ್ಷೇತ್ರೇತಪಸ್ಸಿದ್ಧಿಮ
ವಾಪ್ಯಥಮಹರ್ಷಯಃ । ಅಸ್ಮಿನ್ನರ್ಥೇನಸಂದೇಹ ಸ್ಸತ್ಯಂಸತ್ಯಂವದಾಮ್ಯಹಂ
॥೪೬॥ ತಚ್ಛೃತ್ವಾವಚನಂತಸ್ಯದಯಾಳೋಶ್ಶೂಲಪಾಣಿನಃ। ಸಂತೋಷೋತ್ಫು
ಲ್ಲನಯನಾಶಿಂವನತ್ವಾತ್ರಪಸ್ಥಿಳಂ॥೪೭॥ ಗತ್ವಾಸುಸಂಭ್ರಮಂತಸ್ಮುಸ್ತೇಸರ್ವೆ
ಸಂಶಿತವ್ರತಾಃ । ಕಪಿಲಾಕೌಂಡಿನೀಸಂಗೇಸ್ನಾತ್ವಾತೆವಿಧಿಪೂರ್ವಕಂ॥೪೮॥
ಸಂಗಮಕ್ಷೇತ್ರಮಾಗತ್ಯಧ್ಯಾತ್ವಾವೈವಿಷಹಾರಿಣಂ । ತತ್ರತ್ಯಮೃತ್ತಿಕಾಂಧೃ
ತ್ವಾಪೀತ್ವಾಚಜಲಪೂರ್ವಕಂ ॥೪೯ ॥ ತಪಃಕುರ್ವಂತಿತೆಸರ್ವೆಜಿತಕ್ರೋಧಾ

ಗಲಿ ॥೪೧॥ ಯಾವ ಮನುಷ್ಯ ಶ್ರೇಷ್ಠರು ಈ ಮೃತ್ತಿಕೆಯಂ ಸೇವಿಸುತ್ತಾ
ರೋ ಅವರಿಗೆ ಭುಕ್ತಿಯು, ಮುಕ್ತಿಯು, ಸಹ ಫುಂಟಾಗಲಿ, ಓ ಜಗತ್ಪ್ರ
ಭುವಾದ ಹರನೇ, ನಿನ್ನ ಪಾದ ಕಮಲದಿಂದ ಹುಟ್ಟಿದಂಥಾ ಉದಕದಲ್ಲಿ
ಮಿಶ್ರವಂ ಮಾಡಿದ ಮೃತ್ತಿಕೆಯನ್ನು ಪಾನವಂಮಾಡಿದವರು ಪರಮಗತಿಯಂ
ಹೊಂದಲಿ, ಹಣೆಯಲ್ಲಿ ಮೃತ್ತಿಕೆಯಂ ಧರಿಸಿದವರಿಗೆ ಲೋಕತ್ರಯವು ವಶ್ಯ
ವಾಗಲಿ, ಇದು ಮೊದಲುಗೊಂಡು ಈ ಲೋಕದಲ್ಲಿ ಇದು ಮಹೌಷಧವೆಂ
ದು ಪ್ರಸಿದ್ಧವಾಗಲಿ ॥೪೪॥ ಈ ಪ್ರಕಾರ ಭೂದೇವಿಯು ನನ್ನನ್ನು ಪ್ರಾ
ರ್ಥಿಸಿ ಸುಮ್ಮನೆ ಆದಳು. ಆಸಮಯದಲ್ಲಿ ಭೂದೇವಿಗೆ ಉತ್ತಮವಾದ ವ
ರವಂ ಕೊಟ್ಟನು ॥೪೫॥ ಆ ಕ್ಷೇತ್ರದಲ್ಲಿ ಓ ಮಹಾ ಋಷಿಗಳಿರಾ, ತಪಃಸಿ
ದ್ಧಿಯಂ ಹೊಂದಿರಿ. ಈ ವಿಷಯವಾಗಿ ಸಂದೇಹವಿಲ್ಲ. ನಾನು ಅತ್ಯಂತ ಸ
ತ್ಯವಾಗಿ ಹೇಳುತ್ತೇನೆ ॥ ೪೬ ॥ ದಯಾಶಾಲಿಯಾದ ಈಶ್ವರನ ಆ ವಚನವಂ
ಕೇಳಿ ಸಂತೋಷದಿಂದ ವಿಕಾಸವಂ ಹೊಂದಿದ ನೇತ್ರಗಳುಳ್ಳದ್ದಾಗಿ ಈಶ್ವ
ರನಂ ಕುರಿತು ನಮಸ್ಕಾರವಂ ಮಾಡಿ ॥ ೪೭ ॥ ಆಋಷಿಗಳೆಲ್ಲರು ಸಂಭ್ರಮ
ದಿಂದೊಡಗೂಡಿ ನಿಯಮ ವ್ರತರಾಗಿ ಕಪಿಲಾ ಕೌಂಡಿನೀಸಂಗಮದಲ್ಲಿ ವಿಧಿ
ಪೂರ್ವಕವಾಗಿ ಸ್ನಾನವಂ ಮಾಡಿ ॥೪೮॥ ವಿಷಹರನಾದ ಹರನಂ ಧ್ಯಾನವಂ
ಮಾಡಿ ಬಂದು ಅಲ್ಲಿದ್ದ ಮೃತ್ತಿಕೆಯಂ ಧರಿಸಿ ಜಲಪೂರ್ವಕವಾಗಿ ಪಾನವಂ

ಜಿತೇಂದ್ರಿಯಾಃ। ತಪೋಭಿಸ್ಸುಪ್ರಸನ್ನೋಭೂದ್ವಿಷಹಾರೀಹ್ಯುಮಾಪತಿಃ ॥೩೦॥ ತಂದೃಷ್ಟ್ವಾಸಹಸೋತ್ಥಾಯಪ್ರಣಿಪತ್ಯಸ್ತುವಂತಿತೇ । ಪೂಜಯಂತಿಮಹಾಭಕ್ತ್ಯಾಹ್ಯರ್ಘ್ಯಪಾದ್ಯಾದಿಭಿಸ್ಸಹ ॥೩೧॥ ತಾನುವಾಚಶಿವಃಪ್ರೀತ್ಯಾಮಧುರಂವಚನಂತದಾ । ಪ್ರೀತೋಸ್ಮಿಚಮಹಾಭಾಗಾಭವತಾಂಮನಸೇಪ್ಸಿತಂ॥೩೨॥ ವರಂವೃಣುತಭದ್ರಂವಸ್ತೋತ್ರೇಣತಪಸಾಪುನಃ । ತೇತಸ್ಯವಚನಂಶ್ರುತ್ವಾಶಿವಂಪ್ರತ್ಯವದಂತ್ಸುರಾಃ॥೩೩॥ ದೇವದೇವಪ್ರಸನ್ನೋಸಿಗೌರೀಪ್ರಿಯಸುರೋತ್ತಮ । ಅತ್ರಾಪಿಚಸದಾಸ್ಥೇಯಂ ಪ್ರಾಣಿನಾಂಮುಕ್ತಿದೋಭವ ॥೩೪॥ ಪಶ್ಯಂತಿಯೇತ್ವಾಂಭಕ್ತ್ಯಾವೈತೇಷಾಂಜ್ಞಾನೋದಯೋಭವೇತ್ । ತಥಾಸ್ತ್ವಿತಿಚತಾನಾಹಸದಾತ್ರನಿವಸಾಮ್ಯಹಂ॥೩೫॥ಸಂಗಮೇಶಇತಿಖ್ಯಾತಾಭವಿಷ್ಯತಿಸುರೋತ್ತಮಾಃ । ತದಾಪ್ರಭೃತಿಲೋಕೇಷುಸಂಗಮೇಶಇತಿಪ್ರಥಾ ॥೩೬॥ ಬ್ರಹ್ಮಾದಯೋಪಿತೇಸರ್ವೇಸ್ವಸ್ವನಾಮಾಂಕಿತಾನಿಚ । ತೀರ್ಥಾನಿವಧಿವತ್ಕೃತ್ವಾ

ವಾಪಿ ॥೨೯॥ ಅವರೆಲ್ಲರು ಜಿತಕ್ರೋಧರು, ಜಿತೇಂದ್ರಿಯರು ಆಗಿ ತಪವಂ ಮಾಡುತ್ತಾರೆ. ಆ ತಪಸ್ಸುಗಳಿಂದ ಗಜಾಸುರನಿಗೆ ಶತ್ರುವಾದ ಪಾರ್ವತೀಪತಿ ಅನುಗ್ರಹಯುಕ್ತನಾಗುವ ಹಾಗೆ ಮಾಡಿ ನಮಸ್ಕರಿಸಿ ಶೀಘ್ರದಿಂದೆದ್ದು ದರ್ಶನವಂ ಮಾಡಿ, ಸ್ತೋತ್ರವಂ ಮಾಡುತ್ತಾ ಮಹಾ ಭಕ್ತಿಯಿಂದ ಅರ್ಘ್ಯಪಾದ್ಯಾದಿಗಳೊಡನೆ ಪೂಜೆಯಂ ಮಾಡಿದರು ॥೩೦॥ ಪರಮೇಶ್ವರನು ವಿಶ್ವಾಸದಿಂದ ಆ ಋಷಿಗಳಂ ಕುರಿತು ಮಧುರ ವಚನವಂ ನುಡಿದನು. ಓ ಪುಣ್ಯಾತ್ಮರಾದ ಋಷಿಗಳಿರಾ, ನಾನು ಸಂತುಷ್ಟನಾದೆನು. ನಿಮ್ಮಗಳ ಇಷ್ಟಾರ್ಥವನ್ನು ನಿಮ್ಮ ಮನಸ್ಸುಪ್ರಕಾರ ॥೩೨॥ ವರವಂ ಬೇಡಿರಿ. ಸ್ತೋತ್ರದಿಂದಲೂ, ತಪಸ್ಸಿನಿಂದಲೂ ಶುಭ ಉಂಟಾಗಲೆಂದು ಹೇಳಿದ ಶ್ರೀ ಮಹಾದೇವನ ವಚನವಂ ಕೇಳಿ ಆ ದೇವ ಋಷಿಗಳು ಈಶ್ವರನಂ ಕುರಿತು ಪ್ರತ್ಯುತ್ತರವಂ ಹೇಳಿದರು ॥೩೩॥ ಓ ದೇವೋತ್ತಮನಾದ ಗೌರೀಪತಿಯೇ, ನೀನು ಪ್ರಸನ್ನನಾದರೆ ಇಲ್ಲಿಯೇ ಇದ್ದುಕೊಂಡು ಪ್ರಾಣಿಗಳಿಗೆ ಮುಕ್ತಿಯಂ ಕೊಡುವಂಥಾವನಾಗು ॥೩೪॥ ನಿನ್ನ ಭಕ್ತಿಯಿಂದ ಯಾರು ನೋಡುತ್ತಾರೋ ಅವರಿಗೆ ಜ್ಞಾನವಂ ಕೊಡೆಂದು ಪ್ರಾರ್ಥಿಸಲು, ಮಹಾದೇವನು ಹಾಗೆ ಆಗಲೆಂದು ನಾನು ಸದಾ ಇಲ್ಲಿಯೇ ಇರುತ್ತೇನೆ॥೩೫॥ ಸಂಗಮೇಶ್ವರನೆಂದು ಪ್ರಸಿದ್ಧಿಯಾಗಲಿ, ಇಂತೆನಲು ಅದು ಮೊದಲುಗೊಂಡು ಲೋಕದಲ್ಲಿ ಸಂಗಮೇಶ್ವರನೆಂದು ಪ್ರಸಿದ್ಧವಾಯಿತು. ಅಲ್ಲಿ ಬ್ರಹ್ಮಾದಿದೇವತೆಗಳೆಲ್ಲರೂ ತಮ್ಮ ತಮ್ಮ ನಾಮಾಂಕಿತಗಳಾದ ತೀರ್ಥಗಳಂ ನಿರ್ಮಿಸಿ ಅವುಗಳ

ತೇಷುಸ್ನಾತ್ವಾಯಥಾವಿಧಿ ।೫೭। ಏಷುತೀರ್ಥೇಷುಯೇಸ್ನಾಂತಿತೇಯಾಂತು
ಪರಮಾಂಗತಿಂ ।ಇತಿದತ್ವಾವರಂತೇಷಾಂಸ್ವಂಸ್ವಂಧಾಮಪ್ರಯಾಂತಿತೇ।೫೮।
ಶ್ರೀಸೂತಃ । ಸಂಗಮಕ್ಷೇತ್ರಮಾಹಾತ್ಮ್ಯಂಯೇಶೃಣ್ವಂತಿಪಠಂತಿಚ । ತೇಷಾಂ
ತುಭುಕ್ತಿಮುಕ್ತಿಸ್ಸ್ಯಾತ್ಕರಸ್ಥಾನಾತ್ರಸಂಶಯಃ।

ಇತಿಶ್ರೀ ಸ್ಕಾಂದಪುರಾಣೇ ಗರಳಪುರೀಮಹಾತ್ಮ್ಯೇ ಸಂಗಮ
ಕ್ಷೇತ್ರಮಹಿಮಾವರ್ಣನಾಯಾಂ ತತ್ರತ್ಯಮೃತ್ತಿಕಾಪ್ರ
ಶಂಸಾನಾಮ ಷಷ್ಠೋಧ್ಯಾಯಃ.

ಋಷಯಃ । ಪುನಶ್ಚನೀಲಕಂಠಸ್ಯಕ್ಷೇತ್ರಮಹಾತ್ಮ್ಯಮುತ್ತಮಂ । ಸ
ವ್ಯಗ್ರ್ವದಮುನಿಶ್ರೇಷ್ಠ ತೀರ್ಥಮಾಹಾತ್ಮ್ಯಮದ್ಯನಃ । ೧ । ಶ್ರೀಸೂತಃ।
ವಕ್ಷ್ಯಾಮಿಚಮಹಾಭಾಗಾಭವದುಕ್ತಂತುತತ್ವತಃ । ಶೃಣ್ವತಾಂಸರ್ವಪಾಪ
ಘ್ನಂಸ್ಮರತಾಂಸರ್ವಸಿದ್ಧಿದಂ ।೨। ಪುರಾವೈನೀಲಕಂಠಸ್ತುಜಲಕ್ರೀಡಾರ್ಥ
ಮಾದರಾತ್ । ವೃಷಭಂತುಸಮಾರುಹ್ಯಪಾರ್ವತೀಸಹಿತೋಯಯೌ ।೩।

ಲ್ಲಿ ಯಥಾವಿಧಿಯಾಗಿ ಸ್ನಾನವಂ ಮಾಡಿ ।೫೭। ಈ ತೀರ್ಥಗಳಲ್ಲಿ ಸ್ನಾನ
ವಂ ಮಾಡಿದವರು ಪರಮಗತಿಯಂ ಹೊಂದಲೆಂದು ಆ ತೀರ್ಥಗಳಿಗೆ ವರವಂ
ಕೊಟ್ಟು, ಆ ದೇವ ಋಷಿಗಳು ತಮ್ಮ ತಮ್ಮ ಸ್ಥಾನವಂ ಕುರಿತು ಹೋ
ದರು. ಸೂತ ಮುನಿಯು ಹೇಳುತ್ತಾನೆ ।೫೮। ಈ ಸಂಗಮ ಕ್ಷೇತ್ರ ಮ
ಹಾತ್ಮ್ಯವನ್ನ ಯಾರು ಹೇಳುತ್ತಾರೋ, ಯಾರು ಕೇಳುತ್ತಾರೋ, ಅವರಿ
ಗೆ ಭುಕ್ತಿಯು ಮುಕ್ತಿಯು ಹಸ್ತದಲ್ಲಿರುವಂಥಾದ್ದಾಗುವದು. ಈ ವಿಷಯ
ದಲ್ಲಿ ಸಂಶಯವಿಲ್ಲ. ।*। ।*। ಇಲ್ಲಿಗೆ ಸ್ಕಾಂದ ಪುರಾಣದೊಳು ಗರಳಪು
ರೀ ಮಹಾತ್ಮೆಯಲ್ಲಿ ಸಂಗಮಕ್ಷೇತ್ರ ಮೃತ್ತಿಕಾಮಹಿಮ ಪ್ರಶಂಸನವೆಂಬ
ಆರನೇ ಅಧ್ಯಾಯವು ಸಂಪೂರ್ಣವು.

ಋಷಿಗಳು ಕೇಳುತ್ತಾರೆ, ಉತ್ತಮವಾದ ಶ್ರೀಕಂಠ ಕ್ಷೇತ್ರದ ಮಹಾ
ತ್ಮ್ಯವನ್ನು ತೀರ್ಥ ಮಹಾತ್ಮ್ಯವನ್ನು ನಮ್ಮಗಳಿಗೀಗ ಮತ್ತು ಚನ್ನಾಗಿ
ಹೇಳಬೇಕೆನಲು, ಸೂತಮುನಿಯು ಹೇಳುತ್ತಾನೆ ।೧। ಓ ಪುಣ್ಯಾತ್ಮರಾ
ದ ಋಷಿಗಳಿರಾ, ನಿಮ್ಮಿಂದ ಕೇಳಲ್ಪಟ್ಟ ಪ್ರಶ್ನೆಯಂ ಕುರಿತು ಯಥಾರ್ಥ
ವಾಗಿ ಹೇಳುವೆನು. ಕೇಳಿದವರಿಗೆ ಪಾಪಗಳಂ ಪರಿಹರಿಸುವಂಥಾದ್ದು, ಸ್ಮ
ರಿಸಿದವರಿಗೆ ಸರ್ವಸಿದ್ಧಿಗಳಂ ಕೊಡುವಂಥಾದ್ದು । ೨ । ಪೂರ್ವದಲ್ಲಿ ಪರ
ಮೇಶ್ವರನು ಜಲಕ್ರೀಡಾರ್ಥವಾಗಿ ಆದರಣೆಯಿಂದ ಪಾರ್ವತೀ ಸಮೇತ
ನಾಗಿ ವೃಷಭ ವಾಹನದಲ್ಲಿ ಕುಳಿತುಹೊರಟನು ।೩। ಅಮೃತೋದ್ಭವವಾ

ಶುಭೋದ್ಭವನದೀತೀರೇಮಹೋದ್ಯಾನಂಸುಶೋಭನಂ । ಪನಸಾರ್ಜುನಪುನ್ನಾ
ಗನಿಂಬಚೂತಸುರದ್ರುಮೈಃ ॥ ೪ ॥ ಕಪಿತ್ಥಾಶ್ವತ್ಥ ಕುಟಜೈರ್ದಾಡಿಮೀಬಿಲ್ವ
ಚಂಪಕೈಃ । ಪಾಟಲೀನಾರಿಕೇಳಾಮ್ಲ ವಟಾಮಲಕಕೇತಕೈಃ ॥೫॥ ಮಲ್ಲಿಕಾ
ಮಾಲತೀಜಾಜೀಕರವೀರೈಸ್ಸುಗಂಧಿಭಿಃ। ಅಶೋಕೈರ್ನಕ್ತಮಾಲೈಶ್ಚನಂದ್ಯಾ
ವರ್ತೈಶ್ಚಕುಂದಕೈಃ ॥೬॥ ನಾನಾಪುಷ್ಪಲತಾಭಿಶ್ಚನಾನಾವೃಕ್ಷೈಶ್ಚಶೋಭಿ
ತಂ । ರಂಭಾಪತ್ರಪತಾಕಾಭಿರ್ವಂಶಕಾಂಡರಥೈರಪಿ ॥೭॥ ಸದಾಫಲಂಸದಾ
ಪುಷ್ಪ ಮುತ್ಸವೀವಪ್ರಕಾಶತೇ । ತತ್ರಸಿದ್ಧಗಣಾಯಕ್ಷ ಗಂಧರ್ವೋರಗಕಿನ್ನ
ರಾಃ ॥೮॥ವೀಣಾಮೃದಂಗನಾದೈಶ್ಚಲತಾಗೇಹೇಷುವಾಸಿನಃ। ತತ್ರಗತ್ವಾತು
ಗೌರೀಶಃಪಾರ್ವತ್ಯಾಸಹಹರ್ಷಿತಃ ॥೯॥ ವೃಷಭಾದವರುಹ್ಯಾಥಜಲಕ್ರೀಡಾ
ರ್ಥಮಾದರಾತ್ । ಪ್ರವಿಶ್ಯಕಪಿಲಾಯಾಂತುಜಲಕ್ರೀಡಾಂಕರೋತಿಸಃ ॥೧೦॥
ವಿಚಿತ್ರಾಭಿಶ್ಚಲೀಲಾಭಿರ್ವಿಚಿತ್ರೈರ್ಜಲತಾಡನೈಃ । ತಸ್ಮಿಂಶ್ಚಸಮಯೇಶಂ
ಭೋಶ್ಶಿರೋಮಣಿರಧೋಪತತ್ ॥೧೧॥ ತಂದೃಷ್ಟ್ವಾಪಾರ್ವತೀನಾಥಃಗೌರೀಂ

ದ ನದೀ ತೀರದಲ್ಲಿ ಮಂಗಳಕರವಾದ ಉದ್ಯಾನವನವು, ಹಲಸು, ಮತ್ತಿ,
ಪುನ್ನಾಗ, ಬೇವು, ಮಾವು, ದೇವದಾರು ॥೪॥ ಬ್ಯಾಲ, ಅಶ್ವತ್ಥ, ಗೋರಂ
ಟೆ, ದಾಳಿಂಬ, ಬಿಲ್ವ, ಸಂಪಿಗೆ, ಪಾದರಿ, ತೆಂಗು, ಹುಣಸೆ, ಆಲ, ನೆಲ್ಲಿ,
ಕೇದಿಗೆ ॥೫॥ ಈ ವೃಕ್ಷಗಳಿಂದಲೂ, ಮಲ್ಲಿಗೆ ಮಾಲತೀ, ಜಾಜಿ, ಕಣಿಗಲು,
ಹೊಂಗೆ, ನಂದಿವರ್ಧನಕುಂದ ॥೬॥ ಇತ್ಯಾದಿ ಪುಷ್ಪಲತೆಗಳಿಂದಲೂ, ವೃ
ಕ್ಷಗಳಿಂದಲೂ, ಪ್ರಕಾಶಿಸುತ್ತಿರುವದು. ಬಾಳೆ ಎಲೆಗಳೆಂಬ ಪತಾಕಗಳಿಂದ
ಲೂ, ಬಿದುರುಗಳೆಂಬ ಧ್ವಜಗಳಿಂದಲೂ, ಮನೋಹರವಾದದ್ದು ॥೭॥ ಮ
ತ್ತು ಆ ವನವು ಸದಾ ಫಲಗಳುಳ್ಳದ್ದು. ಸದಾ ಪುಷ್ಪಗಳುಳ್ಳದ್ದಾಗಿಯೂ,
ಉತ್ಸವಗಳುಳ್ಳದ್ದೋಪಾದಿಯಲ್ಲಿ ಪ್ರಕಾಶಿಸುತ್ತಿರುವದು. ಆ ವನದಲ್ಲಿ ಸಿದ್ಧ
ಗಣಂಗಳು, ಯಕ್ಷರು, ಗಂಧರ್ವರು, ಕಿನ್ನರರು ॥೮॥ ಲತಾಗೃಹಗಳಲ್ಲಿರು
ತ್ತಿದ್ದವರಾಗಿ ವೀಣಾಮೃದಂಗ ನಾದಗಳಿಂದ, ಕಾಲಯಾಪನವಂ ಮಾಡು
ತ್ತಿರುವರು. ಅಂಥಾ ಸ್ಥಳಕ್ಕೆ ಪರಮೇಶ್ವರನು, ಪಾರ್ವತಿಯೊಡನೆ ಹೋ
ಗಿ. ಸಂತೋಷಿಸಿದವನಾಗಿ, ವೃಷಭವಂ ಇಳಿದು ಜಲಕ್ರೀಡಾರ್ಥವಾಗಿ ಆದ
ರಣೆಯಿಂದ ಕಪಿಲಾ ನದಿಯಲ್ಲಿ ಪ್ರವೇಶಿಸಿ ಜಲಕ್ರೀಡೆಯಂ ಮಾಡುತ್ತಿದ್ದ
ನು. ವಿಚಿತ್ರಗಳಾದ ಲೀಲೆಗಳಿಂದಲೂ, ಜಲಪ್ರಹಾರಗಳಿಂದಲೂ, ಕ್ರೀಡಿಸು
ತ್ತಿರುವ ಸಮಯದಲ್ಲಿ ಶ್ರೀ ಪರಮೇಶ್ವರನ ಸಿರೋಮಾಣಿಕ್ಯವು ಕೆಳಗೆ ಬೀಳ
ಲು ॥೧೦॥ ಆ ಮಣಿಯಂ ನೋಡಿ ಮಹಾದೇವನು ಲೀಲಾ ವಿನೋದವುಳ್ಳ

ಲೀಲಾವಿನೋದಿನೀಂ । ಉವಾಚಪರಯಾಪ್ರೀತ್ಯಾವ್ಯಪತನ್ಮೇಮಣಿಶ್ಶಿವೇ॥೧೨॥ ಅನ್ವೇಷಯಜಲೇಸುಭ್ರೂಸ್ತಚ್ಛ್ರುತ್ವಾಪ್ರಾವದಚ್ಛಿವಂ । ಮಮನಾಥವಿರೂಪಾಕ್ಷಮಣಿನಾಕಿಂತವಪ್ರಭೋ ॥೧೩॥ ಲೋಕಾನಾಮುಪಕಾರಾಯದೇವಾನಾಂಹಿತಕಾಮ್ಯಯಾ । ಯಥಾಕಾಶ್ಯಾಂಪುರಾದೇವ ನಿರ್ಮಿತಾಮಣಿಕರ್ಣಿಕಾ ॥೧೪॥ ತಥಾತ್ರಾಪಿಮಮಪ್ರೀತ್ಯೈಕುರುಷ್ವಮಣಿಕರ್ಣಿಕಾಂ । ತಚ್ಛ್ರುತ್ವಾವಚನಂತಸ್ಯಾಸ್ತಥಾಪ್ರೋವಾಚಶಂಕರಃ ॥೧೫॥ ಯೇಸ್ಯಾಂನರಾನಿಮಜ್ಜಂತಿಪಾಪಿನೋಯಾಂತಿಸದ್ಗತಿಂ। ನಿಷ್ಕಾಮಿನಸ್ಸಕಾಮಾವಾಕಿಂಚಿದಭ್ಯುದಿತೇರವೌ ॥೧೬॥ ಯೇತ್ರಸ್ನಾನಂಪ್ರಕುರ್ವಂತಿಮಾಮೇವಪ್ರಾಪ್ನುವಂತಿತೇ । ಅದ್ಯಪ್ರಭೃತಿಲೋಕೇಸ್ಮಿನ್ಪ್ರಖ್ಯಾತಾಮಣಿಕರ್ಣಿಕಾ ॥೧೭॥ ಭವಿಷ್ಯತಿಯಥಾಕಾಶ್ಯಾಂಪ್ರಾಣಿನಾಂಮುಕ್ತಿದಾಯಿನೀ । ತಚ್ಛ್ರುತ್ವಾವಚನಂತಸ್ಯಕೃಪಾಳೋಶ್ಶೂಲಪಾಣಿನಃ ॥೧೮॥ ಗಂಗಾತುಶಿರಸಸ್ತಸ್ಯಸಮಾಗತ್ಯಾವದಚ್ಛಿವಂ । ವಿ

ಪಾರ್ವತಿಯಂ ಕುರಿತು ಇಂತೆಂದು ನುಡಿದನು. ಓ ಪಾರ್ವತಿಯೇ, ನನ್ನ ಶಿರೋಮಾಣಿಕ್ಯವು ಬಿದ್ದು ಹೋಯಿತು. ನೀನು ಅಧಿಕ ಪ್ರೀತಿಯಿಂದ ॥೧೨॥ ಉದಕದಲ್ಲಿ ಹುಡುಕು ಎನಲು ಪಾರ್ವತಿಯು ಆ ವಚನವಂ ಕೇಳಿ ಶಿವನಂ ಕುರಿತು ಇಂತೆಂದಳು. ಓ ನನ್ನ ಪತಿಯಾದ ವಿರುಪಾಕ್ಷನೇ, ಪ್ರಭುವಾದ ನಿನಗೆ ಆ ಮಣಿಯಿಂದ ಏನು ಪ್ರಯೋಜನವು ॥೧೩॥ ಲೋಕಗಳಿಗೆ ಉಪಕಾರಕ್ಕೋಸ್ಕರವಾಗಿಯೂ, ದೇವತೆಗಳ ಹಿತಾಪೇಕ್ಷೆಯಿಂದಲೂ, ಪೂರ್ವದಲ್ಲಿ ಕಾಶಿಯಲ್ಲಿ ಯಾವ ಪ್ರಕಾರ ಮಣಿಕರ್ಣಿಕೆಯು ನಿರ್ಮಿಸಲ್ಪಟ್ಟಿತೋ ॥೧೪॥ ಅದೇ ಪ್ರಕಾರ ಇಲ್ಲಿಯೂ, ಎನಗೆ ಸಂತೋಷಕ್ಕಾಗಿ ಮಣಿಕರ್ಣಿಕೆಯನ್ನು ಮಾಡಬೇಕೆಂದು ಪ್ರಾರ್ಥಿಸಿದ ಪಾರ್ವತೀದೇವಿಯ ಆ ನುಡಿಯ ಲಾಲಿಸಿ ಈಶ್ವರನು ಹಾಗೆಯೇ ಆಗಲೆಂದನು॥೧೫॥ ಯಾವ ಮನುಷ್ಯರು ಈ ಮಣಿಕರ್ಣಿಕೆಯಲ್ಲಿ ಸ್ನಾನವಂ ಮಾಡುವರೋ, ಅವರು ಪಾಪಿಷ್ಠರಾದರೂ ಸದ್ಗತಿಯಂ ಹೊಂದುವರು. ಸಕಾಮಿಗಳಾದರೂ, ನಿಷ್ಕಾಮಿಗಳಾದರೂ ಸೂರ್ಯನು ಸ್ವಲ್ಪ ಉದಯಿಸುತ್ತಿರಲು ॥೧೬॥ ಯಾರು ಈ ಮಣಿಕರ್ಣಿಕೆಯಲ್ಲಿ ಸ್ನಾನವಂ ಮಾಡುವರೋ ಅವರು ನನ್ನನ್ನೇ ಹೊಂದುವರು. ಇದು ಮೊದಲ್ಗೊಂಡು ಈ ಲೋಕದಲ್ಲಿ ಮಣಿಕರ್ಣಿಕೆಯೆಂದು ಪ್ರಸಿದ್ಧವಾದ್ದಾಗಿ ॥೧೭॥ ಕಾಶೀಯಲ್ಲಿ ಪ್ರಾಣಿಗಳಿಗೆ ಯಾವ ಪ್ರಕಾರ ಮುಕ್ತಿಯಂ ಕೊಡುವಂಥಾದ್ದಾಗಿದೆಯೋ, ಹಾಗೆಯೇ ಆಗಲೆಂದು ನುಡಿದ ದಯಾಶಾಲಿಯಾದ ಆ ಶೂಲಪಾಣಿಯ ವಚನವಂ ಕೇಳಿ ॥೧೮॥ ಆ ಪರಮೇಶ್ವ

ಶ್ವವಂದ್ಯವಸಾಂವ್ಯತ್ರಪ್ರಾಣಿನಾಂಮುಕ್ತಿದಾಯಿನೀ ॥೧೯॥ ತಚ್ಛ್ರುತ್ವಾ
ದೇವದೇವೋಪಿ ತಥಾಕಾರ್ವಿತಿಚಾಬ್ರವೀತ್ । ಜಾನ್ಹವೀತದನುಜ್ಞಾತಾ ಕರ್ಣಿ
ಕಾಗುಪ್ತಗಾಮಿನೀ ॥೨೦॥ ಏಕಾಂಶೇನತಥಾಜಾತಾಚೈಕಾಂಶೇನಶಿರಸ್ಥಿತಾ।
ತಾಂದೃಷ್ಟ್ವಾಪಾರ್ವತೀಪ್ರಾಹಹರ್ಷಿತಾತತ್ರಶಂಕರಂ॥ ೨೧ ॥ ತ್ರಿರಾತ್ರಂ
ಜಾನ್ಹವೀತೀರಸ್ನಾಯಿನಾಂಮಣಿಕರ್ಣಿಕಾ । ಸರ್ವಾಘೌಘಸ್ಯಶಮನೀಮೃ
ತಾನಾಂಮುಕ್ತಿದಾಯಿನೀ ॥ ೨೨ ॥ ಸದ್ಯಃಪುನಾತುಕಪಿಲಾಸಂಗತಾಮಣಿ
ಕರ್ಣಿಕಾ। ಏಕರಾತ್ರೌನಿವಸತಾಂಮುಕ್ತಿದಾಮರಣಂವಿನಾ ॥೨೩॥ ಭವಿ
ಷ್ಯತೀತಿಮನ್ನಾಥದದಸ್ವವರಮುತ್ತಮಂ। ತಚ್ಛ್ರುತ್ವಾವಿಷಹಾರೀಚತತ್ತಥಾ
ಸ್ತ್ವಿತಿಚಾಬ್ರವೀತ್ ॥೨೪॥ ಜಲಕ್ರೀಡಾಂಸಮಾಪ್ಯಾಥತೀರಮಾಸಾದ್ಯಶಂ
ಕರಃ । ಉಮಯಾಸಹಸಂತೋಷಾದ್ಧೃತವಸ್ತ್ರಾದಿಭೂಷಣಃ ॥೨೫॥ ತ
ಸ್ಮಿನ್ನುದ್ಯಾನಮಧ್ಯೇತುನ್ಯವಸಚ್ಛಶಿಶೇಖರಃ । ತೀರ್ಥಾನಾಂತುಚತುಃಷಷ್ಟಿ
ಕೋಟಯೊಪ್ಯಥಚಾಗಮನ್ ॥೨೬॥ ಕಪಿಲಾದಕ್ಷಿಣೇತೀರೇನಿವಸಂತಮುಮಾಪ

ರನ ಶಿರಸ್ಸಿನಿಂದ ಗಂಗೆಯು ಇಳಿದು, ಶಿವನಂ ಕುರಿತು ನುಡಿದಳು. ಓ ವಿ
ಶ್ವವಂದ್ಯನೇ,ನಾನು ಪ್ರಾಣಿಗಳಿಗೆ ಮುಕ್ತಿಯಂ ಕೊಡುವವಳಾಗಿ ಇಲ್ಲಿಯೇ
ಇರುತ್ತೇನೆ ॥೧೯॥ ಇಂತೆಂದು ಹೇಳಿದ ಗಂಗಾವಚನವಂ ಕೇಳಿ, ಆ ದೇವ
ದೇವನು ಹಾಗೆಯೇ ಮಾಡೆಂದು ಹೇಳಲು, ಗಂಗೆಯು ಆ ಶಿವನಿಂದ ಅಜ್ಞಾ
ಪಿಸಲ್ಪಟ್ಟು ಗುಪ್ತಗಾಮಿನಿಯಾಗಿ ಒಂದು ಅಂಶದಿಂದ ಮಣಿಕರ್ಣಿಕೆಯಾಗಿ
ಒಂದು ಅಂಶದಿಂದ ಈಶ್ವರನ ಶಿರಸ್ಸಿನಲ್ಲಿದ್ದಳು. ಆ ಗಂಗೆಯಂ ನೋಡಿ॥
ಪಾರ್ವತಿಯು ಹರುಷಿತಳಾಗಿ ಪರಮೇಶ್ವರನಂ ಕುರಿತು ನುಡಿದಳು ॥೨೧,
ಆ ಗಂಗಾ ತೀರದಲ್ಲಿ ಮೂರು ದಿನಗಳು ಸ್ನಾನವಂ ಮಾಡಿದವರಿಗೆ ಮಣಿಕ
ರ್ಣಿಕೆಯು, ಸರ್ವ ಪಾಪಸಂಘವಂ ನಾಶಮಾಡಿಮೃತರಾದವರಿಗೆ ಮುಕ್ತಿ
ಯಂಕೊಡುವಳು।೨೨।ಇಲ್ಲಿ ಕಪಿಲಾ ಸಂಗತವಾದ ಮಣಿಕರ್ಣಿಕೆಯು,ಸ್ನಾ
ನವು ಮಾಡಿದ ಕ್ಷಣದಲ್ಲಿಯೇ ಜನರನ್ನು ಪರಿಶುದ್ಧರಂ ಮಾಡಲಿ. ಒಂದು ರಾ
ತ್ರಿಯಲ್ಲಿ ವಾಸವಂ ಮಾಡಿದವರಿಗೆ ಮರಣವಿಲ್ಲದೆ ಮುಕ್ತಿಯಂ ಕೊಡುವಂ
ಥಾದ್ದಾಗಲಿ।೨೩। ಓ ನನ್ನ ಪ್ರಿಯನಾದ ಪರಮೇಶ್ವರನೇ, ಇಂಥಾ ಉತ್ತ
ಮವಾದ ವರವಂ ಕೊಡೆಂದು ಕೇಳುವ ಪಾರ್ವತೀ ವಚನವಂ ಕೇಳಿ, ಆ ವಿ
ಷಹರನು ಹಾಗೆಯೇ ಆಗಲೆಂದು ವರನಿತ್ತು ॥೨೪॥ ಜಲಕ್ರೀಡೆಯಂ ಮುಗಿ
ಸಿ ತೀರವಂ ಹೊಂದಿ ಪಾರ್ವತಿಯೊಡನೆ ಸಂತೋಷದಿಂದ ವಸ್ತ್ರಾಭರಣ
ವಂ ಧರಿಸಿದವನಾಗಿ ॥೨೫॥ ಆ ಉದ್ಯಾನವನ ಮಧ್ಯದಲ್ಲಿಯೇ ವಾಸವಂ

ತಿಂ। ದದೃಶುಸ್ತಾನಿ ತೀರ್ಥಾನಿ ಸ್ವಮೂರ್ತಿಂ ಪ್ರಾಪ್ಯ ಶಂಕರಂ । ನತ್ವಾ ತೇಂ
ತುಷ್ಟುವುಸ್ತಸ್ಮಿನ್ ಸ್ನಾನಂ ದಾಕ್ಷ್ಯ ಯುತಾನಿ ಚ। ಗೌರೀಪ್ರಿಯ ನಮಸ್ತುಭ್ಯಂ
ಗಂಗಾಧರ ದಿಗಂಬರ ॥ ೧೮ ॥ ಗಜಾಜಿನಾಂಬರಧರ ಧರಾಧರ ನಮಸ್ಕೃತ ।
ಪಾಹಿ ನಃ ಪಾಪರೂಪಾಣಿ ಯಾವಯೋ ದರ್ಶನಾದ್ವಯಂ ॥ ೧೯ ॥ ಕೃತಾರ್ಥಾ
ಸ್ಮಃ ಚ ಧನ್ಯಾಸ್ಮಃ ಶೃಣು ಅಸ್ಮದ್ವಚನಂ ತಾನಃ । ಅಸ್ಮಿನ್ ಲೋಕೇ ನರಾಸ್ನಾತ್ವಾ ತ್ಯೆ
ಜಂತ್ಯಸ್ಮಾಸು ಪಾಪಾನಿ ಚ ॥ ೨೦ ॥ ತೈರಘೌಘೈಃ ಪೀಡ್ಯಮಾನಾ ದೃಷ್ಟು ಕಾಮಾವ
ಯಂ ತವ । ಪಾದಾರವಿಂದಯುಗಳಂ ಪ್ರಾಪ್ತಾಸ್ಮೈ ಸರ್ಪಭೂಷಣ ॥ ೨೧ ॥ ತ್ವ
ಮಸ್ಮತ್ಪಾಪಶಮನೇ ಹ್ಯುಪಾಯಂ ವಕ್ತುಮರ್ಹಸಿ। ಶ್ರೀಮಹಾದೇವಃ । ತೀ
ರ್ಥಾನಿ ಭೋ ಶೃಣುಧ್ವಂ ಮೇ ವಚನಂ ವೇದಸಂಮಿತಂ । ರವೌ ತು ವೃಶ್ಚಿಕಂ ಪ್ರಾ
ಪ್ತೇ ಯೇ ಸ್ನಾಂತಿ ವಿಮಲೇ ಜಲೇ ॥ ೨೨ ॥ ಕಪಿಲಾಯಾ ಮಹಾನದ್ಯಾಃ ಕರ್ಣಿಕಾಯಾಂ
ಮಣಿಸ್ತಥಾ । ತೇತ್ವಘೌಘೈರ್ನಲಿಪ್ಯಂತೇ ಪ್ರಾಪ್ನುವಂತಿ ಚ ಮಾಮಪಿ ॥ ೨೩ ॥
ಮಮ ಪ್ರೀತಿಕರಂ ನಿತ್ಯಂ ಸರ್ವಾಘೌಘ ನಿವಾರಣಂ । ಅಸ್ಮಿನ್ ವೃಶ್ಚಿಕಮಾಸೇ ತು
ಪೌರ್ಣಮ್ಯಾಂ ತು ವಿಶೇಷತಃ ॥ ೨೪ ॥ ಕೃತ್ತಿಕಾ ಸಂಯುತಾಯಾಂ ತು ರವಾವ

ಮಾಡಿದನು. ಅಲ್ಲಿಗೆ ಅರವತ್ತು ನಾಲ್ಕು ಕೋಟಿ ತೀರ್ಥಗಳು ಬಂದು ॥೧೭॥
ಸ್ವಶರೀರವಂ ಹೊಂದಿ ಕಪಿಲಾ ತೀರದಲ್ಲಿರುವ ಉಮಾಪತಿಯ ದರ್ಶನವಂ
ಮಾಡಿ ನಮಸ್ಕರಿಸಿ, ಆ ತೀರ್ಥಗಳೆಲ್ಲವು, ಆ ಪರಮೇಶ್ವರನ್ನ ಆನಂದಭಾಷ್ಪ
ಯುಕ್ತಗಳಾಗಿ ಸ್ತೋತ್ರವಂ ಮಾಡಿದವು ॥೧೮—೧೯॥ ಓ ಪರಮೇಶ್ವರ
ನೇ, ನಿನ್ನ ದರುಶನದಿಂದ ಕೃತಾರ್ಥರಾದೆವು, ಮತ್ತು ಧನ್ಯರಾದೆವು. ನ
ಮ್ಮಗಳ ಒಂದು ನುಡಿಯಂ ಕೇಳು, ಈ ಲೋಕದಲ್ಲಿ ಜನಗಳು ಸ್ನಾನವಂ
ಮಾಡಿ ಪಾಪರಾಶಿಗಳನ್ನ ನಮ್ಮಲ್ಲಿ ಬಿಡುತ್ತಿರುವರು ॥೨೦॥ ಆ ಪಾಪರಾಶಿ
ಗಳಿಂದ ನಾವು ಬಾಧಿಸಲ್ಪಟ್ಟವರಾಗಿ ನಿನ್ನ ಪಾದಕಮಲವಂ ನೋಡಲಪೇ
ಕ್ಷೆಯುಳ್ಳವರಾಗಿ ಬಂದವರಾದೆವು. ಓ ಸರ್ಪಭೂಷಣನೆ ॥೨೧॥ ನೀನು ನ
ಮ್ಮಗಳ ಪಾಪಪರಿಹಾರ ಮಾಡುವ ವಿಷಯವಾಗಿ ಉಪಾಯವಂ ಹೇಳಲಿಕ್ಕೆ
ಅರ್ಹನಾಗಿದ್ದೀ ಎನಲು ಮಹಾ ದೇವನಿಂತೆಂದನು ॥೨೨॥ ಓ ತೀರ್ಥಗಳಿ
ರಾ, ವೇದಯುಕ್ತವಾದ ನನ್ನ ವಚನವಂ ಕೇಳಿ ಸೂರ್ಯನು ವೃಶ್ಚಿಕವಂ ಹೊಂ
ದಲು, ಯಾವ ಮನುಷ್ಯರು ಈ ಕಪಿಲಾನದಿಯ ಮಣಿಕರ್ಣಿಕೆಯಲ್ಲಿ ಸ್ನಾ
ನವಂ ಮಾಡುವರೋ ಅವರು ಪಾಪ ಸಂಘಗಳಿಂದ ಲೇಪವಂ ಹೊಂದುವದಿ
ಲ್ಲ ಮತ್ತು ನನ್ನನ್ನು ಹೊಂದುತ್ತಾರೆ ... ... ॥೨೩॥

ಈ ತೀರ್ಥದಲ್ಲಿ ವೃಶ್ಚಿಕ ಮಾಸದಲ್ಲಿ ಕೃತ್ತಿಕಾಯುಕ್ತ ಪೌರ್ಣಮಿಯ

ಥೋದಿತೇಸತಿ। ಸ್ನಾನಂಮುಕ್ತಿಪ್ರದಂದಿವ್ಯಸರ್ವಲೋಕಪ್ರದಂಶುಭಂ॥೩೬॥
ಕಾರ್ತಿಕ್ಯಾಂಸೋಮವಾರಸ್ತು ಮಮಪ್ರೀತಿಕರಸ್ಸದಾ । ಸರ್ವಸೌಭಾಗ್ಯದ
ಶ್ಚೈವಭುಕ್ತಿಮುಕ್ತಿಫಲಪ್ರದಃ ॥೩೭॥ ಸರ್ವವ್ರತಾಧಿಕೋವಾರಸ್ಸರ್ವ
ದಾನತಪೋಧಿಕಃ। ತಸ್ಮಿನ್ವಾರೇತುಯೇಸ್ನಾತ್ವಾಹ್ಯಸ್ಮಿಂತೀರ್ಥೇವಿಶೇಷತಃ॥೩೮
ಉಪವಾಸಂಪ್ರಕುರ್ವಂತಿನಕ್ತಂವಾಭಕ್ತಿಪೂರ್ವಕಂ । ತೇಸರ್ವೇಮಮಸಾ
ಯುಜ್ಯಂಪ್ರಾಪ್ನುವಂತಿನಸಂಶಯಃ ॥೩೯॥ ವ್ರತೇನಾನೇನಸದೃಶಸ್ತೀರ್ಥೇನಾ
ನೇನಸನ್ನಿಭಃ । ಲೋಕೇನಾಸ್ತಿನಸಂದೇಹಸ್ಸತ್ಯಂಸತ್ಯಂವದಾಮ್ಯಹಂ ॥ ೪೦ ॥
ತ್ರಿಂಶಚ್ಚತಿಥಯಃಪುಣ್ಯಾಹ್ಯಳಿಂಪ್ರಾಪ್ತೇದಿವಾಕರೇ। ತಿಥಿಷ್ವಾಸುಚಯಸ್ನಾತಿ
ಸರ್ವಮಾಸಫಲಂಲಭೇತ್ ॥ ೪೧ ॥ ತಸ್ಮಾದ್ಯೂಯಂಕುರುಧ್ವಂವೈಸ್ನಾನಂ
ಪಾಪನಿವಾರಣಂ । ಭವಿಷ್ಯತಿಮಹಾಭಾಗಾಃಕಪಿಲಾಯಾಶ್ಶುಭೋದಕೇ॥೪೨
ವರ್ಷೇವರ್ಷೇಸಮಾಗತ್ಯೈರವೌಕೀಟಂಗತೇಸತಿ । ಸ್ನಾತ್ವಾಗಚ್ಛಧ್ವಮಮಲೋಕ್ಯ
ಸ್ಮಿಂತೀರ್ಥವರೇಶುಭೇ॥೪೩॥ ಯೇತ್ರಸ್ನಾನಂನಕುರ್ವಂತಿಕಾರ್ತ್ತಿಮಾಸೇರಾಣೋದ

ಲ್ಲಿ, ಸೂರ್ಯೋದಯ ಕಾಲದಲ್ಲಿ ಮಾಡಿದ ಸ್ನಾನವು, ನನಗೆ ಪ್ರೀತಿಯ
ನ್ನುಂಟು ಮಾಡುವದು. ಯಾವಾಗಲು ಸರ್ವ ಪಾಪರಾಶಿಗಳಂ ಪರಿಹರಿಸು
ವದು. ಮುಕ್ತಿಯಂನುಂಟು ಮಾಡುವದು. ಸ್ವರ್ಗಾದಿ ಸಮಸ್ತ ಪುಣ್ಯ
ಲೋಕಗಳನೀವುದು ॥ ೩೬ ॥ ಕಾರ್ತೀಕ ಸೋಮವಾರವೆನಗೆ ಪ್ರೀತಿಕ
ರವಾದದ್ದು. ಜನಗಳಿಗೆ ಸರ್ವ ಸೌಭಾಗ್ಯ, ಭುಕ್ತಿ, ಮುಕ್ತಿ, ಫಲಪ್ರದ
ವಾದದ್ದು ॥ ೩೭ ॥ ಆ ವಾರವು ಸರ್ವ ವ್ರತಗಳಿಗಿಂತಲು ಅಧಿಕವಾದದ್ದು.
ಸರ್ವ ದಾನ ತಪಸ್ಸುಗಳಿಗಿಂತಲು ಅಧಿಕವಾದದ್ದು. ಆ ವಾರದಲ್ಲಿ ಯಾರು
ಈ ತೀರ್ಥದಲ್ಲಿ ಸ್ನಾನವಂಮಾಡಿ ॥ ೩೮ ॥ ವಿಶೇಷ ಭಕ್ತಿಯಿಂದುಪವಾಸ
ವನ್ನಾಗಲಿ, ಅಥವಾ ನಕ್ತವನ್ನಾಗಲಿ ಮಾಡಿದವರು ನನ್ನ ಸಾಯುಜ್ಯವಂ
ಹೊಂದುವರು. ಸಂಶಯವಿಲ್ಲ ॥೩೯॥ ಈ ವ್ರತಕ್ಕೆ ಸಮವಾದ ವ್ರತವು
ಈ ತೀರ್ಥಕ್ಕೆ ಸಮವಾದ ತೀರ್ಥವು, ಲೋಕದಲಿಲ್ಲ. ನಾನು ಅತ್ಯಂತ
ಸತ್ಯವಾಗಿ ಹೇಳುತ್ತೇನೆ. ಸೂರ್ಯನು ವೃಶ್ಚಿಕವಂ ಹೊಂದಲು, ಮೂವತ್ತು
ದಿನಗಳು ಪುಣ್ಯದಿನಗಳೆ, ಈ ದಿನಗಳಲ್ಲಿ ಸ್ನಾನವಂ ಮಾಡಿದವನು ಹನ್ನೆರಡು
ತಿಂಗಳಲ್ಲಿಯು ಸ್ನಾನವಂ ಮಾಡಿದ ಫಲವಂ ಹೊಂದುವನು ॥೪೧॥ ಆದಕಾ
ರಣ ನೀವು ಪಾಪ ನಿವಾರಣವಾದ ಸ್ನಾನವಂ ಮಾಡಬೇಕು. ಓ, ಋಷಿಗ
ಳಿರಾ ಕಪಿಲಾನದಿ ಉದಕದಲ್ಲಿ ಮಾಡಿದ ಸ್ನಾನದಿಂ ಪಾಪ ಪರಿಹಾರವಾಗು
ವದು ॥೪೨॥ ಪ್ರತಿ ವೃಶ್ಚಿಕ ಮಾಸದಲ್ಲಿಯು, ನೀವು ಬಂದು ಸಾಷ್ಟ್ಯ ದಿಂ

ಯೇ । ತೇಷಾಂಪಾಪಾನಿದತ್ವಾತುಗಚ್ಛಧ್ವಂನ್ಯೈಯಥಾಸುಖಂ ॥೪೪॥ ತಚ್ಛ್ರು
ತ್ವಾವಚನಂಶಂಭೋಸ್ತೀರ್ಥಾನಿಸರಿತಸ್ತಥಾಃ । ಪ್ರತ್ಯೂಚುಸ್ತಂವಿಷಧರಂ
ದಯಾಳುಂವಿಶ್ವರೂಪಿಣಂ ॥೪೫॥ ಅಸ್ಮತ್ಪಾಪೌಘಶಮನೇಹ್ಯುಪಾಯೋಗಿರಿಜಾ
ಪತೇ । ಸಮ್ಯಗುಕ್ತಸ್ಸುರಶ್ರೇಷ್ಠ ಸ್ನಾತುಮಾಜ್ಞಾಂಕುರುಪ್ರಭೋ ॥ ೪೬ ॥ ತ
ಚ್ಛ್ರುತ್ವಾವಚನಂತಾಸಾಂತೀರ್ಥಾನಾಂಚಪಿನಾಕಭೃತ್ । ಅಸ್ಮಿನ್ತೀರ್ಥೇ
ತುಕರ್ತವ್ಯಮದ್ಯಪ್ರಭೃತಿವೃಶ್ಚಿಕೇ॥೪೭॥ ಭಾನೌತಿಷ್ಠತಿಯುಷ್ಮಾಭಿಸ್ಸ್ನಾ
ನಂಪಾಪನಿವೃತ್ತಯೇ । ಇತಿತೇನಾಭ್ಯನುಜ್ಞಾತಾನ್ಯಸ್ಯಾಂಸ್ನಾತ್ವಾಯಥಾವಿಧಿ
॥೪೮॥ ಗೌರೀಶಂಪೂಜಯಿತ್ವಾತುಹಿಮವತ್ಪುತ್ರಿಕಾಂತಥಾ । ತತಃಪ್ರದಕ್ಷಿ
ಣಂಚಕ್ರುಃಪ್ರಣಿಪತ್ಯಪುನಃಪುನಃ ॥೪೯ ॥ ಉಷಿತ್ವಾತತ್ರಚಾಪಾಸಂಯಾವ
ಚ್ಚಾಪಸ್ಯದರ್ಶನಂ । ಸ್ನಾಯಿನಾಂತುವರಂದತ್ವಾಹ್ಯಸ್ನಾತಾನಾಮಘಂತ
ಥಾ ॥೫೦॥ ಸ್ವಂಸ್ವಂಧಾಮಯಯುಸ್ತಾನಿಪುಣ್ಯತೀರ್ಥಾನಿಸತ್ವರಂ॥ ೫೧॥

ತವಾದ ಈ ತೀರ್ಥದಲ್ಲಿ ಸ್ನಾನನಂಮಾಡಿ ಹೋಗತಕ್ಕದ್ದು ॥೪೪॥ ಯಾರು
ವೃಶ್ಚಿಕ ಮಾಸದಲ್ಲಿ ಅರುಣೋದಯದಲ್ಲಿ, ಈ ಕಪಿಲಾ ತೀರ್ಥದಲ್ಲಿ ಸ್ನಾ
ನವಂ ಮಾಡುವದಿಲ್ಲವೋ ಅವರಿಗೆ ಪಾಪಗಳಂ ಕೊಟ್ಟು ಸುಖವಾಗಿ ನೀವು
ಹೊಗತಕ್ಕದೆಂದು ಹೇಳಿದ, ಶಿವನ ವಚನವಂ ಕೇಳಿ ಆ ನದಿಗಳು ತೀರ್ಥ
ಗಳು ವಿಶ್ವರೂಪಿಯಾಗಿಯು, ದಯಾಳುವಾಗಿಯು, ವಿಷಧರನಾಗಿಯು,
ಇರುವ ಆ ಹರನಂ ಕುರಿತು ಪ್ರತ್ಯುತ್ತರವಂ ಹೇಳಿದವು ॥ ೪೫ ॥ ಓ, ಪಾ
ರ್ವತೀ ಪತಿಯೇ ನಮಗೆ ಪಾಪ ನಾಶನೋಪಾಯವನ್ನ ಚನ್ನಾಗಿ ಹೇಳಿ
ದಿ ಓ, ಸುರ ಶ್ರೇಷ್ಠನೆ ಸ್ನಾನವಂ ಮಾಡುವದಕ್ಕೆ ಅಪ್ಪಣೆಯಂಕೊಡು।೪೬
ಇಂತೆಂದು ಕೇಳಿದ ಆ ತೀರ್ಥಗಳ ವಚನವಂ ಕೇಳಿ ಪಿನಾಕಧಾರಿಯು, ಇ
ದು ಮೊದಲ್ಗೊಂಡು ಈ ತೀರ್ಥದೊಳ್ ವೃಶ್ಚಿಕದಲ್ಲಿ ಸೂರ್ಯನಿರುತ್ತಿಲು।೪೭।
ನೀವುಗಳು ಪಾಪ ಪರಿಹಾರಕ್ಕೋಸ್ಕರ ಸ್ನಾನವಂ ಮಾಡಬೇಕೆಂದು ಈಶ್ವರ
ನಿಂದಾ ಆಜ್ಞಾಪಿಸಲ್ಪಟ್ಟವುಗಳಾಗಿ ಈ ಕಪಿಲಾ ನದಿಯಲ್ಲಿ ಯಥಾವಿಧಿಯಾಗಿ
ಸ್ನಾನವಂ ಮಾಡಿ ॥೪೮॥ ಈಶ್ವರನನ್ನು, ಪಾರ್ವತೀಯನ್ನು, ಪೂಜಿಸಿಯಂ
ಮಾಡಿ ಬಾರಿ ಬಾರಿಗೂ ಪ್ರದಕ್ಷಿಣ ನಮಸ್ಕಾರಗಳಂ ಮಾಡಿ ॥ ೪೯ ॥ ಧನು
ರ್ಮಾಸ ಹುಟ್ಟುವ ವರಿಯಂತವು, ಆ ಕ್ಷೇತ್ರದಲ್ಲಿ ವಾಸವಂ ಮಾಡಿ, ಸ್ನಾ
ನವಂಮಾಡಿದ ಜನರಿಗೆ ವರವನ್ನು, ಸ್ನಾನವಂ ಮಾಡದೆ ಇದ್ದವರಿಗೆ ಪಾಪ
ವನ್ನು ಕೊಟ್ಟು ಆ ತೀರ್ಥಗಳೆಲ್ಲವು ಶೀಘ್ರವಾಗಿ ತಮ್ಮ ತಮ್ಮ ಸ್ಥಾನಂ
ಗಳಂ ಕುರಿತು ಹೋದವು. ಸೂತ ಮುನಿಯು ಹೇಳುತ್ತಾನೆ. ಈ ಪ್ರಕಾ

ಶ್ರೀಸೂತಃ । ಇತಿಗರಪುರನಾಥೋಹ್ಯೇಷವತ್ಯಾಚಸಾಕಂಸುವಿಹಿತಜಲಲೀಲಸ್ತೀರ್ಥರಾಜಂವಿಧಾಯ । ಕಪಿಲಮುನಿಸುತಾಯಾಂಮೌಳಿಮಾಣಿಕ್ಯಪಾತಾಚ್ಛಿರಸಿವಿಧೃತಗಂಗಾಂಗುಪ್ತವಾಹಾಂಚಕಾರ ॥ ೫೦ ॥ ತದನುಪರಮತೋಷಾತ್ತೀರಮಾಸಾದ್ಯಶಂಭುಸ್ಸ್ಫುರಿತಶಶಿಶತಾಭೋದಿವ್ಯವಸ್ತ್ರಾದಿಭೂಷಃ ಸುರತರುವರಸಂಘೇಪುಣ್ಯತೀರ್ಥೈಃಪ್ರತುಷ್ಟೋ ಗರಳಪುರನಗರ್ಯಾಂಪ್ರಸ್ಥಿತೋನೀಲಕಂಠಃ ॥೫೧॥ ಏತನ್ಮಾನೀಂದ್ರಾಮಣಿಕರ್ಣಿಕಾಯಾಮಾಹಾತ್ಮ್ಯಮತ್ಯದ್ಭುತಮುಕ್ತಮದ್ಯ । ಯೇತತ್ರಕುರ್ವಂತಿನಿಮಜ್ಜನಂತೇಸಂಯಾಂತಿಕೈವಲ್ಯಪದಂಹರಸ್ಯ ॥ ೫೨ ॥ ವಿಶೇಷತೋವೃಶ್ಚಿಕಮಾಸಿತೀರ್ಥೇನಿಮಜ್ಜನಂಭುಕ್ತಿವಿಮುಕ್ತಿದಂಚ । ರಾಕಾತಿಥಾವಗ್ನಿಭಸಂಯುತಾಯಾಂಸ್ನಾನಂಪ್ರದೀಪಜ್ವಲನಂಹರಸ್ಯ ॥೫೩॥ ಅಭೀಷ್ಟದಂಪದ್ಮಭುವಾಚವಕ್ತುಂನಶಕ್ಯತೇಮದ್ಗುರುಣಾಶಿವೇನ । ಯೇಸೋಮವಾರವ್ರತಮಾಚರಂತಿತೇಷಾಂನಜಾನೇಕಿಮುತತ್ಫಲಂಚ ॥ ೫೪ ॥ ತಸ್ಮಾನ್ಮಾನೀಂದ್ರಾವ್ರತಮಿಂದುವಾರೆಸ್ನಾನಂಕುರುಧ್ವಂಮಣಿಕರ್ಣಿಕಾಯಾಂ ॥೫೫॥

ರ ಗರಳಪುರಿಗೆ ಪ್ರಭುವಾದ ಮಹಾ ದೇವನು ಪಾರ್ವತಿಯೊಡನೆ ಜಲಕ್ರೀಡೆಯಂಮಾಡಿ ಆ ತೀರ್ಥವಂನ ತೀರ್ಥರಾಜವೆಂಬ ಪ್ರಸಿದ್ಧಿಯಂ ಹೊಂದಿಶಿ ಆ ಕಪಿಲಾ ನದಿಯಲ್ಲಿ ಶಿರೋಮಾಣಿಕ್ಯವು ಬಿದ್ದದ್ದರಿಂದಾ ತಂನ ಶಿರಸ್ಸಿನಲ್ಲಿ ಧರಿಸಿದ ಗಂಗೆಯಂನ ಆ ತೀರ್ಥದಲ್ಲಿ ಗುಪ್ತವಾಹಿನಿಯಾಗಿ ಮಾಡಿದನು ॥೫೦॥ ಅನಂತರದಲ್ಲಿ ಈಶ್ವರನು ಪರಮ ಸಂತೋಷದಿಂದಾ ಆ ನದೀತೀರವಂ ಹೊಂದಿ ಪ್ರಕಾಶಿಸುತ್ತಿರುವ ನೂರು ಚಂದ್ರರ ಕಾಂತಿಯುಳ್ಳವನಾಗಿ ದಿವ್ಯ ವಸ್ತ್ರಾದಿಗಳಿಂದ ಅಲಂಕರಿಸಲ್ಪಟ್ಟು, ದೇವ ವೃಕ್ಷಗಳ ಸಂಘದಲ್ಲಿ ಪುಣ್ಯ ತೀರ್ಥಗಳಿಂದ ಸಂತುಷ್ಟನಾಗಿ ಆಗರಳಪುರಿಯಲ್ಲಿಯೇ, ಸಂಚರಿಸುತಿದ್ದನು ॥೫೧॥ ಓ, ಋಷಿಗಳಿರಾ ಅತ್ಯಾಶ್ಚರ್ಯವಾದ ಈ ಮಣಿಕರ್ಣಿಕಾ ಮಹಾತ್ಮ್ಯವಂ ಈಗ ಹೇಳಿದೆನು. ಯಾರು ತೀರ್ಥದಲ್ಲಿ ಸ್ನಾನವಂ ಮಾಡುವರೊ ಅವರು ರಹಸ್ಯವಾದ ಮೋಕ್ಷಪದವಂ ಹೊಂದುತ್ತಾರೆ ॥೫೨॥ ವೃಶ್ಚಿಕ ಮಾಸದಲ್ಲಿ ಈ ತೀರ್ಥದೋಳ್ ಮಾಡಿದ ಸ್ನಾನವು ವಿಶೇಷವಾಗಿ ಭುಕ್ತಿ ಮುಕ್ತಿಗಳಂ ಕೊಡುವದು. ಕೃತ್ತಿಕಾ ನಕ್ಷತ್ರಯುಕ್ತವಾದ ಪೌರ್ಣಮಿಯಲ್ಲಿ ಮಾಡಿದ ಸ್ನಾನವು ಈಶ್ವರನಿಗೆ ಇಟ್ಟ ದೀಪವು ॥೫೩॥ ಇಷ್ಟಾರ್ಥವಂ ಕೊಡುವ ಫಲವಂನ ಹೇಳುವದಕ್ಕೆ ಬ್ರಹ್ಮನಾದರು, ನನ್ನ ಗುರುವಾದ ಶಿವನಾದರು, ಸಮರ್ಥರಾಗುವದಿಲ್ಲ. ಯಾರು ಸೋಮವಾರ ವ್ರತವಂ

ಇತಿಶ್ರೀ ಸ್ಕಾಂದಪುರಾಣೆ ಗರಳಪುರೀಮಹಾತ್ಮ್ಯೇ ಮಣಿಕರ್ಣಿ
ಕಾಮಹಿಮಾವರ್ಣನಾಯಾಂ ಸರ್ವತೀರ್ಥಾನಾಂ ವೃಶ್ಚಿಕ
ಮಾಸೆಮಣಿತೀರ್ಥಸ್ನಾನಾತ್ಪಾಪ ವಿಮೋಕ್ಷಣಂನಾ
ಮ ಸಪ್ತಮೋಧ್ಯಾಯಃ.

ಋಷಯಃ। ಸಮ್ಯಗುಕ್ತಂಮುನಿಶ್ರೇಷ್ಠ ತೀರ್ಥಮಾಹಾತ್ಮ್ಯಮುತ್ತಮಂ। ಕಾರ್ತಿಕಮಾಸಸ್ಯೇಕತಥಾಪೌರ್ಣಮಾಯಾಶ್ಚ ವೈಭವಂ ॥೧॥ ಅಸ್ಮಾಕಂಮನಶ್ಶುದ್ಧಿರ್ಜಾತಾತ್ವತ್ಕೃಪಯಾಮುನೇ। ಕೇಶವಸ್ಯಚಮಾಹಾತ್ಮ್ಯಂವಕ್ತುಮರ್ಹಸಿತತ್ವತಃ ॥ ಶ್ರೀಸೂತಃ ॥ ತಛ್ರುತ್ವಾವಚನಂತೇಷಾಮುವಾಚಪರಯಾಮುದಾ। ಏತತ್ಪ್ರಶ್ನಮಹಂವಕ್ತುಮುದ್ಯುಕ್ತೋಸ್ಮಿಮುನೀಶ್ವರಾಃ॥ ಶ್ರೋತವ್ಯಂಸಾವಧಾನೇನಭವದ್ಭಿಶ್ಚಯಥೇಪ್ಸಿತಂ। ಬಹುಜನ್ಮಾರ್ಜಿತೈಃಪುಣ್ಯೈರ್ಜಾಯಂತೇಶ್ರವಣೋತ್ಸುಕಾಃ॥೩॥ ಭವತಾಮದ್ಯವಕ್ಷ್ಯಾಮಿಲೋಕೋಪಕೃತಿಕಾಮ್ಯಯಾ। ಪುರಾಕ್ಷೀರಾಬ್ಧಿಮಥನಾದಭೂಲ್ಲಕ್ಷ್ಮೀಗುಣೋತ್ತರಾ॥೪ ಸರ್ವಲಕ್ಷಣಸಂಪನ್ನಾವೃತ್ತಮಧ್ಯಾಸುಲೋಚನಾ। ತಪ್ತಕಾಂಚನಸಂಕಾಶಾ ರಾಕಾಚಂದ್ರನಿಭಾನನಾ। ಕೋಕಿಲಾವ್ಯಕ್ತಮಧುರಭಾಷಣಾಕ್ಷೌಮವಾಸಿ

ಆಚರಿಸುವರೋ, ಅವರುಗಳ ಫಲವಂನ ಹೇಳಲಾರನು. ಆದ್ದರಿಂದ ಸೋಮವಾರದಲ್ಲಿ ವ್ರತವಂನು ಮಣಿಕರ್ನಿಕೆಯಲ್ಲಿ ಸ್ನಾನವಂನುಮಾಡತಕ್ಕದ್ದು
ಇಲ್ಲಿಗೆ ಮಣಿಕರ್ಣಿಕಾ ಮಹಿಮಾ ವರ್ಣನೆಯಲ್ಲಿ ಸರ್ವ ತೀರ್ಥಗಳಿಗೂ ವೃಶ್ಚಿಕ ಮಾಸದಲ್ಲಿ ಮಣಿಕರ್ಣಿಕಾ ತೀರ್ಥ ಸ್ನಾನದಿಂದ ಪಾಪ ವಿಮೋಚನವೆಂಬ ಏಳನೇ ಅಧ್ಯಾಯವು ಸಂಪೂರ್ಣವು.

ಋಷಿಗಳು ಕೇಳುತ್ತಾರೆ, ಓ ಋಷಿಶ್ರೇಷ್ಠನೇ, ಉತ್ತಮವಾದ ತೀರ್ಥ ಮಹಾತ್ಮ್ಯೆಯನ್ನು ಕೃತ್ತಿಕಾಯುಕ್ತವಾದ ಪೌರ್ಣಿಮಾ ಮಹಾತ್ಮ್ಯವನ್ನ ಚನ್ನಾಗಿ ಹೇಳಿದಿ ॥೧॥ ನಿನ್ನ ಕೃಪೆಯಿಂದ ನಮಗೆ ಮನಶ್ಶುದ್ಧಿ ಉಂಟಾಯಿತು. ಕೇಶವನ ಮಹಾತ್ಮ್ಯವನ್ನ ಯಥಾರ್ಥವಾಗಿ ಹೇಳಬೇಕೆನಲು॥೨ ಸೂತಮುನಿಯು ಹೇಳುತ್ತಾನೆ. ಆ ಋಷಿಗಳ ವಚನವಂ ಕೇಳಿ ಪರಮಸಂತೋಷದಿಂ ಓ ಋಷಿಗಳಿರಾ, ನೀವು ಕೇಳಿದ ಪ್ರಶ್ನೆಯಂ ಹೇಳುವದಕ್ಕೆಉದ್ಯುಕ್ತನಾಗಿದ್ದೆನು ॥೩॥ ನೀವು ಇಷ್ಟ ಪ್ರಕಾರ ಸಾವಧಾನದಿಂದ ಕೇಳತಕ್ಕದ್ದು. ಬಹು ಜನ್ಮಗಳಲ್ಲಿ ಸಂಪಾದಿಸಿದ ಪುಣ್ಯಗಳಿಂದ ಪುಣ್ಯಕಥಾಶ್ರವಣದಲ್ಲಿ ಆಸಕ್ತಿವುಳ್ಳವರಾಗುವರು ॥೪॥ ನಮ್ಮಗಳಿಗೆ ಲೋಕೋಪಕಾರವಾಗಲೆಂಬ ಇಚ್ಛೆಯಿಂದ ಹೇಳುತ್ತೇನೆ. ಪೂರ್ವದಲ್ಲಿ ಕ್ಷೀರಸಮುದ್ರವಂ ಕ

ನೀ ॥೫॥ ಮುಕ್ತಾವೈಡೂರ್ಯಮಾಣಿಕ್ಯರಜಿತಸ್ವರ್ಣಕಂಕಣಾ । ಬಭೂವತ
ರಭೂಷಾಢ್ಯಾಮಾಣಿಕ್ಯಮುಕುಟೋಜ್ವಲಾ ॥೬॥ ಕುಚಕುಂಭಯುಗೇಚಂಚ
ನ್ಮುಕ್ತಾಹಾರವಿರಾಜಿತಾ। ಪೀವರಸ್ತನಭಾರಾರ್ತಾಚಲತ್ಕುಂಡಲಶೋಭಿತಾ
॥೭॥ ಹಂಸಗಂಭೀರಗಮನಾಹೇಮಾಂಬುಜಕರಾಶುಭಾ । ಮಂಜುಗಂಭೀರ
ನಿನದಾತ್ತಪ್ತಕಾಂಚನಮೇಖಲಾ ॥೮॥ ಕ್ಷೀರಾಬ್ಧಿಸ್ತಾಂರಮಾಂವೀಕ್ಷ್ಯತದಾ
ಸಂಹೃಷ್ಟಮಾನಸಃ । ಇಯಂಕಸ್ಮೈಪ್ರದೇಯೇತಿಮನಸ್ಯೇವಮಚಿಂತಯತ್
॥೯॥ಸಾತಂದೃಷ್ಟ್ವಾತುಪಿತರಂನತ್ವಾವಾಚಾಮೃತಾಕ್ಷರಂ । ತಾತಗಚ್ಛಾ
ಮ್ಯಹಂತಪ್ತುಂತಪಸ್ತುಪತಿಕಾಂಕ್ಷಿಣೀ ॥೧೦॥ ಅನುಜ್ಞಾಂಕುರುಮೇದ್ಯತ್ವಂ
ತಚ್ಛ್ರುತ್ವೋವಾಚಸಾಗರಃ । ಕರಿಷ್ಯಸಿಕಥಂಬಾಲೇತ್ವದ್ದೇಹಃಪುಷ್ಪಸನ್ನಿ
ಭಃ ॥೧೧॥ ಸಹಸೇತ್ವಂಕಥಂತಾಪವಾತಪರ್ಣಾಶನಾದಿಕಾನ್ । ಅನಯೋಷ್ಟ್ಯಾ

ಡದದ್ದರಿಂದ ಗುಣೋತ್ತರಳಾದಲಕ್ಷ್ಮಿಯು ॥೫॥ ಸರ್ವಲಕ್ಷಣಸಂಪನ್ನಳಾಗಿ
ಯೂ, ಕೃಶಮಧ್ಯಳಾಗಿಯೂ, ಚಾರುನೇತ್ರಿಯಾಗಿಯೂ, ಪುಟಪಾಕಶೋ
ಧಿತ ಸುವರ್ಣಕಾಂತಿಯುಳ್ಳವಳಾಗಿಯೂ, ಪೌರ್ಣಿಮಾಚಂದ್ರನಿಗೆ ಸಮಾ
ನವಾದ ಮುಖವುಳ್ಳವಳಾಗಿಯೂ, ಕೋಗಿಲೆಯಂತೆ ರಮಣೀಯವಾದ ಮ
ಧುರ ನುಡಿಗಳುಳ್ಳವಳಾಗಿಯೂ, ದುಕೂಲವಂ ಧರಿಸಿದವಳಾಗಿಯೂ ॥೬॥
ಮುತ್ತು, ವೈಡೂರ್ಯ, ಮಾಣಿಕ್ಯ, ರಜಿತಸ್ವರ್ಣ ಕಂಕಣಗಳುಳ್ಳದ್ದಾಗಿಯೂ
ಅನೇಕ ಶ್ರೇಷ್ಠವಾದ ಆಭರಣಾದ್ಯಲಂಕಾರಗಳಿಂದ ತುಂಬಿದವಳಾಗಿಯೂ
ಮಾಣಿಕ್ಯ ಕಿರೀಟದಿಂದ ಪ್ರಕಾಶಿಸುತ್ತಿರುವವಳಾಗಿಯು ॥೭॥ ಕುಚಕುಂಭ
ಯುಗ್ಮದಲ್ಲಿ ಪ್ರಕಾಶಿಸುತ್ತಿರುವ ಮುತ್ತಿನಹಾರಗಳಿಂದ ಪ್ರಕಾಶಿಸುತ್ತಿರುವ
ವಳಾಗಿಯೂ, ಕಠಿನವಾದ ಸ್ತನಭಾರದಿಂದ ಬಳುಕುತ್ತಿರುವವಳಾಗಿಯೂ,
ಕದಲುತ್ತಿರುವ ಕುಂಡಲಗಳಿಂದ ಶೋಭಿಸುತ್ತಿರುವವಳಾಗಿಯೂ ॥೮॥ ಹಂ
ಸೆಯಂತೆ ಗಂಭೀರವಾದ ಮನಸ್ಸುಳ್ಳವಳಾಗಿಯೂ, ಸ್ವರ್ಣಕಮಲವು ಹ
ಸ್ತದಲ್ಲಿವುಳ್ಳವಳಾಗಿಯೂ, ಮನೋಹರವಾಗಿಯೂ, ಗಂಭೀರವಾಗಿಯೂ
ಶಬ್ದ ಮಾಡುವತ್ತಿರುವ ವಡ್ಯಾಣವುಳ್ಳವಳಾಗಿಯೂ ॥೯॥ ಇದ್ದಳು. ಕ್ಷೀರ
ಸಮುದ್ರನು ಆ ಲಕ್ಷ್ಮಿಯಂ ನೋಡಿ ಸಂತುಷ್ಟಾಂತರಂಗನಾಗಿ ಈ ಕನ್ಯ
ಕೆಯಂ ಯಾರಿಗೆ ಕೊಡಬೇಕೆಂದು ಚಿಂತಿಸುತ್ತಿದ್ದನು ॥೧೦॥ ಆ ಲಕ್ಷ್ಮಿದೇ
ವಿಯು ತಂದೆಯಂ ಕುರಿತು ನಮಸ್ಕಾರವಂ ಮಾಡಿ ಅಮೃತಕ್ಕೆ ಸಮಾನ
ವಾದ ಅಕ್ಷರಳುಳ್ಳ ವಾಕ್ಯದಿಂದ ಓ ತಂಪೆಯಾದ ಕ್ಷೀರಸಮುದ್ರನೇ, ನಾನು
ಪತಿಯಂ ಅಪೇಕ್ಷಿಸುತ್ತಿರುವವಳಾಗಿ ತಪವಂ ಮಾಡುವದಕ್ಕೆ ಹೋಗುವೆನು

ವಿಭರ್ತಾರಮಹಮಾತ್ರತವಪ್ರಿಯಂ ॥ ೧೨॥ ತಚ್ಛ್ರುತ್ವಾಸಾಪುನಃಪ್ರಾಹ
ವಾಕ್ಯಂರೋಷಪುರಸ್ಸರಂ । ನಶ್ರುತಂವಾತ್ವಯಾತಾತಮನುವಾಕ್ಯಂಸ್ಮೃತೀ
ರಿತಂ॥೧೩॥ ಕನ್ಯಾಸ್ವಯಂತಪಃಕೃತ್ವಾಪ್ರಿಯಂಭರ್ತಾರಮಾರ್ಜಯೇತ್।
ಅಥವಾಸಾಸ್ವಸಾಮರ್ಥ್ಯಾತ್ಸ್ವಪಿತಾಪತಿಮಾರ್ಜಯೇತ್ ॥೧೪॥ ಅಹಂಕ
ರಿಷ್ಯಂತಪಶ್ಶಕ್ತಾವಪುಷಾಮೃದುನಾಮಮ । ಅನಿತ್ಯೇನಾಪ್ಯಶುಚಿನಾಸರ್ವರೋ
ಗಯುತೇನಕಿಂ ॥ ೧೫ ॥ ತಚ್ಛ್ರುತ್ವಾಪುನರಪ್ಯಾಹಗಚ್ಛ ಕರ್ತುಂತಪಸ್ಥಳಂ ।
ವಕ್ಷ್ಯಾಮಿಶೃಣುತತ್ಕನ್ಯೇಸಾವಧಾನಮನಾಭವ ॥೧೬॥ ಕಪಿಲಾಯಾಮಹಾನ
ದ್ಯಾಃದಕ್ಷಿಣೇಕ್ಷೇತ್ರಮುತ್ತಮಂ । ಕೌಂಡಿನ್ಯಾಃಪಶ್ಚಿಮೇಭಾಗೇಶಿವವಿಷ್ಣುಸಮಾ
ಶ್ರಿತಂ ॥೧೭॥ ತಪಸ್ವಿನಾಂತಪಸ್ಸಿದ್ಧಿದಾಯಕಂಮುಕ್ತಿದಾಯಕಂ । ಭೂ
ಕೈಲಾಸಮಿತಿಪ್ರೋಕ್ತಂಸರ್ವದೇವಸಮಾಶ್ರಿತಂ ॥೧೮॥ ಸಿದ್ಧವಿದ್ಯಾಧರೈರ್ಜು
ಷ್ಟಂಮುನಿಯೋಗಿನಿಷೇವಿತಂ । ಅತ್ರೇತಿಹಾಸಂವಕ್ಷ್ಯಾಮಿಶ್ರವಣಾತ್ಸರ್ವಕಾ
ಮದಂ ॥ ೧೯ ॥ ಪುರಾದಶಾನನೋನಾಮಪುಲಸ್ತ್ಯಬ್ರಹ್ಮಸಂಭವಃ । ಕದಾ

॥೧೧॥ ಅಪ್ಪಣೆಯಂ ಕೊಡು ಎನಲು ಸಮುದ್ರನು ಆ ಲಕ್ಷ್ಮಿಯ ವಚನವಂ
ಕೇಳಿ ಓ ಮಗಳೇ, ನೀನು ಹ್ಯಾಗೆ ತಪವಂ ಮಾಡುತ್ತೀ, ನಿನ್ನ ದೇಹವು
ಹುವ್ವಿಗೆ ಸಮಾನವಾದದ್ದು ॥೧೨॥ ನೀನು ಶೀತಾತಪಗಳನ್ನು, ವಾತಪರ್ಣಾ
ದ್ಯಶನಂಗಳನ್ನು ಹ್ಯಾಗೆ ಸಹಿಸುವಿ, ನಾನು ನಿನಗೆ ಇಷ್ಟವಾದ ಪತಿಯನ್ನ
ತರಿಸುವೆನೆಂದ ॥೧೨॥ ತಂದೆಯ ವಚನವಂ ಕೇಳಿ ರೋಷಪೂರ್ವಕವಾಗಿ
ಮತ್ತಿಂತೆಂದಳು. ಓ ತಂದೆಯೇ, ಧರ್ಮಶಾಸ್ತ್ರದಲ್ಲಿ ಹೇಳಿದ ಮನುವಿನ
ವಾಕ್ಯವಂ ನೀನು ಕೇಳಲಿಲ್ಲವೆ ॥೧೪॥ ಕನ್ಯಕೆಯು ತಾನು ತಪವಂ ಮಾಡಿ
ಇಷ್ಟನಾದ ಪತಿಯಂ ಸಂಪಾದಿಸಬೇಕು, ಹಾಗಲ್ಲದಿದ್ದರೆ, ಸ್ವಸಾಮರ್ಥ್ಯ
ದಿಂದಲಾಗಲೀ ಸಂಪಾದಿಸಬೇಕು ॥ ೧೫ ॥ ನಾನು ತಪವಂ ಮಾಡುವದಕ್ಕೆ
ಶಕ್ತಳಾಗಿದ್ದೇನೆ. ಮೃದುವಾಗಿಯೂ, ಅನಿತ್ಯವಾಗಿಯೂ ಇರುವ ದೇಹ
ದಿಂದ ನನಿಗೇನು ಪ್ರಯೋಜನವು ॥೧೬॥ ಇಂತೆಂದು ಹೇಳಿದ ಲಕ್ಷ್ಮೀ ವ
ಚನವಂ ಕೇಳಿ ಸಮುದ್ರನು ಹೇಳಿದನು. ಓ ಮಗಳೇ, ಹಾಗಾದರೆ, ತಪ
ಸ್ಸುಮಾಡುವದಕ್ಕೆ ಉತ್ತಮವಾದ ಸ್ಥಳವಂ ಹೇಳುತೇನೆ. ಅಲ್ಲಿಗೆ ನೀನು
ಹೋಗಿ ಸಾವಧಾನ ಮನಸ್ಕಳಾಗು ॥೧೭॥ ಕಪಿಲಾನದಿಯ ದಕ್ಷಿಣಭಾಗದ
ಲ್ಲಿಯೂ, ಕೌಂಡಿನೀ ನದಿಯ ಪಶ್ಚಿಮಭಾಗದಲ್ಲಿಯೂ, ಶಿವ ವಿಷ್ಣುಗಳಿಂದ
ಆಶ್ರಯಿಸಲ್ಪಟ್ಟ ಕ್ಷೇತ್ರವು ಉತ್ತಮವಾದದ್ದು ॥೧೮॥ ತಪಸ್ವಿಗಳಿಗೆ ತಪಃ
ಸ್ಸಿದ್ಧಿಯನ್ನು, ಮುಕ್ತಿಯನ್ನು ಉಂಟುಮಾಡುವದು. ಸಮಸ್ತ ದೇವತೆಗ

ಚಿತ್ಪುಷ್ಪವಿಮಾನೇನಲೋಕಯಾತ್ರಾಂತದಾಕರೋತ್ ॥೨೦॥ ಕೈಲಾಸಶಿಖರಂ
ದೃಷ್ಟ್ವಾಸುತೋಷಂಪರಮಂಯಯೌ । ಅತ್ಯಾಶ್ಚರ್ಯಕರಂಶೃಂಗಂನವರತ್ನ
ವಿರಾಜಿತಂ ॥೨೧॥ ಹೇಮರತ್ನಪ್ರಭಾಭಿಶ್ಚಭಾಸಿತಂಭಾನುಕೋಟಿವತ್ ।
ಏತದ್ಗೃಹೀತ್ವಾಗಂತವ್ಯಂಮಯಾವ್ಯನಗರಂಪ್ರತಿ ॥೨೨॥ ಶಿಖರಾಯೇತಿಸಂ
ಚಿಂತ್ಯತತ್ರಾತಿಷ್ಠದ್ವೇಗವಾನ್। ತಂದೃಷ್ಟ್ವಾತಸ್ಯಪತ್ನೀತುಪ್ರಾಹಮಂಡೋ
ದರೀತದಾ ॥೨೩॥ ಮಮನಾಥಮಹೇಶಾನೋರುದ್ರಃಕಾಲಾಂತಕೋಪಮಃ।
ತಸ್ಮಿಂಸ್ತುಕುಪಿತೇತ್ವಂಹಿಕುತ್ರತಿಷ್ಠತಿಮತ್ಪತೇ ॥೨೪॥ ಪಿನಾಕಿನಾತುದ
ತ್ತಂಹಿಕೈಲಾಸಶಿಖರಂತ್ವನ । ತದಾಗೃಹೀತ್ವಾಗಂತವ್ಯಮನ್ಯಥಾವಿಫಲಂಭವೇ
ತ್ ॥೨೫॥ ಇತ್ಯೇವಂಭಾಷಮಾಣಾಂತಾಂಪ್ರತ್ಯುವಾಚಾಹರಾವಣಃ। ತಪಃಕ
ರೋಮ್ಯಹಂಸುಭ್ರೂಶ್ಶಿಖರಾಹರಣಂಪ್ರತಿ ॥೨೬॥ ಶಿವಂಪ್ರಸಾದಯಿತ್ವಾ
ತುಶಿಖರಂತ್ವಾಹರಾಮ್ಯಹಂ । ಗಚ್ಛತ್ವಂಮೇಪುರೀಂದೇವಿಯಾನೇಸ್ಥಿತ್ವಾಗಣೈ
ಸ್ಸಹ ॥೨೭॥ ಇತಿತಾಂಪ್ರೇಷಯಿತ್ವಾತುಸಕರೋತ್ತಪಉತ್ತಮಂ। ದಿವ್ಯ

ಳಿಂದ ಆಶ್ರಯಿಸಲ್ಪಟ್ಟ ಭೂಕೈಲಾಸವೆಂದು ಹೇಳಲ್ಪಟ್ಟದ್ದು ॥೧೯॥ ಸಿದ್ಧ
ರಿಂದಲೂ, ವಿದ್ಯಾಧರರಿಂದಲೂ, ಮುನಿಗಳಿಂದಲೂ, ಯೋಗಿಗಳಿಂದಸೇವಿಸ
ಲ್ಪಟ್ಟದ್ದು. ಈ ವಿಷಯವಾಗಿ ಕೇಳಿದ್ದರಿಂದಲೇ, ಸರ್ವಕಾಮಗಳಂ ಉಂ
ಟುಮಾಡುವ ಇತಿಹಾಸವಂ ಹೇಳುತ್ತೇನೆ ॥೨೦॥ ಪೂರ್ವದಲ್ಲಿ ರಾವಣನೊಂ
ದುಸಮಯದಲ್ಲಿ ಪುಷ್ಪಕವೆಂಬ ವಿಮಾನದಿಂದ ಲೋಕ ಸಂಚಾರವಂ ಮಾ
ಡುವ॥೨೧॥ ಸಮಯದಲ್ಲಿಆಶ್ಚರ್ಯಕರವಾಗಿಯೂ ನವರತ್ನಗಳಿಂದಲೂ ಪ್ರಕಾ
ಶಿಸುತ್ತಿರುವ ಕೈಲಾಸ ಶಿಖರವಂ ನೋಡಿ ॥೨೨॥ ಕೋಟಿಸೂರ್ಯರಂತೆ ಹೇ
ಮರತ್ನ ಪ್ರಭೆಗಳಿಂದ ಪ್ರಕಾಶಿಸುತ್ತಿರುವ ಈ ಶಿಖರವಂ ನಮ್ಮ ಪಟ್ಟಣಕ್ಕೆ
ಕೊಂಡುಹೋಗಬೇಕೆಂದು ॥೨೩॥ ಆ ಶಿಖರಕ್ಕೋಸ್ಕರ ಯೋಚಿಸಿ ಆ ಪ
ರ್ವತದಲ್ಲಿ ವೇಗವುಳ್ಳ ತಾನು ನಿಲ್ಲಲು ಆ ರಾವಣನ ಪತ್ನಿಯಾದ ಮಂಡೋ
ದರಿಯು, ಆಗ ರಾವಣನ ನೋಡಿ ॥೨೪॥ ಓ ನನ್ನ ಪತಿಯೇ, ಮಹೇಶ್ವರ
ನು ಕಾಲಾಂತಕನಿಗೆ ಸಮಾನವಾದವನು. ಆತನು ಕೋಪಿಷ್ಠನಾದರೆ, ನೀ
ನು ಎಲ್ಲಿ ಇರುತ್ತಿ ॥೨೫॥ ಶಿವನೇ, ಕೈಲಾಸ ಶಿಖರವಂ ಕೊಟ್ಟರೆ ನೀನು
ತೆಗದುಕೊಳ್ಳಬಹುದಿಲ್ಲದಿದ್ದರೆ ವಿಫಲವಾದೀತು ॥೨೬॥ ಇಂತೆಂದು ಹೇಳು
ವ ಮಂಡೋದರಿಯಂ ಕುರಿತು ರಾವಣನು ಪ್ರತ್ಯುತ್ತರವಂ ಹೇಳಿದನು.
ಓ ಪತ್ನಿಯೇ ಈ ಶಿಖರವಂ ತೆಗದುಕೊಂಡು ಹೋಗುವಿಕೆಯಂ ಕುರಿತು
ನಾನು ತಪವಂ ಮಾಡುವೆನು ॥೨೭॥ ಶಿವಾನುಗ್ರಹವಂ ಹೊಂದಿ ಈ ಶಿಖ

ವರ್ಷಸಹಸ್ರಾಂತೇಚೈಕದಾಶಿರಸಾಂನವ ॥ ಛಿತ್ವಾಸಮರ್ಚಯಾಮಾಸ
ಶಂಕರಂಭಕ್ತವತ್ಸಲಂ । ದಶಮಂತುಶಿರಶ್ಛೇತ್ತುಂ ಖಡ್ಗೇನೋದ್ಯುಕ್ತವಾಂ
ಸ್ತದಾ ॥ ತಸ್ಮಿಂಸ್ತುಸಮಯೇಶಂಭುಃಪ್ರಸನ್ನೋಭೂತ್ಸುರದ್ವಿಷಃ । ಕರಂ
ಗೃಹೀತ್ವಾವೇಗೇನಪ್ರೋವಾಚಪರಯಾಮುದಾ ॥೨೮॥ ತಪಸಾನೇನತುಷ್ಟೋ
ಸ್ಮಿದಶಾನನವರಂವೃಣು । ಛಿನ್ನಾನಿತೇಭವಿಷ್ಯಂತಿತ್ವದತ್ಪೂರ್ವತೀಪತೀಃ॥
ತದ್ವಾಕ್ಯಮಾಕರ್ಣ್ಯದಶಾನನೋಪಿಪ್ರಣಮ್ಯಗೌರೀಶಮುವಾಚತುಷ್ಟಂ ।
ಕೈಲಾಸಶೃಂಗಂಮಮದೇವದೇಹಿತ್ರಿಲೋಚನತ್ವಂಮಮಚೇತ್ಪ್ರಸನ್ನಃ ॥೨೯॥
ತದೀಯ್ಯವಾಕ್ಯಂಗರಳೋಪಮಾನಂಶ್ರುತ್ವಾಪುನರ್ವಾಕ್ಯಮುವಾಚಶಂಭುಃ।
ಇದಂಮಮಜ್ಯೋತಿರಹಂದದಾಮಿಕಥಂನುಧಾರ್ಯಂಮಮಸರ್ವಶಕ್ತಿಃ।೩೦
ನಧಾರ್ಯತೆಪದ್ಮಭುವಾ ಮಯಾಪಿರಮಾಧಿನಾಥೇನಚದುಸ್ಸಹಂತತ್ ॥೩೧॥
ಸಾಮರ್ಥ್ಯಮಸ್ತಿಚೇಚ್ಛೃಂಗಂಧರ್ತುಂತವದದಾಮ್ಯಹಂ। ಗೃಹೀಷ್ವಮ
ಮತಚ್ಛೃಂಗಂಭೂಮಾಕ್ಷಿಪ್ತಂನಶಕ್ಯತೆ । ಆಹರ್ತುಂಚಮಯಾಸತ್ಯಂತ್ವ
ಯಾಕಿಂಕಥಯಾಮ್ಯಹಂ। ಇತ್ಯುಕ್ತ್ವಾಂತರ್ದಧೇರುದ್ರೋರಾವಣಃಶೃಂಗಮ

ರವಂ ತರುತ್ತೇನೆ. ನೀನೀ ವಿಮಾನದಲ್ಲಿಯೇ ಕುಳಿತು ಲಂಕಾಪಟ್ಟಣಕ್ಕೆ
ಹೋಗೆಂದಾ ॥೨೮॥ ಆಕೆಯಂ ಕೇಳುತ ತಾನುತ್ತಮವಾದ ತಪವಂ ಮಾ
ಡಿ ದಿವ್ಯ ಸಹಸ್ರ ವರ್ಷಗಳ ಕಡೆಯಲ್ಲಿ ಒಂದು ಸಮಯದಲ್ಲಿ ಒಂಭತ್ತು
॥೨೯॥ ಶಿರಸ್ಸುಗಳಂ ಕತ್ತರಿಸಿ ಭಕ್ತವತ್ಸಲನಾದ ಈಶ್ವರನಂ ಅರ್ಚಿಸಿ
ಹತ್ತನೇ ಶಿರಸ್ಸನ್ನು ಖಡ್ಗದಿಂದ ಕತ್ತರಿಸುವದಕ್ಕೆ ಉದ್ಯುಕ್ತನಾಗಲಾಗ
॥೩೦॥ ಶಿವನು ಪ್ರಸನ್ನನಾಗಿ ದೇವಶತ್ರುವಾದ ರಾವಣಾಸುರನ ಕರವಂ ವೇ
ಗದಿಂ ಪಿಡಿದು ಪರಮ ಸಂತೋಷದಿಂ ನುಡಿದನು ॥೩೧॥ ಓ ದಶಾಸ್ಯನೇ,
ನಿನ್ನ ತಪದಿಂ ಸಂತುಷ್ಟನಾದೆನು, ವರವಂ ಬೇಡು. ಕತ್ತರಿಸಿದ ನಿನ್ನ ತ
ಲೆಗಳು ಯಥಾಪ್ರಕಾರವಾಗಿ ಹುಟ್ಟುತ್ತವೆಂದು ಹೇಳದ ॥೩೨॥ ಶಿವನ ವ
ಚನವಂ ಕೇಳಿ ರಾವಣನು ನಮಸ್ಕರಿಸಿ ಸಂತುಷ್ಟನಾದ ಹರನಂ ಕುರಿತಿಂ
ತೆಂದನು. ಓ ದೇವನೇ, ಎನಗೆ ನೀ ಪ್ರಸನ್ನನಾದರೆ ಕೈಲಾಸ ಶಿಖರವಂ
ಕೊಡೆಂದು ಬೇಡಿದ ॥೩೩॥ ಆ ರಾವಣ ವಾಕ್ಯವಂ ವಿಷಕ್ಕೆ ಸಮವಾಗಿ ಕೇ
ಳಿ ಮತ್ತಾ ಶಿವನಿಂತೆಂದಂ, ಓ ರಾವಣನೆ, ನನ್ನ ಜ್ಯೋತಿ ಸ್ವರೂಪವಾದೀ
ಶಿಖರವಂ ಹ್ಯಾಗೆ ಕೊಡಲಿ, ನನ್ನ ಸರ್ವಶಕ್ತಿಸ್ವರೂಪವಾದೀ. ಶಿಖರವಂ
ಹ್ಯಾಗೆ ಧರಿಸುತ್ತಿ, ಬ್ರಹ್ಮನಿಂದಲೂ, ನನ್ನಿಂದಲೂ, ವಿಷ್ಣುವಿನಿಂದಲೂ, ಎ
ತ್ತಲಶಕ್ಯವಾದದ್ದು ॥ ... ... ॥೩೪॥

ಗೃಹೀತ್ ॥ ೩೪ ॥ ಪುಷ್ಪಕಾನಂತುಸಂಸ್ಮೃತ್ಯತತ್ರಸ್ಥಿತ್ವಾಪ್ರಗೃಹ್ಯಚ । ದುರಾತ್ಮಾಗತವಾಂಛೀಘ್ರಂಕಂಪತೇಗಿರಿಜಾತದಾ ॥ ೩೫ ॥ ಭೂಮಿಶ್ಚಕಂಪತೇಲೋಕಾಶ್ಚಲಂತಿಗಿರಯಸ್ತದಾ । ತಂದೃಷ್ಟ್ವಾವಿಷ್ಣುರಾಗತ್ಯವೈನತೇಯಂಚಸತ್ವರಂ ॥ ೩೬ ॥ ಆಹೂಯೋವಾಚಗರುಡಂಕೃಪಯಾಶ್ರೀಪತಿಸ್ತದಾ । ದುಷ್ಟಚಿತ್ತೋನಮತ್ತೋನದಶಾಸ್ಯೋನಾಶಶೂಲಿನಂ ॥ ೩೭ ॥ ತೋಷಯಿತ್ವಾತುತತಸ್ಸೋಕೈಲಾಸಶಿಖರಂತದಾ । ಗೃಹೀತವಾಧ್ಯಕುಗುಣಸುಪರ್ಣತ್ವಂಮಹಾಬಲ ॥ ೩೮ ॥ ಪ್ರಚಂಡವಾಯುನಾಸಾಕಂ ವಿಘ್ನಂಚರಿತುಮರ್ಹಸಿ । ತತಶ್ಶೀಘ್ರಸಮುತ್ತಾಯ ಖಗೇಂದ್ರೋತಿಪರಾಕ್ರಮಃ ॥ ೩೯ ॥ ಚಂಡಾನಿಲೇನಸಹಿತೋ ನತ್ವಾನಾಥಸಮವ್ಯಯಂ । ಕರಿಷ್ಯಾಮಿತಥಾಸ್ವಾಮಿ ತವೇದಾನೀಂನಯಾಮ್ಯಹಂ ॥ ೪೦ ॥ ಇತ್ಯುಕ್ತ್ವಾಖಗನಾಗೇಣತತ್ರಗತ್ವಾತಿವೇಗತಃ । ಪಕ್ಷಸಂಭೂತವಾತೇನಸತಚ್ಛೃಂಗಮಪಾತಯತ್ ॥ ೪೧ ॥ ಕಪಿಲಾಕೌಂಡಿನೀಮಧ್ಯೇದಶಾಸ್ಯಾಚ್ಛೀಘ್ರಮೇವಹಿ । ತಂದೃಷ್ಟ್ವಾಸಹಸಾಗತ್ಯಪೌಲಸ್ತ್ಯಃಕುಪಿತಸ್ತದಾ ॥ ೪೨ ॥ ವಿಘ್ನಮಾಚರಿತಂಕೇನದೃಷ್ಟಂಚೇತ್ಪ್ರಹರಾ

ಎಲೈ ರಾವಣನೆ, ಈಶೃಂಗವಂ ಹೊರುವದಕ್ಕೆ ನಿನಗೆ ಸಾಮರ್ಥ್ಯವಿದ್ದರೆ, ನಾನು ಕೊಡುತ್ತೇನೆ ಹಿಡಿ. ನನ್ನ ಶೃಂಗವನ್ನ ಭೂಮಿಯಲ್ಲಿಡಕೂಡದು ॥ ೩೫ ॥ ಆಶೃಂಗವನ್ನ ತೆಗಿಯುವದಕ್ಕೆ ನನ್ನಿಂದಲೆ ಆಗದು. ನಿನ್ನಿಂದಾ ಹ್ಯಾಗೆ ಆದೀತು, ನಾನು ಏನು ಹೇಳಲಿ, ಇತೆಂದು ಹೇಳಿ, ಪರಮೇಶ್ವರನು ಅಂತರ್ಧಾನವಾಗಲು. ಆ ಶಿಖರವಂ ತೆಗದು ॥ ೩೬ ॥ ಪುಷ್ಪಕವಂ ಸ್ಮರಿಸಲು, ಬಂದ ಪುಷ್ಪಕದಲ್ಲೀ ಶಿಖರವಂ ಇರಿಸಿ, ದುರಾತ್ಮನಾದ ರಾವಣನು ಶೀಘ್ರವಾಗಿ ಹೋಗಲು, ಪಾರ್ವತಿಯು ಗಡಗಡನೆ ನಡುಗಿದಳು ॥ ೩೭ ॥ ಭೂಮಿಯು, ಲೋಕಗಳು, ಪರ್ವತಗಳು, ನಡುಗಿದವು. ಆ ರಾವಣನಂ ನೋಡಿ ವಿಷ್ಣುವು ಬಂದು ಶೀಘ್ರವಾಗಿ ಗರುಡನಂ ಕರದು ॥ ೩೮ ॥ ಕೃಪೆಯಿಂದಿಂತೆಂದನು. ದುಷ್ಟ ಚಿತ್ತನಾಗಿಯು, ಮತ್ತನಾಗಿಯು, ಇರುವ ರಾವಣನು ಮಹಾ ದೇವನಂ ಸಂತೋಷಪಡಿಸಿ ಕೈಲಾಸ ಶಿಖರವಂ ತೆಗದುಕೊಂಡನು ॥ ೩೯ ॥ ಮಹಾ ಬಲಶಾಲಿಯಾದ ನೀನು ಪ್ರಚಂಡ ವಾಯುವಿನಿಂದ ವಿಘ್ನವಂ ಮಾಡಲಿಕ್ಕೆ ಸಮರ್ಥನೆನಲು, ಅತಿಪರಾಕ್ರಮಿಯಾದ ಗರುಡನು ಶೀಘ್ರದಿಂದೆದ್ದು ॥ ೪೦ ॥ ಚಂಡ ವಾಯುವಿನಿಂದ ಕೂಡಿದವನಾಗಿ ರಮಾಪತಿಗೆ ನಮಸ್ಕರಿಸಿ ಹಾಗೆಯೇ ಮಾಡುವೆನೆಂದು, ಈಗಲೇ ಆ ಶಿಖರವಂ ತರುವೆನೆಂತಲು ॥ ೪೧ ॥ ಹೇಳಿ, ವಾಯು ಮಾರ್ಗದಿಂದತಿವೇಗವಾಗಿ ಹೋಗಿ

ವ್ಯಹಂ । ಇತ್ಯಾಗ್ರಹೇಣ ತಚ್ಛೃಂಗ ಮಾಕರ್ತುಂ ಬಹುಬಾಹುಭಿಃ ॥೪೩॥
ಸ್ಪೃಷ್ಟವಾನ್ ಬಹುಕಾಲಂ ತು ಸ್ಮೃತ್ವಾ ಶಿವವಚೋಯಯೌ ॥೪೪॥ ತತಸ್ಸು
ಪರ್ಣಸ್ಸಹಸಾ ಸಮಾಗತಸ್ತದೀಯಶೃಂಗಗ್ರಹಣಾರ್ಥಮುದ್ಯತಃ । ತೇನಾಪ್ಯ
ಶಕ್ಯಗ್ರಹಣೇನ ಗತ್ವಾ ತತ್ಪೈಕುಂಠನಾಥಸ್ಯ ಪದಾಂಬುಜದ್ವಯಂ ॥೪೫॥ ನಿವೇ
ದಿತಂ ತೇನ ತದೀಯ ಕೃತ್ಯಂ ಶ್ರೀವಿಷ್ಣವೇ ನ್ಯಸ್ಯ ಪದಾಸನಸ್ಯ । ಹರಿಸ್ತದಾಕರ್ಣ್ಯ
ಚ ಕಾರಣಾರ್ಥಂ ಸುಪರ್ಣ ತತ್ತಿಷ್ಠತು ಶೂಲಪಾಣಿಃ ॥೪೬॥ ಮಮಾಪಿ ತತ್
ಕ್ಷೇತ್ರಮನುತ್ತಮಂ ಮಹೀನಿವಾಸಯೋಗ್ಯಂ ಭುವಿ ಮುಕ್ತಿದಂ ತು । ಇತಿ ಪ್ರಗ
ಲ್ಭಂ ವಚನಂ ಹರೇಶ್ಚ ಶ್ರುತ್ವಾ ಜನತ್ವಾ ವಿನತಾಸುತಸ್ತಂ ॥೪೭॥ ತತಃ ಖಗೇಂ
ದ್ರೋ ವಿನಯಾನನಮ್ರಃ ಕೃತಾಂಜಲಿಸ್ತತ್ಪುರತಶ್ಚ ತಸ್ಥೌ । ಹರಿಸ್ತಮಾರುಹ್ಯ
ಸದಾಶಿವೇನ ವೃಷಾಧಿರೂಢೇನ ಶಿವಾಯುತೇನ ॥೪೮॥ ಕೇಶಿಗ್ರಹಾರ್ಥಂ ಮುನಿ
ಭಿರ್ನರೈಶ್ಚ ಸುರೈಶ್ಚ ಯಃ ಪ್ರಾರ್ಥಿತಪಾದಪದ್ಮಃ ॥೪೯॥ ಕಪಿಲಾತೀರಮಾಸಾ
ದ್ಯ ಯಾಗಾಗ್ನಿ ಕೇಶಿನಂ ಕ್ಷಣಾತ್ । ಹಾರಯಿತ್ವಾ ಮಹೇಶಾನಸ್ಸ್ಯೈವಪತಿಶಿ
ಖರೇ ಸ್ಥಿತಃ ॥೫೦॥ ಶ್ರೋಪಿ ತತ್ರ ನ್ಯವಸತ್ತಚ್ಛೃಂಗೇ ನಿವಸಾವ್ಯಹಂ । ಭೋಕ್ತೃ

ಪಕ್ಷಗಳಿಂದಾವ ಘಾಳಿಯಿಂದಾ ಶಿಖರವು ॥೪೨॥ ಕಪಿಲಾ ಕೌಂಡಿನೀ ಮ
ಧ್ಯದಲ್ಲಿ ಕೆಡಹಿದವನು. ಅದನ್ನ ನೋಡಿ ಶೀಘ್ರವಾಗಿ ಬಂದು ರಾವಣನು
ಕೋಪಿಷ್ಠನಾಗಿ ॥೪೩॥ ಯಾರು ವಿಘ್ನವಂ ಮಾಡಿದವನು, ನೋಡಿದರೆ ಕೊಂ
ದು ಬಿಡುವೆನೆಂದು ಕೋಪದಿಂದಾ ಶಿಖರವಂ ಎತ್ತಲಿಕ್ಕೆ ಭುಜಗಳಿಂದ ತುಂ
ಬಾ ಹೊತ್ತು ಕದಲಿಸಿ ಶಿವನು ಹೇಳಿದ್ದ ವಾಕ್ಯವಂ ಸ್ಮರಿಸಿಕೊಂಡು
ಹೊರಟು ಹೋದನು ॥೪೪॥ ಅನಂತರ ಗರುಡನು ಶೀಘ್ರವಾಗಿ ಬಂದು ಆ
ಶ್ಚರ್ಯಕರವಾದಾ ಶಿಖರವಂ ಎತ್ತಲಶಕ್ಯನಾಗಿ ಹರಿಯ ಪಾದಗಳಂ ಕು
ರಿತು ಹೋದನು ॥೪೫॥ ಆ ವಿಷ್ಣುವಿಗೆ ಆ ದಶಾಸ್ಯನ ಕೃತ್ಯವನ್ನ ತಿಳಿಸಲು
ಗರುಡನಿಂದಾ ಹರಿಯು ಕೇಳಿ, ಓ ಗರುಡನೆ ಈಶ್ವರನಿಗೆ ಒಂದು ಕಾರಣಾ
ರ್ಥವಾಗಿ ಆ ಶಿಖರವಿರಲಿ ॥೪೬॥ ನನಿಗೂ ಆ ಉತ್ತಮವಾದ ಕ್ಷೇತ್ರವು
ಭೂಮಿಯಲ್ಲಿ ವಾಸಯೋಗ್ಯವಾದದ್ದು, ಜನರಿಗೆ ಮುಕ್ತಿಪ್ರದವಾದದ್ದು, ಇಂ
ತೆಂದು ಹೇಳಿದ ಶ್ರೀಹರಿಯ ಪ್ರಗಲ್ಭ ವಚನವಂ ಕೇಳಿ ಗರುಡನು ॥೪೭॥
ವಿನಯದಿಂದಾ ನಂಮ್ರನಾಗಿ ಕೈ ಮುಗಿದು ಸಮೀಪದಲ್ಲಿ ನಿಂತನು. ಶ್ರೀಹ
